# ಕನ್ನಡ ವಿಶ್ವವಿದ್ಯಾಲಯ ಹಂಪಿ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ವಿದ್ಯಾರಣ್ಯ-583 276



ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ

2017-2018

ವಿಷಯ

# ಶಿರಾ ತಾಲ್ಲೂಕಿನ ಜಾತ್ರಾಮಹೋತ್ಸವಗಳು

ಸಂಶೋಧನಾ ವಿದ್ಯಾರ್ಥಿ

ಕಿಮ್‌ಶುಖ. ಈ.ಪಿ.

ನೋಂದಣಿ ಸಂಖ್ಯೆ: 172001030035

## ಮಾರ್ಗದರ್ಶಕರು

ಡಾ||. ಶೀಲಾದೇವಿ ಎಸ್.ಮಳೀಮಠ

ಕನ್ನಡ ವಿಭಾಗದ ಮುಖ್ಯಸ್ಥರು

ಬಿ.ಎಂ.ಎಸ್.ಮಹಿಳಾ ವಿದ್ಯಾಲಯ

ಬಸವನಗುಡಿ.ಬೆಂಗಳೂರು-560004

## ಮಾನ್ಯತಾ ಸಂಸ್ಥೆ

ಕನ್ನಡ ಸಾಹಿತ್ಯ ಪರಿಷತ್ತು,

ಚಾಮರಾಜಪೇಟೆ, ಬೆಂಗಳೂರು-560 018.

# ಕನ್ನಡ ವಿಶ್ವವಿದ್ಯಾಲಯ ಹಂಪಿ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ವಿದ್ಯಾರಣ್ಯ–583 276



ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ

**2017-2018**

ವಿಷಯ

# ಶಿರಾ ತಾಲ್ಲೂಕಿನ ಜಾತ್ರಾಮಹೋತ್ಸವಗಳು

ಸಂಶೋಧನಾ ವಿದ್ಯಾರ್ಥಿ
ಕಿಮ್‌ಶುಖ. ಈ.ಪಿ.

ನೋಂದಣಿ ಸಂಖ್ಯೆ: 172001030035

ಮಾರ್ಗದರ್ಶಕರು

ಡಾ॥. ಶೀಲಾದೇವಿ ಎಸ್.ಮಳೀಮಠ
ಕನ್ನಡ ವಿಭಾಗದ ಮುಖ್ಯಸ್ಥರು
ಬಿ.ಎಂ.ಎಸ್.ಮಹಿಳಾ ವಿದ್ಯಾಲಯ
ಬಸವನಗುಡಿ.ಬೆಂಗಳೂರು–560004

ಮಾನ್ಯತಾ ಸಂಸ್ಥೆ
ಕನ್ನಡ ಸಾಹಿತ್ಯ ಪರಿಷತ್ತು,
ಚಾಮರಾಜಪೇಟೆ, ಬೆಂಗಳೂರು–560 018.

# ಅಭ್ಯರ್ಥಿಯ ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ 2017–18 ನೇ ಸಾಲಿನಲ್ಲಿ ಶಿರಾ ತಾಲ್ಲೂಕಿನ ಜಾತ್ರಾ ಮಹೋತ್ಸವಗಳು ಎಂಬ ಶೀರ್ಷಿಕೆಯ ಈ ನಿಬಂಧವನ್ನು ಡಾ॥ ಶೀಲಾದೇವಿ ಎಸ್. ಮಳೀಮಠ ಇವರ ಮಾರ್ಗದರ್ಶನದಲ್ಲಿ ಸಿದ್ದಪಡಿಸಿ ಸಲ್ಲಿಸುತ್ತಿದ್ದೇನೆ.

ಈ ನಿಬಂಧವು ನನ್ನ ಸ್ವಂತ ಬರವಣಿಗೆಯಾಗಿದ್ದು, ಇದರ ಯಾವುದೇ ಭಾಗವನ್ನು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಕಿಮ್‌ಶುಖಿ. ಈ.ಪಿ

ಸಂಶೋಧನಾ ವಿದ್ಯಾರ್ಥಿ

ಸ್ಥಳ : ಬೆಂಗಳೂರು

ದಿನಾಂಕ : 06/09/2018

ಕಿಮ್‌ಶುಖಿ ಈ.ಪಿ

# ಮಾರ್ಗದರ್ಶಕರ ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ,ಫಿಲ್. ಪದವಿಗಾಗಿ 2017–18 ನೇ ಸಾಲಿನಲ್ಲಿ ಶಿರಾ ತಾಲ್ಲೂಕಿನ ಜಾತ್ರಾ ಮಹೋತ್ಸವಗಳು ಎಂಬ ಶೀರ್ಷಿಕೆಯಲ್ಲಿ ಈ ನಿಬಂಧವನ್ನು ಕಿಮ್‌ಶುಖಿ. ಈ.ಪಿ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ದಪಡಿಸಿ ಸಲ್ಲಿಸುತ್ತಿದ್ದಾರೆ.

ಈ ನಿಬಂಧವು ಈವರೆವಿಗೂ ಬೇರೆಲ್ಲೂ ಪ್ರಕಟಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಬೆಂಗಳೂರು
ದಿನಾಂಕ : 06-09-2018

ಶೀ ಮಳೀಮಠ
ಮಾರ್ಗದರ್ಶಕರು
ಡಾ॥ ಶೀಲಾದೇವಿ ಎಸ್.ಮಳೀಮಠ
ಕನ್ನಡ ವಿಭಾಗದ ಮುಖ್ಯಸ್ಥರು
ಬಿ.ಎಂ.ಎಸ್ ಕಾಲೇಜು, ಬಸವನಗುಡಿ
ಬೆಂಗಳೂರು–560004

ಡಾ. ಶೀಲಾದೇವಿ ಎಸ್. ಮಳೀಮಠ
ಸಹಪ್ರಾಧ್ಯಾಪಕರು, ಕನ್ನಡ ವಿಭಾಗ,
ಬಿಎಂಎಸ್ ಮಹಿಳಾ ವಿದ್ಯಾಲಯ,
ಬಸವನಗುಡಿ, ಬೆಂಗಳೂರು – 560004.

# ಪರಿವಿಡಿ



## ಅನುಬಂಧ

# ಶಿರಾ ತಾಲ್ಲೂಕಿನ
# ಜಾತ್ರಾ ಮಹೋತ್ಸವಗಳು



# ಅಧ್ಯಾಯ-1
## ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ.

ಭಾರತಕೃಷಿ ಪ್ರಧಾನ ದೇಶ, ಕೃಷಿಯೇ ರೈತನ ಜೀವನಾಡಿ ಕೃಷಿ ಕಾರ್ಯದಲ್ಲಿ ತನ್ನನ್ನು ತಾನು ಅರ್ಪಿಸಿಕೊಂಡ ರೈತನೇ ನಮ್ಮೆಲ್ಲರ ಅನ್ನದಾತ, ಶ್ರಮ ಜೀವಿಯಾದ ರೈತ ಕೃಷಿ ಕಾಯಕದ ಜೊತೆ ಸಂಪ್ರದಾಯ, ಆಚರಣೆ, ನಂಬಿಕೆ, ಮನರಂಜನೆ, ಹೀಗೆಅನೇಕ ಸಂಸ್ಕೃತಿಯನ್ನು ತನ್ನಲ್ಲಿ ಅಳವಡಿಸಿಕೊಂಡಿದ್ದಾನೆ. ಕಾಯಕಯೋಗಿಯಾದ ರೈತ ತನ್ನ ಕಾಯಕವಾದ ಕೃಷಿಯನ್ನು ನಿಷ್ಠಾವಂತನಾಗಿ ಮಾಡುತ್ತಾ ತನ್ನ ಇಡೀ ಜೀವನದ ಶ್ರಮವನ್ನು ಭೂತಾಯಿಗೆ ಅರ್ಪಿಸುವಂತಹ ನಿಸ್ವಾರ್ತಿ. ರೈತ ತನ್ನ ಜೀವನದಲ್ಲಿ ಅತ್ಯಂತ ಭಕ್ತಿ ಭಾವದಿಂದ ದೇವರ ಮೋರೆ ಹೋಗುತ್ತಾನೆ.

ಪ್ರಕೃತಿಯಲ್ಲಿ ನೆಡೆಯುವ ಪ್ರತಿ ಘಟನೆಯು ತುಂಬ ಭಯ ಭಕ್ತಿಯಿಂದ ವಿವೇಚನಾಶೀಲನಾಗಿ ನೋಡುತ್ತಾನೆ.

ಈಡೀ ವರ್ಷ ತನ್ನ ಕೃಷಿ ಕಾಯಕದಲ್ಲಿ ತೊಡಗಿಕೊಂಡು ಬೆಳೆ ಬೆಳೆದ ಫಸಲನ್ನು ರಾಶಿ ಹಾಕಿ ಸುಗ್ಗಿ ಪೂಜೆ ಮಾಡುವ ಪದ್ಧತಿ ರೈತಾಪಿ ಜನರ ಸಂಸ್ಕೃತಿ, ರೈತ ತನ್ನ ಸಂಸ್ಕೃತಿಯಲ್ಲಿ ಜಾತ್ರೆ ದೇವರ ಉತ್ಸವಗಳನ್ನು ಆಚರಿಸುತ್ತಾ ಒಂದು ಸಂಪ್ರದಾಯವಾಗಿ ಪರಂಪರೆಯಿಂದ ಮಾಡಿಕೊಂಡು ಬಂದಿದ್ದಾನೆ.ಹೀಗೆ ದೇವರ ಸೇವೆಯ ಜೊತೆಯಲ್ಲಿ ತನ್ನ ಸಂಕಷ್ಠಗಳನ್ನು ಹಂಚಿಕೊಂಡು ಬಂದಿದ್ದಾನೆ. ಜನಪದರಲ್ಲಿ ದೇವರ ಬಗೆಗೆ ಆಚರಣೆ ನಂಬಿಕೆಗಳಿಗೆ ಅನೇಕ ನೈಜ ಘಟನೆಗಳ ಕಾರಣಗಳನ್ನು ನಂಬಿ ಬದುಕಿನಲ್ಲಿ ದೇವರನ್ನು ನಂಬುತ್ತಿದ್ದರು ಹಾಗೂ ಈಗಲೂ ನಂಬುತ್ತಿರುವರು. ಒಟ್ಟನಲ್ಲಿ ರೈತರು ದೇವರ ಬಗೆಗೆ ನಂಬಿಕೆ, ಆಚರಣೆ, ಭಕ್ತಿ, ಉತ್ಸವಗಳನ್ನು ಪರಂಪರೆಯಿಂದ (ಪಾರಂಪರ್ಯವಾಗಿ) ಅನುಸರಿಸುತ್ತಾ ಬಂದಿದ್ದಾರೆ.

ರೈತನ ಬದುಕಿನಲ್ಲಿ ಕಷ್ಟದ ಸಂದರ್ಭದಲ್ಲಿ ಎದುರಾಗುವ ಸಮಸ್ಯೆಯನ್ನು ಪರಿಹರಿಸಲು ದೇವರ ಮೊರೆ ಹೋಗುವಂತಹದ್ದು ಸಹಜ ರೈತನ ಜೀವನಾಡಿ ಆಗಿರುವ ಎತ್ತುಗಳು ಸಹ ಇಲ್ಲಿ ದೇವರ ಪ್ರತಿರೂಪವಾಗಿ ಪೂಜಿಸಲ್ಪಡುತ್ತವೆ. ಹೀಗೆ ರೈತನಿಗೆ ತನ್ನ ವ್ಯವಸಾಯದ ಕೆಲಸಕ್ಕೆ ಬೇಕಾದ ಸಲಕರಣೆಗಳನ್ನು ಆತ ಭಕ್ತಿಯಿಂದ ನೋಡುವುದನ್ನು ಕಾಣಬಹುದು.(ರೈತನ ಜೀವನಾಡಿ ಆಗಿರುವ ಎತ್ತುಗಳನ್ನು ಮಣ್ಣಿನ ಮೂರ್ತಿ ಮಾಡಿ ಪೂಜಿಸುವ ಹಬ್ಬ ಮಣ್ಣೆತ್ತಿನ ಅಮಾವಾಸ್ಯೆ) ಜಾತ್ರೆ ಹಳ್ಳಿಗರ ಜೀವನದ ಒಂದು ಭಾಗವಾಗಿದೆ.ಜಾತ್ರೆ ಎಂದರೆ. ಎಲ್ಲರಿಗೂ ಸಡಗರ ಸಂಭ್ರಮದ ತಾಣ ಎಷ್ಟೋ ಸಂಬಂಧಗಳು ಒಂದಾಗುವ (ಸಂಗಮ) ಐಕ್ಯ ಸ್ಥಳವಾಗಿವೆ. ಜಾತ್ರೆ ಕೇವಲ ಧಾರ್ಮಿಕ ಕೇಂದ್ರವಷ್ಟೇ ಅಲ್ಲ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಕೇಂದ್ರಗಳಾಗಿ ಜನರ ಮನ್ನಣೆಗಳಿಸಿದೆ.ಧಾರ್ಮಿಕ ಕ್ಷೇತ್ರಗಳಾದ ಈ ಜಾತ್ರೆಗಳು ಮಾನವ ಸಮುದಾಯದ ಕಲ್ಯಾಣವನ್ನೇ ಬಯಸುವುದರ ಜೊತೆಗೆ ಆತ್ಮೀಯ ಸಂಬಂಧವನ್ನು ಬೆಸೆಯುವಂಥ ಪ್ರಯತ್ನ ನೆಡೆಯುತ್ತಿವೆ.

ದೇವರನ್ನು ಒಲಿಸಿಕೊಳ್ಳಲು ಇರುವ ಮಾರ್ಗವೇ ಹರಕೆಯನ್ನು ದೇವರಿಗೆ ಸಮರ್ಪಿಸುವುದು.ಜನರ ಅನುಕೂಲಗಳಿಗೆ ತಕ್ಕಂತೆ ಹರಕೆಯನ್ನು ದೇವರಿಗೆ ಅರ್ಪಿಸುವುದರ ಮೂಲಕ ದೇವರ ಕೃಪೆಗೆ ಪಾತ್ರರಾಗುತ್ತಾರೆ. ಹೀಗೆವೈವಿಧ್ಯಮಯ ಆಚರಣೆಗಳನ್ನು ರೂಢಿಸಿಕೊಂಡಿದ್ದಾರೆ.ಜಾತ್ರೆಗಳ ಮೂಲಕ ದೇವರ ಬಗ್ಗೆ ಭಕ್ತಿ, ಶ್ರದ್ಧೆ, ನಿಷ್ಠೆಯನ್ನು ಹೊಂದಿರುವವರಾಗಿರುತ್ತಾರೆ.

ಇಡೀ ಗ್ರಾಮ ಜಾತ್ರೆಯ ವೈಭವದ ಸಡಗರ ಸಂಭ್ರಮದಲ್ಲಿ ಕಂಗೊಳಿಸಿತ್ತಿರುತ್ತದೆ.ಹಾಗೆಯೇ ಮನೆಯಲ್ಲಿ ನೆಂಟರು, ರಕ್ತ ಸಂಬಂಧಿಗಳು, ಸ್ನೇಹಿತರು ಎಲ್ಲಾ ಸೇರಿ ಹಬ್ಬದ ವಾತಾವರಣ ನಿರ್ಮಾಣವಾಗಿರುತ್ತದೆ. ಈ ಸಡಗರ ಸಂಭ್ರಮದಲ್ಲಿ ಜನರ ಸಂತೋಷ ಮುಗಿಲು ಮುಟ್ಟಿರುತ್ತದೆ.

ವೈಜ್ಞಾನಿಕ ತಂತ್ರಜ್ಞಾನದ ಈ ಯುಗದಲ್ಲಿ ಜಾತ್ರೆಗಳು ಹೊಸ ರೂಪವನ್ನು ತಾಳುತ್ತಿವೆ. ಹೊಸ ಆವಿಷ್ಕಾರದ ಯಂತ್ರೋಪಕರಣಗಳ ಬಳಕೆ ಈ ಆಧುನಿಕ ಯುಗದಲ್ಲಿ ಕಾಣಬಹುದಾಗಿದೆ.ಶಿಲಾಯುಗದಿಂದ ಯಂತ್ರಗಳಯುಗದವರೆಗೂ ಅನೇಕ ಮೈಲುಗಲ್ಲುಗಳನ್ನು ದಾಟಿ ಹೊಸ ರೂಪವನ್ನು ಪಡೆಯುತ್ತಾ ಬದಲಾವಣೆಯ ಗಾಳಿ ಬೀಸುತ್ತಾ ಸಾಗುತ್ತಿದೆ.ಇದು ನಿಂತ ನೀರಲ್ಲ ನಿರಂತರವಾಗಿ ಹರಿಯುವ ನೀರಾಗಿದೆ.ಈ ಬದಲಾವಣೆಯೇ ಈ ಜಗದ ನಿಯಮ, ಮನುಷ್ಯ ಬದಲಾವಣೆಯನ್ನು ಬಯಸುವ ಬುದ್ಧಿ ಜೀವಿ.

## ಅಧ್ಯಾಯ-2
## ಜಾತ್ರಾ ಮಹೋತ್ಸವಗಳ ಉಗಮ, ವಿಕಾಸ ಮತ್ತು ಮಹತ್ವ

ಭೂಮಿಯ ಉಗಮದ ನಂತರ ಮಾನವ ಮತ್ತು ಪ್ರಕೃತಿಯ ನಡುವಿನ ನಿಕಟವಾದ ಸಂಪರ್ಕ, ಪ್ರಕೃತಿಯ ಘಟನೆಗಳು ಆದಿಮಾನವನ ಮೇಲೆ ಉಂಟು ಮಾಡಿದಂತಹ ಪರಿಣಾಮವಾಗಿ ಆತನಲ್ಲಿ ಉಂಟಾದಂತಹ ಭಯ, ಭಕ್ತಿಯ ಸ್ವರೂಪವನ್ನು ತಾಳುತ್ತದೆ.

ನಿಸರ್ಗದ ಅಧ್ಬುತ ಶಕ್ತಿ ಮಾನವನ ದಿನನಿತ್ಯದ ಘಟನೆಗಳ ಮೇಲೆ ಪ್ರಭಾವ ಬೀರಿ ಹಂತ ಹಂತವಾಗಿ ಅವನ ಮನಸ್ಸಿನಲ್ಲಿ ಆಳದಲ್ಲಿ ನಿಸರ್ಗದ ಬಗ್ಗೆ ಪ್ರೀತಿ, ಗೌರವ, ಪವಿತ್ರ, ಮನೋಭಾವನೆಗಳು ಬೆಳೆಯುತ್ತಾ ಸಾಗಿದ್ದವು.ಈಗೆ ದಿನಕಳೆದಂತೆ ಅವನ ಮನಸ್ಸಿನಲ್ಲಿ ದೈವೀ ಶಕ್ತಿಯ ರೂಪವನ್ನು ಸೃಷ್ಠಿಸಿಕೊಂಡು ಒಂದು ಕಲ್ಲಿನ ರೂಪದಲ್ಲಿ ದೇವರನ್ನು ಪೂಜಿಸಲ್ಪಡುತ್ತಾ ತನ್ನ ಭಯ ಮತ್ತು ಕೋರಿಕೆಯನ್ನು ದೇವರ ಮುಂದೆ ನಿವೇದಿಸಿಕೊಳ್ಳತ್ತಿದ್ದನು.

ದೇವರ ಪ್ರತಿಷ್ಠಾಪನೆಗೆ ಅನೇಕ ಕಥೆಗಳನ್ನು ಹೇಳುತ್ತಾ ತನ್ನ ಕನಸಿನಲ್ಲಿ ದೇವರು ಪ್ರತ್ಯಕ್ಷವಾಗಿ ತನ್ನನ್ನು ಈ ಸ್ಥಳದಲ್ಲಿ ಪ್ರತಿಷ್ಠಾಪಿಸಿ ಪೂಜಿಸಬೇಕೆಂಬ ದೇವರ ಆಜ್ಞೆಯ ಮೇರೆಗೆ ಆ ದೈವಕ್ಕೆ ಒಂದು ರೂಪ ಮತ್ತು ಹೆಸರು ಸೂಚಿಸಿ ಪ್ರತಿಷ್ಠಾಪಿಸಿರುವ ಐತಿಹ್ಯವನ್ನು ಕಾಣಬಹುದು.

ದೇವರ ಪ್ರತಿಷ್ಠಾಪನೆಯ ನಂತರ ದೇವರಿಗೆ ಗುಡಿ ಗೋಪುರಗಳನ್ನು ನಿರ್ಮಿಸಿ ಪೂಜಿಸಲ್ಪಟ್ಟ ನಂತರ ಈಡೀ ಸುತ್ತಮುತ್ತಲು ವಾಸಿಸುವ ಜನ ತಮ್ಮ ಕಷ್ಟ-ಕಾರ್ಪಣ್ಯಗಳನ್ನು ದೇವರ ಮುಂದೆ ಮನಸ್ಸಿನಲ್ಲಿ ಹೇಳಿಕೊಳ್ಳುತ್ತಾರೆ. ಹೀಗೆ ತಮ್ಮ ಬೇಡಿಕೆ ಈಡೇರಿಸಿದರೆ.ದೇವಸ್ಥಾನಕ್ಕೆ ಗಂಟೆ, ದೇವರ ಪೂಜಾ ಸಾಮಾಗ್ರಿಗಳು, ಹುಂಡಿಗೆ ಇಷ್ಟು ಪಾಲು ಹಣ, ಹಣ್ಣು-ಕಾಯಿ ತಂದು ಪೂಜೆ ಮಾಡಿಸುವುದಾಗಿ ತಮ್ಮ ಹರಕೆಯನ್ನು ತೀರಿಸುತ್ತಾರೆ.

ಹಬ್ಬ ಹರಿದಿನಗಳಲ್ಲಿ ದೇವರಿಗೆ ವಿಶೇಷವಾದ ಪೂಜೆ ಮಾಡಿಸಿ ಈಡೀ ಕುಟುಂಬ ಸಮೇತರಾಗಿ ದೇವಸ್ಥಾನಕ್ಕೆ ಬಂದು ಸ್ವಾಮಿಯ ಕೃಪೆಗೆ ಪಾತ್ರರಾಗುತ್ತಾರೆ.

ದಿನ ಕಳೆದಂತೆ ದೇವರ ಮೇಲೆ ಭಕ್ತಿ ಹೆಚ್ಚಾಗಿ, ದೇವರು ತಮ್ಮಕಷ್ಟ ಈಡೇರಿಸಿಯೇ ಈಡೇರಿಸುತ್ತಾನೆ, ಎಂಬ ನಂಬಿಕೆಯ ಮೇಲೆ ದೇವಸ್ಥಾನಕ್ಕೆ ಬರುವ ಜನರ ಸಂಖ್ಯೆ ಅಧಿಕವಾಗಿ ಹಬ್ಬದ ದಿನಗಳಲ್ಲಿ ದೇವರಿಗೆ ಮಾಡುತ್ತಿದ್ದ ಸೇವೆಗಳು, ಉತ್ಸವ, ಮೆರವಣಿಗೆಗಳು, ಕ್ರಮೇಣ ಜಾತ್ರೆಗಳಾಗಿ ಅಲಂಕಾರ ಭರಿತವಾದ, ದೇವರ ಮೂರ್ತಿಗಳನ್ನು ರಥದಲ್ಲಿ ಮೆರವಣಿಗೆ ಮಾಡುವ ಪದ್ಧತಿ ಆಚರಣೆಗೆ ಬಂದಿತ್ತು.


ಹೀಗೆವಿಜೃಂಭಣೆಯಿಂದ ಜಾತ್ರಾ ರಥೋತ್ಸವಗಳನ್ನು ಆಚರಿಸುವ ಸಂಪ್ರದಾಯ ಪರಂಪರಾಗತವಾಗಿ ಮಾಡಿಕೊಂಡು ಬಂದಿದ್ದಾರೆ.ಈ ದಿನ ಜನ ಭಕ್ತಿ ಶ್ರದ್ದೆಯಿಂದ ಜಾತ್ರೆಗಳಿಗೆ ಬಂದು ಹೋಗುತ್ತಾರೆ.ದೂರದ ಊರುಗಳಿಗೆ ವಲಸೆ ಹೋಗಿರುವ ಜನ ಕೂಡ ಹಾಗೂ ಗಂಡನ ಮನೆಗೆ ಹೋಗಿರುವ ಹೆಣ್ಣು ಮಕ್ಕಳು ಜಾತ್ರೆಯ ನೆಪದಲ್ಲಿ ತವರು ಮನೆಗೆ ಬರುವ ಅವಕಾಶ ಲಭಿಸುತ್ತದೆ.ಹೀಗೆಅಲಂಕಾರಿಕ ರಥೋತ್ಸವಗಳು ಜನರನ್ನು ತನ್ನತ್ತ ಆಕರ್ಷಿಸುವ ಶಕ್ತಿ ಪಡೆದುಕೊಂಡಿವೆ.

ಜನರ ಜೀವನದ ಒಂದು ಘಟ್ಟವಾಗಿ ಜಾತ್ರೆಗಳು ಹೆಚ್ಚು ಮಹತ್ವವನ್ನು ಪಡೆದುಕೊಂಡಿದೆ, ಜನ ತಾವು ಕಂಡು ಕೇಳಿದ ದೇವರ ಮಹಿಮೆಗಳನ್ನು ಅನೇಕ ಕಥೆ, ಹಾಡುಗಳ, ಮೂಲಕ ದೇವರ ಮೇಲಿನ ನಂಬಿಕೆಯನ್ನು ಇನ್ನೂ ಹೆಚ್ಚು ಧೃಢಪಡಿಸುತ್ತಿದ್ದಾರೆ. ಜಾತ್ರೆ ಕೇವಲ ರಥೋತ್ಸವದ ಮೆರವಣಿಗೆಗೆ ಸೀಮಿತವಾಗದೇ ಅನೇಕ ಮನರಂಜನಾ ಕಾರ್ಯಕ್ರಮಗಳನ್ನು ಆಯೋಜಿಸಿರುತ್ತಾರೆ.

ಊರಿನ ಪ್ರಮುಖ ಬೀದಿಗಳಲ್ಲಿ ರಥವನ್ನು ಎಳೆಯುವ ಸಂದರ್ಭದಲ್ಲಿ ರಥದ ಮುಂಭಾಗ ಅರೆ, ಡೊಳ್ಳುಕುಣಿತ, ವೀರಗಾಸೆ, ಗೊಂಬೆ ನೃತ್ಯ, ಕರಪಾಳ ಮೇಳಗಳಂತಹ ಜನಪದ ಕಲಾ ತಂಡದವರು ತಮ್ಮ ನೃತ್ಯ, ವೇಷಭೂಷಣ, ವಾದ್ಯಗಳ ಮೂಲಕ ಜನರ ಮನಸ್ಸನ್ನು ತಮ್ಮತ್ತ ಸೆಳೆಯುತ್ತಾರೆ.

ಹೀಗೆಜಾತ್ರೆಗಳು ಆರು-ಏಳು ದಿನಗಳ ಕಾಲ ವಿವಿಧ ಆಚರಣೆಯ ಮೂಲಕ ಜನರ ಆಕರ್ಷಣೆಯ ಕೇಂದ್ರಗಳಾಗಿವೆ.

# ಜಾತ್ರಾ ಮಹೋತ್ಸವಗಳ ಉಗಮ–ವಿಕಾಸ–ವೈಭವಿಕರಣಗೊಂಡ ಬಗ್ಗೆ ವಿಶ್ಲೇಶಣೆ



# ಅಧ್ಯಾಯ–3
# ಶಿರಾ ತಾಲ್ಲೂಕಿನ ಜಾತ್ರಾ ಮಹೋತ್ಸವಗಳ ಸಾಂಸ್ಕೃತಿಕ ನೋಟ

**ಪೀಠಿಕೆ:–**

ಕಾಡಿನಲ್ಲಿ ವಾಸಿಸುತ್ತಿದ್ದ ಮಾನವ ಸಂಘಜೀವಿಯಗಿ ನಾಡಿಗೆ ಬಂದು ತನ್ನದೇ ಸಮಾಜವನ್ನು ನಿರ್ಮಿಸಿಕೊಂಡ ನಂತರ ನಾಗರೀಕನಾಗಿ ಹಂತ ಹಂತವಾಗಿ ಅಭಿವೃದ್ಧಿಯ ಪಥದತ್ತ ಸಾಗುತ್ತಾ ತನ್ನದೇ ಆದ ಆಚರಣೆ, ವಿಚಾರ, ನಂಬಿಕೆ, ಸಂಪ್ರದಾಯ, ಸಂಸ್ಕೃತಿಯನ್ನು ರೂಢಿಸಿಕೊಂಡು ಜೀವಿಸುತ್ತಿದ್ದಾನೆ.

ಮಾನವನ ಬೆಳವಣಿಗೆಯ ಪ್ರತಿ ಹಂತದಲ್ಲಿಯೂ ಸಂಸ್ಕೃತಿಯನ್ನು ತನ್ನಲ್ಲಿ ಅಳವಡಿಸಿಕೊಂಡು ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳುತ್ತಿದ್ದಾನೆ.

ಸಾಂಸ್ಕೃತಿಕ ಕೇಂದ್ರಗಳಾದ ಜಾತ್ರೆಗಳು ಜನರಿಗೆ ತಮ್ಮ ಸ್ಥಳೀಯ ಜನಪದರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುವುದರ ಮೂಲಕ ಜಾತ್ರೆಗೆ ನೆರೆದ ಜನರು ಅದರಲ್ಲಿ ಭಾಗಿಯಾಗುತ್ತಾರೆ.ಜಾನಪದ ಸೊಗಡು ಜಾತ್ರೆಗಳ ಮೂಲಕ ಅನಾವರಣಗೊಳ್ಳತ್ತದೆ.

ಜಾತ್ರೆಗಳಲ್ಲಿ ಜಾನಪದ ಕಲೆ, ಸಾಹಿತ್ಯ, ಕ್ರೀಡೆಗಳ, ಮೂಲಕ ಜಾತ್ರೆಗೆ ನೆರೆದ ಜನಗಳಿಗೆ ಮನರಂಜನೆಯನ್ನು ಒದಗಿಸುವುದರ ಜೊತೆ ಅವರಲ್ಲಿ ಹೊಸ ಚೈತನ್ಯವನ್ನುಂಟು ಮಾಡುತ್ತದೆ.ಮನರಂಜನೆಯನ್ನು ಬಯಸಿ ಜನ ಜಾತ್ರೆಗಳಿಗೆ ಬರುತ್ತಾರೆ.ಜಾನಪದ, ಹಾಡುಗಳು, ನಾಟಕ, ವೀರಗಾಸೆ, ಡೊಳ್ಳು ಕುಣಿತಾ, ಕೀಲು ಕುದುರೆ, ಬೊಂಬೆ ಕುಣಿತ, ಇದರ ಜೊತೆಯಲ್ಲಿ ಉತ್ಸವ ಮೂರ್ತಿಯನ್ನು ಕುಣಿಸುವ ಪದ್ಧತಿಯನ್ನು ಜನ ರೂಢಿಸಿಕೊಂಡಿದ್ದಾರೆ.

ಕ್ರೀಡೆ, ಕುಸ್ತಿ, ಪಂದ್ಯಾವಳಿಗಳು, ರಾಸುಗಳಿಗೆ ಬಹುಮಾನ ಇತ್ಯಾದಿ ಸ್ಪರ್ಧೆಗಳು ಏರ್ಪಡಿಸಿ ಯುವಕರಲ್ಲಿ ಉತ್ಸಹದ ಚಿಲುಮೆ ಏರುವಂತೆ ಮಾಡುತ್ತವೆ. ಹಾಗೂ ಸ್ಪರ್ಧಾ ಮನೋಭಾವ ಬೆಳೆಯುವಂತೆ ಮಾಡುತ್ತದೆ.



॥ಶ್ರೀ ವಿನಾಯಕ ಪ್ರಸನ್ನ॥
॥ಶ್ರೀ ಲಕ್ಷ್ಮೀರಂಗನಾಥಸ್ವಾಮಿ ಪ್ರಸನ್ನ॥
ನಾರಾಯಣ ವಿದ್ಮಹೇ ವಾಸುದೇವಾಯ ಧೀಮಹೇ ತನ್ನೋ ರಂಗನಾಥ ಪ್ರಚೋದಯಾತ್
ಶ್ರೀ ರಂಗನಾಥಸ್ವಾಮಿ
ಜಾತ್ರಾ ಮಹೋತ್ಸವ
ಆಹ್ವಾನ ಪತ್ರಿಕೆ
ದಿನಾಂಕ 28-02-2018 ಬುಧವಾರದಿಂದ
04-03-2018ನೇ ಭಾನುವಾರದವರೆಗೆ
ಸ್ಥಳ : ಯಾದಲಡಕು, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ.
ಶ್ರೀಮತಿ/ಶ್ರೀ
: ಇವರಿಂದ :

# 1. ಯಾದಲಡುಕು ಶ್ರೀ ರಂಗನಾಥಸ್ವಾಮಿ ಜಾತ್ರಾ ಮಹೋತ್ಸವ

**ಪೀಠಿಕೆ:**

ಸಿರಾ-ಪಟ್ಟನಾಯಕನಹಳ್ಳಿ-ಹುಲಿಕಂಟೆ ಮಾರ್ಗದಲ್ಲಿ ಯಾದಲಡುಕು ಕ್ರಾಸ್‌ನಿಂದ ಬಲಬಾಗಕ್ಕೆ 2 ಕಿ.ಮೀ ದೂರದಲ್ಲಿರುವ, ಸಿರಾ ಪಟ್ಟಣದಿಂದ 28 ಕಿ.ಮೀ ಹಾಗೂ ನಮ್ಮೂರು ಚಿಕ್ಕನಹಳ್ಳಿಯಿಂದ 35 ಕಿ.ಮೀ ದೂರದಲ್ಲಿರುವ ಕಂದಾಯ ಗ್ರಾಮವಾಗಿದೆ, ಊರಿನ ಗೌಡರಾದ ರಾಮಚಂದ್ರಪ್ಪನವರು ಹೇಳುವ ಪ್ರಕಾರ ಈ ಗ್ರಾಮಕ್ಕೆ ಯಾದವರು ಹುಗಿ ಹೊಯ್ದಿದ್ದರಿಂದ :ಯಾದಲಡುಕು" ಅಯಿತೆಂಬ ಐತಿಹ್ಯವಿದೆ.

ಗ್ರಾಮದಲ್ಲಿ 250 ಮನೆಗಳಿದ್ದು ಸುಮಾರು 1000 ಜನಸಂಖ್ಯೆ ಇದೆ, ಕುಂಚಿಟಿಗರು (ಎಮ್ಮೆನೂರು ಗೋತ್ರದ) ಗೊಲ್ಲರು, ಆದಿಕರ್ನಾಟಕ, ನಾಯಕ, ಆದಿ ದ್ರಾವಿಡ, ಮಡಿವಾಳ ಹಾಗೂ ಕುಂಬಾರರ ಮನೆಗಳಿವೆ ಈ ಗ್ರಾಮದಲ್ಲಿ ಯಾವ ವಿಧವಾದ ನೀರಾವರಿ ಸೌಲಭ್ಯವಿಲ್ಲದೆ, ಕೊಳವೆ ಬಾವಿಗಳ ಮೂಲಕ ರಾಗಿ, ಮುಸುಕಿನ ಜೋಳ ರೇಷ್ಮೆಯನ್ನು ಖುಷ್ಕಿ ಜಮೀನಿನಲ್ಲಿ ಮಳೆ ಆಶ್ರಯದಲ್ಲಿ ಶೇಂಗಾ, ತೊಗರಿ, ಅವರೆ,ಅಲಸಂದೆ, ಎಳ್ಳು ಮುಂತಾದ ಅಕ್ಕಡಿ ಬೆಳೆಯನ್ನು ಬೆಳೆಯುತ್ತಾರೆ, ಇಲ್ಲಿಂದ ಖುಷ್ಕಿ ಜಮೀನಿನಲ್ಲಿ ಹುಣಸೇ ಮರಗಳನ್ನು ಬೆಳೆಸಿದ್ದು ಇಲ್ಲಿನ ರೈತರು ಆರ್ಥಿಕವಾಗಿ ಮುಂದುವರಿದಿದ್ದಾರೆ, ಹಾಗೂ ಇಲ್ಲಿರುವ ಗೊಲ್ಲ ಜನಾಂಗದವರು ಬಯಲು ಪ್ರದೇಶದಲ್ಲಿ ಕುರಿ- ಮೇಕೆಗಳನ್ನು ಸಾಕಿ ಜೀವನ ನಡೆಸುತ್ತಿದ್ದಾರೆ.

ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು, ಅಂಚೆ ಕಛೇರಿ, ಅಂಗನವಾಡಿ ಕೇಂದ್ರಗಳು ಇವೆ, ರಸ್ತೆಗಳು ಉತ್ತಮವಾಗಿಲ್ಲದೆ, ಜನ ಸಾಂದ್ರತೆ ಕಡಿಮೆ ಇರುವ ಪ್ರಯುಕ್ತ ಕೆಲವೇ ಬಸ್ಸುಗಳು ಬಂದು ಹೋಗುತ್ತವೆ. ಪಟ್ಟಾನಾಯಕನಹಳ್ಳಿ ಮಠದ ಪೀಠಾಧ್ಯಕ್ಷರಾದ ಶ್ರೀಶ್ರೀಶ್ರೀ ನಂಜಾವದೂತ ಮಹಾಸ್ವಾಮಿಗಳು ಇದೇ ಊರಿನವರು, ಗ್ರಾಮದ ಧಿ॥ ರಾಮಕೃಷ್ಣಪ್ಪನವರ ನೇತೃತ್ವದಲ್ಲಿ ಇತಿಹಾಸ ಪ್ರಸಿದ್ಧವಾದ ಶ್ರೀ ರಂಗನಾಥ ಸ್ವಾಮಿಯ ದೇವಸ್ಥಾನದ ಜೀರ್ಣೋದ್ಧಾರ ಕೆಲಸವನ್ನು ಮಾಡಿಸಿರುತ್ತಾರೆ, ಭಕ್ತರ ಸಹಕಾರದಿಂದ ದೇವಸ್ಥಾನದ ಆವರಣದಲ್ಲಿ ಕಲ್ಯಾಣ ಮಂಟಪ ಮತ್ತು ಸಮುದಾಯ ಭವನವನ್ನು ಹಾಗೂ ಹೊಸದಾಗಿ ಕಲ್ಲುಗಾಲಿ ರಥವನ್ನು

ನಿರ್ಮಿಸಿದ್ದಾರೆ. ಈ ಗ್ರಾಮದಲ್ಲಿ ಕುಂಚಿಟಿಗರ ಗೋತ್ರದ ಎಮ್ಮೆನೊರೆ ಮನೆ ದೇವರು ರಂಗನಾಥ ಸ್ವಾಮಿ ದೇವಸ್ಥಾನ, ಗ್ರಾಮದೇವತೆ ಕರಿಯಮ್ಮ, ಆಂಜನೇಯ, ಮಾರಮ್ಮ ದೇವಸ್ಥಾನ ಹಾಗೂ ಓಬಳಸ್ವಾಮಿ ಆಶ್ರಮವಿದೆ ಈ ದೇವಸ್ಥಾನಕ್ಕೆ ಅಂಕಸಂದ್ರದ ಕಂಬದ ರಂಗಪ್ಪನವರ ವಂಶಸ್ಥರು ಸುಮಾರು 10 ಎಕರೆ ಜಮೀನನ್ನು ದಾನಮಾಡಿದ್ದಾರೆ.

**ದೇವಸ್ಥಾನ ರಚನೆ:**

ಶ್ರೀ ರಂಗನಾಥ ಸ್ವಾಮಿ ದೇವಸ್ಥಾನವು ಗರ್ಭಗುಡಿ, ಅಂತರಾಳಗಳನ್ನು ಮಾತ್ರ ಹೊಂದಿದ್ದು, ಮುಂಭಾಗದ ಮುಖಮಂಟಪವನ್ನು ಇತ್ತೀಚೆಗೆ ನಿರ್ಮಿಸಿದ್ದಾರೆ. ಮುಖಮಂಟಪದ ಮುಂಬಾಗದಲ್ಲಿ ಧ್ವಜಸ್ಥಂಬವಿದೆ ದೇವಸ್ಥಾನದ ಗರ್ಭಗುಡಿಯ ಮೇಲ್ಭಾಗದಲ್ಲಿ ನೂತನವಾಗಿ ವಿಮಾನ ಗೋಪುರವನ್ನು ನಿರ್ಮಿಸಲಾಗಿದೆ ಅಲ್ಲದೆ ಅಮ್ಮನವರಿಗೂ, ಗರುಡನಿಗೂ ಪ್ರತ್ಯೇಕ ಗರ್ಭಗುಡಿಗಳನ್ನು ದ್ರಾವಿಡ ಶೈಲಿಯಲ್ಲಿ ಇತ್ತೀಚೆಗೆ ನಿರ್ಮಿಸಿದ್ದಾರೆ ಈ ದೇವಸ್ಥಾನಕ್ಕೆ ವಿಶಾಲವಾದ ಪ್ರಾಕಾರವಿದೆ.

ಈ ದೇವಸ್ಥಾನದ ಮೂಲ ವಿಗ್ರಹವು ಸುಮಾರು ಹನ್ನರಡನೇ ಶತಮಾನದಾಗಿದ್ದು, ಹೊಯ್ಸಳ ಶೈಲಿಯ ಶಿಲ್ಪಕಲಾ ಕೃತಿಗೆ ಪ್ರೌಡಿಮೆ ಎದ್ದು ಕಾಣುತ್ತಿದ್ದರೂ ಕಿರೀಟ, ಕೈಹಾರ, ಮಣಿಹಾರ, ಭುಜಕೀರ್ತಿ, ಕಟಿಸೂತ್ರ, ವೈಜಯಂತಿಗಳ ವಿನ್ಯಾಸವು ಅತ್ಯಂತ ಸೂಕ್ಷ್ಮತರವೂ, ನಯವೂ ಆದ ಕುಸರಿಕೆಲಸವನ್ನು ಈ ದೇವಸ್ಥಾನದಲ್ಲಿ ವಿನ್ಯಾಸಗೊಳಿಸಿದ್ದಾರೆ ಈ ದೇವಸ್ಥಾನದಲ್ಲಿ ಹದಿನಾರನೇ ಶತಮಾನದ ಶಾಸನವು ಈ ರೀತಿ ಇದ್ದು.,"ಗುಡುಗಂಡುಕೇಯ ಚಿಕ್ಕಗೊಂಡ, ಮಲ್ಲಿಗೊಂಡನ ಮಗ ಮಾರಗೊಂಡನು ತಮ್ಮ ಕುಲಕೋಟಿ ಜನರಿಗೆ ಪುಣ್ಯ ಪ್ರಾಪ್ತಿಯಾಗಲೆಂದು ಯಾದಲಡುಕು ಗ್ರಾಮದಲ್ಲಿ ಬಹುದಾನ್ಯ ಸಂವತ್ಸರ ವೈಶಾಖ ಶುದ್ದ ದ್ವಾದಶಿಯಂದು ಪ್ರತಿಷ್ಠಾಪನೆ ಮಾಡಿಸಿ, ತಮ್ಮ ಕುಲಕೋಟಿ ಜನರಿಗೆ ಪುಣ್ಯ ಪ್ರಾಪ್ತಿಯಾಗಲಿ ಎಂಬ ಉದ್ದೇಶದಿಂದ ಈ ದೇವಸ್ಥಾನವನ್ನು ನಿರ್ಮಿಸಿದ ಎಂಬ ಶಾಸನವು ತಿಳಿಸುತ್ತದೆ.

ಇತ್ತೀಚಿನ ದಿನಗಳಲ್ಲಿ 1990 ರಲ್ಲಿ ಮತ್ತೆ ಈ ದೇವಸ್ಥಾನವನ್ನು ಜೀರ್ಣೋದ್ದಾರಗೊಳಿಸಿ ಗರ್ಭಗುಡಿಯ ಬಲಭಾಗದಲ್ಲಿ ಈ ರೀತಿ ಕಲ್ಲಿನಲ್ಲಿ ಕೆತ್ತನೆ ಮಾಡಿರುತ್ತಾರೆ" ಶ್ರೀ ರಂಗನಾಥಸ್ವಾಮಿ ಪ್ರಸನ್ನ" ಶುಭಮಸ್ತು ಶಾಲಿವಾಹನ ಶಕ.1479

ನೇ ನಳ ಸಂವತ್ಸರದ ಚೈತ್ರ ಶುದ್ಧ ಚತುರ್ಥಿ 15 ರಂದು ಯಾದಲಡುಕು ಗ್ರಾಮದಲ್ಲಿ ಚಿಕ್ಕಗೊಂಡ, ಮಲ್ಲೆಗೌಡನು ಹಾಕಿದ ಧರ್ಮಶಾಸನದ ಪ್ರಕಾರದ ಪ್ರಕಾರ ಬಹುದಾನ್ಯ ಸಂವತ್ಸರದ ವೈಶಾಖ ಶುದ್ಧ 12 ರಂದು ಈ ಊರಿನಲ್ಲಿ ಪ್ರತಿಸ್ಥಾಪನೆ ಮಾಡಿಸಿದ್ದ ದೇವರುಗಳ ದೇವಾಲಯವು ಶಿಥಿಲಗೊಂಡಿರುವ ಕಾರಣ ಕ್ರಿ.ಶ. 23-06-1983 ರಂದು ಶುಭ ಸಿಂಹ ಲಗ್ನದಲ್ಲಿ ಎಂಟುಮಂದಿ ಗೌಡರು ಅಣ್ಣತಮ್ಮಂದಿರುಗಳು, ಗ್ರಾಮಸ್ಥರು ಮತ್ತು ಭಕ್ತಾದಿಗಳು ಸೇರಿ ಭೂಮಿ ಪೂಜೆ ಮಾಡಿಸಿ, ಜೀರ್ಣೋದ್ಧಾರ ಕೆಲಸ ಮಾಡಿ ಕಿ.ಶ. 28-05-1990 ರಂದು ಆದಿಚುಂಚನಗಿರಿ ಮಹಾಸ್ವಾಮಿಗಳಾದ ಶ್ರೀಶ್ರೀಶ್ರೀ ಬಾಲಗಂಗಾಧರನಾಥ ಸ್ವಾಮೀಜಿಗಳ ಸನ್ನಿದಿಯಲ್ಲಿ ಕಲಶ ಸ್ಥಾಪನೆ, ಕುಂಬಾಬಿಷೇಕ ಮತ್ತು ಶ್ರೀ ಮಹಾಗಣಪತಿ ವಿಗ್ರಹದ ಪ್ರತಿಸ್ಥಾಪನೆ ಮಾಡಲಾಯಿತು ಎಂದು ಈ ದೇವಸ್ಥಾನ ಇತಿಹಾಸವನ್ನು ತಿಳಿದುಕೊಳ್ಳಬಹುದಾಗಿದೆ

ಈ ದೇವಸ್ಥಾನದ ಗರ್ಭಗುಡಿಯ ಎಡಭಾಗದಲ್ಲಿ ಸ್ಥಂಭ ರೂಪದ ಲಿಂಗವು ಕೆಳಗೆ ಚೌಕಕಾರವಾಗಿ, ಮಧ್ಯದಲ್ಲಿ ಅಷ್ಟಕೋನಾಕಾರವಾಗಿ, ಮೇಲ್ಭಾಗದಲ್ಲಿ ಗೋಳಾಕಾರವಾಗಿ ಕೆತ್ತಲಾಗಿದೆ ಇದು ಬ್ರಹ್ಮ, ವಿಷ್ಣು, ಮಹೇಶ್ವರ ತ್ರೀಮೂರ್ತಿಗಳನ್ನು ಮುಪ್ಪರಿಯಾಗಿ ರೂಪಗೊಂಡಿರುವ ಕಂಬವೆನ್ನಬಹುದು.

**<u>ಜಾತ್ರೆಯ ಹಿನ್ನೆಲೆ:</u>**

ಮಾನವ ಗ್ರಾಮದೇವತೆಗಳನ್ನು ನಂಬಿ ನಡೆಯತೊಡಗಿದ, ಪ್ರಾಕೃತಿಕ ವಿಕೋಪದಿಂದ ಪಾರಾಗುವಂತಹ ಹಲವು ಆಚರಣೆಗಳನ್ನು ಕಂಡುಕೊಂಡ, ದೇವರನ್ನು ಒಲಿಸಿಕೊಳ್ಳಲು, ಸಂಪ್ರೀತಗೊಳಿಸಲು, ಹರಕೆ-ಹರಿಸೇವೆಯಂತಹ ವೈವಿದ್ಯಮಯವಾದ ಆಚರಣೆಗಳನ್ನು ರೂಡಿಯಲ್ಲಿ ತಂದುಕೊಂಡ, ಬದುಕಿನ ವಾಸ್ತವತೆಗೆ ಅನುಗುಣವಾಗಿ ಗಂಡು-ಹೆಣ್ಣು ದೇವರುಗಳನ್ನು ಗುರುತಿಸಿ ಕೈಮುಗಿದು ಸೇವೆ ಸಲ್ಲಿಸಲು ಪ್ರಾರಂಬಿಸಿದ ವೈವಿದ್ಯಮಯವಾದ ಸೇವೆಗಳನ್ನು ಗುರುತಿಸಿ ಗ್ರಾಮದೇವತೆಗಳಿಗೆ ಸಲ್ಲಿಸಿದ, ಹೀಗೆ ಜಾತ್ರೆಗಳ ಮೂಲಕ ದೇವರಿಗೆ ಹೆಚ್ಚು ಶ್ರದ್ದೆ-ನಿಷ್ಠೆಯನ್ನು ನಮ್ಮ ಗ್ರಾಮೀಣ ಜನರು ತೋರಲು ಪ್ರಾರಂಬಿಸಿದರು.

ಈ ಜಾತ್ರೆಗಳು ನಮ್ಮ ಗ್ರಾಮೀಣ ಬಾಗದಲ್ಲಿ ಉತ್ಸವವನ್ನು ಸ್ಥಳದ ಹೆಸರಿನಲ್ಲಿದ ಅಥವಾ ದೇವರ ಹೆಸರಿನಿಂದ ಜನಪ್ರಿಯವಾಗಿರುವುದುಂಟು, ಜಾತ್ರೆಗಳು ಜನರಲ್ಲಿ ಉತ್ಸಾಹವನ್ನು ಉಕ್ಕಿಸುತ್ತದೆ. ಮನರಂಜನೆಯನ್ನು ನೀಡುತ್ತದೆ. ಇವು ಬದುಕಿನ ಬಾಂದವ್ಯವನ್ನು ಬೆಸೆಯುತ್ತದೆ, ಜೀವನ ಸಂಗಾತಿಯನ್ನು ಆರಿಸಿಕೊಳ್ಳುವ ಸದಾವಕಾಶವನ್ನು ಒದಗಿಸುತ್ತದೆ. ಹೀಗೆ ಯಾವುದೋ ಒಂದು ನಿಗದಿಯಾದ ಸ್ಥಳದಲ್ಲಿ ಹಾಗೂ ವೇಳೆಯಲ್ಲಿ ಜನರೆಲ್ಲಾ ಸೇರಿ ದೇವರನ್ನು ಆರಾದಿಸುವುದಕ್ಕೆ 'ಜಾತ್ರೆ' ಎಂದು ಕರೆಯುತ್ತಾ ಬಂದಿದ್ದೇವೆ.

ಗ್ರಾಮೀಣರು ನಡೆಸುವ ಜಾತ್ರೆಯಲ್ಲಿ ಕಟ್ಟುಕಟ್ಟಲೆಗಳು ವಿಶೇಷವಾಗಿರುತ್ತವೆ, ಗ್ರಾಮೀಣ ಜಾತ್ರೆಗಳಲ್ಲಿ ಜನಪದ ಸಂಸ್ಕೃತಿಯು ಹಾಸುಹೊಕ್ಕಾಗಿರುತ್ತದೆ. ಸ್ನೇಹ-ಸಹಕಾರ-ಸಂಭಂದಗಳು ಬೆಳೆದುಕೊಂಡು ಬಂದ ಸ್ಥಳಗಳಲ್ಲಿ ಜರುಗುವ ಜಾತ್ರೆಗಳು ಸಾಮಾನ್ಯವಾಗಿ ಹಳ್ಳಿಗರ ಅದೀನದಲ್ಲಿಯೇ ಮುಂದುವರಿಯುತ್ತಾ ಬಂದಿವೆ. ಹೀಗೆ ಜಾತ್ರೆ ನಡೆಸುವ ದಿನವನ್ನು ಊರಿನ ಜನರೆಲ್ಲಾ ಸೇರಿ ದಿನಾಂಕವನ್ನು ನಿಗದಿಪಡಿಸಿ, ಆಹ್ವಾನ ಪತ್ರಿಕೆಯನ್ನು ಮುದ್ರಿಸಿ, ಅಕ್ಕಪಕ್ಕದ ಊರಿನ ಪ್ರಮುಖರ ಹಾಗೂ ನೆಂಟರಿಷ್ಟರನ್ನು ಆಹ್ವಾನಿಸುತ್ತಾರೆ. ಊರಿನ ಹಿರಿಯರು ಒಂದೊಂದು ಜವಾಬ್ದಾರಿಗಳನ್ನು ತೆಗೆದುಕೊಂಡು ದೇವತಾಕಾರ್ಯಗಳನ್ನು ಸುಗಮವಾಗಿ ನಡೆಸಲು ತಯಾರಿ ಮಾಡಿಕೊಂಡು ಶುಭದಿನದಂದು ಜಾತ್ರೆ ಪ್ರಾರಂಭಿಸುತ್ತಾರೆ.

ಜಾತ್ರೆಗಳಲ್ಲಿ ಸಿಹಿ-ತಿಂಡಿ ತಿನಿಸಿನ ಅಂಗಡಿಗಳು ಬರುತ್ತದೆ, ಚಿತ್ತಾಕರ್ಷವಾದ ವಿಶೇಷ ವಸ್ತುಗಳ ಅಂಗಡಿಗಳು ಬರುತ್ತದೆ. ಜನತೆ ತಮ್ಮ ಆಶೋತ್ತರಗಳನ್ನು ಈಡೇರಿಸಿಕೊಳ್ಳಲು ಜಾತ್ರೆಗಳು ನೆರವಾಗುತ್ತವೆ. ವರ್ತಕರಿಗೆ ವ್ಯಾಪಾರ ಚೆನ್ನಾಗಿ ನಡೆಯುತ್ತದೆ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಜಾತ್ರೆಗಳು ಉಂಟುಮಾಡುತ್ತವೆ, ಜಾತ್ರೆಗಳು ಜನತೆಯಲ್ಲಿ ದೇವರ ಬಗೆಗೆ ಭಕ್ತಿ-ಬಾವವನ್ನು ಉದ್ದೀಪನಗೊಳಿಸುತ್ತವೆ ಕುಟುಂಬದ ಯಜಮಾನರ ಹಿಡಿತದಲ್ಲಿರುವ ಸದಸ್ಯರುಗಳು ಜಾತ್ರೆಯ ದಿನಗಳಲ್ಲಿ ಕೊಂಚ ಸ್ವಾತಂತ್ರ್ಯವನ್ನು, ಸಲಿಗೆಯನ್ನು ಪಡೆದು, ಮನತೆರೆದು ಮಾತನಾಡುವ ಸದಾವಕಾಶವನ್ನು ಪಡೆಯುತ್ತಾರೆ. ನಮ್ಮ ಗ್ರಾಮೀಣರು ಸಡಗರ ಸಂಭ್ರಮದಿಂದ ನಲಿದು, ಎದೆಯಬಾರವನ್ನು ಇಳಿಸಿಕೊಳ್ಳಲು ಜಾತ್ರೆಗಳು ಸಹಕಾರಿಯಾಗಿವೆ.

**"ಹಬ್ಬ ಊಟಕ್ಕೆ ಚೆಂದ, ಜಾತ್ರೆ ನೋಟಕ್ಕೆ ಚೆಂದ"** ಎಂಬ ಗಾದೆಯಂತೆ ಗ್ರಾಮೀಣ ಜನತೆಗೆ ಮನರಂಜನೆಯನ್ನೊದಿಗಿಸಲು ಜಾತ್ರೆಗಳು ಸಹಕಾರಿಯಾಗಿವೆ ದುಡಿಮೆಯೇ ದೇವರೆಂದು ನಂಬಿರುವ ಮಣ್ಣಿನ ಮಕ್ಕಳಿಗೆ ಜಾತ್ರೆಗಳು ಮನರಂಜನೆ ನೀಡಿ, ಮುದುಡಿದ ಮನಕ್ಕೆ ಮುದನೀಡುತ್ತದೆ.. ಸಿರಾ ತಾಲ್ಲೂಕಿನಲ್ಲಿ ಕೀಲು ಕುದುರೆ ಕುಣಿತದವರು, ವೀರಗಾಸೆ ಕಲಾವಿದರು, ಕೊಲೆಬಸವ ಆಡಿಸುವವರು, ಗಾರುಡಿ ವೇಷದವರು, ಪಟಾ ಕುಣಿತದವರು, ಹುಲಿವೇಷದವರು ಇನ್ನು ಮುಂತಾದವರು ಜನಪದ ಕಲೆಗಳನ್ನು ಕರಗತ ಮಾಡಿಕೊಂಡಿರುವ ಕಲಾವಿದರುಗಳಿದ್ದು, ಜಾತ್ರೆಗಳಲ್ಲಿ ತಮ್ಮ ತಮ್ಮ ಕಲೆಗಳನ್ನು ಪ್ರದರ್ಶಿಸುತ್ತಾರೆ, ಇವರೆಲ್ಲಾ ತಮ್ಮ ವೇಷ ಭೂಷಣ ಸಾಹಸ, ಚಮತ್ಕಾರ, ಮಾತುಗಾರಿಕೆ ಮೊದಲಾದ ಕಲಾ ನೈಪುಣ್ಯದಿಂದ ಗ್ರಾಮೀಣರ ಮನಸ್ಸನ್ನು ರಂಜಿಸುತ್ತಾರೆ. ಈ ಆಧುನಿಕ ಯುಗದಲ್ಲಿ ಆರ್ಕೆಸ್ಟ್ರಾದವರೊಂದಿಗೆ ನೃತ್ಯಗಾರ್ತಿಯರನ್ನು ಕರೆಸಿ ಮನರಂಜನೆ ಪಡೆದುಕೊಳ್ಳುತ್ತಾರೆ ಅದೇ ರೀತಿ ತಮ್ಮೂರಿನ ಕಲಾವಿದರೇ ಸೇರಿ ತಿಂಗಳಾನುಗಟ್ಟಳೆ ನಾಟಕಕಲಿತು ತಮ್ಮೂರಿನ ಜಾತ್ರೆಗಳಲ್ಲಿ ನಾಟಕ ಪ್ರದರ್ಶನ ಮಾಡಿ ಆನಂದಿಸುತ್ತಾರೆ.

ಜಾತ್ರೆಗಳಲ್ಲಿ ವಿಭಿನ್ನ ಸ್ವಭಾವದ ವ್ಯಕ್ತಿಗಳನ್ನು ಕಾಣುತ್ತೇವೆ ಜಾತ್ರೆಗೆ ಬರುವ ಜನರ ಆಚಾರ-ವಿಚಾರಗಳು ವಿಭಿನ್ನವಾಗಿರುತ್ತವೆ. ಹೊಸ-ಹೊಸ ಅನುಭವಗಳನ್ನು ಪಡೆದುಕೊಳ್ಳಲು ಜಾತ್ರೆಗಳು ಎಲ್ಲರನ್ನು ಕೈ ಬೀಸಿ ಕರೆಯುತ್ತವೆ. ಇವು ಬದುಕಿನ ಬಾಂದ್ಯವಗಳನ್ನು ಬೆಸೆಯುತ್ತವೆ, ಜಾತ್ರೆಗಳಲ್ಲಿ ಜೀವನ ಸಂಗಾತಿಯನ್ನು ಆರಿಸಿಕೊಳ್ಳಲು, ನವದಂಪತಿಗಳು ಮನ ಬಿಚ್ಚಿ ಮಾತನಾಡಲು ಪರಸ್ಪರ ಅರಿಯಲು, ಜೀವನಾನುಭವ ಪಡೆಯಲು, ಒಳ-ಹೊರಗ ಸೌಂದರ್ಯವನ್ನು ಅನುಭವಿಸಲು ಜಾತ್ರೆಗೆ ಹೋಗಿ ಖುಷಿ ಪಡುತ್ತಾರೆ.

**ಶ್ರೀ ರಂಗನಾಥ ಸ್ವಾಮಿ ಜಾತ್ರಾ ಮಹೋತ್ಸವ :**

ಜಾತ್ರೆಗಳು ನಡೆಯುವಲ್ಲಿ ಬಹುಪಾಲು ರಥೋತ್ಸವಗಳು ಜರುಗುತ್ತವೆ, ರಥವನ್ನು ತೇರು ಎಂದು ಕರೆಯುತ್ತಾರೆ ಜಾತ್ರೆಗಳಲ್ಲಿ ಗ್ರಾಮದ ಆರಾಧ್ಯ ದೇವರನ್ನು ರಥದಲ್ಲಿ ಕೂರಿಸಿ, ರಥವನ್ನು ಎಳೆಯುವಲ್ಲಿ ಜನತೆ ತಮ್ಮ ಭಕ್ತಿ ಬಾವವನ್ನು ವಿನಮ್ರವಾಗಿ ವ್ಯಕ್ತಪಡಿಸುತ್ತಾರೆ ರಥದ ತಳಬಾಗವು ಸಾಮಾನ್ಯವಾಗಿ ಕಲ್ಲಿನ ಬೃಹದಾಕಾರವಾದ ಗಾಲಿ (ಚಕ್ರ)ಗಳನ್ನು ಹೊಂದಿರುತ್ತದೆ ತೇರಿನ ಹೊರ ಮೈಯನ್ನು ಪುರಾಣ ಪ್ರಸಿದ್ದ ದೇವರುಗಳ, ಪ್ರಾಣಿ -ಪಕ್ಷಿಗಳ ಚಿತ್ರಗಳನ್ನು ಕೆತ್ತಿರುತ್ತಾರೆ.

ಇಲ್ಲಿ ಮರಗೆಸದವರ ರಸಿಕತೆ ಹಾಗೂ ಕಲಾ ನೈಪುಣ್ಯತೆಗಳನ್ನು ಕಾಣಬಹುದು ಇನ್ನು ಚಿತ್ತಾಕರ್ಷವಾದ ಅಂತಸ್ತುಗಳನ್ನು ತೇಗದ ಮರದಿಂದ ಜೋಡಿಸಿರುವುದು ತೇರಿನ ಮಧ್ಯಬಾಗವಾಗಿರುತ್ತದೆ ಉತ್ಸವಮೂರ್ತಿಯನ್ನು ಕೂರಿಸಲು ಅನುಕೂಲವಾಗುವಂತೆ ಮಧ್ಯಬಾಗದಲ್ಲಿ ಪೀಠವನ್ನು ರಚನೆ ಮಾಡಿರುತ್ತಾರೆ ಉತ್ಸವ ಮೂರ್ತಿಯ ಪೀಠದ

ಇಕ್ಕೆಲಗಳಲ್ಲಿ ಪೂಜಾರಿಗಳು ಕುಳಿತುಕೊಳ್ಳಲು ಅನುಕೂಲವಾಗುವಂತೆ ಸ್ಥಳವನ್ನು ಕಲ್ಪಿಸಿದ್ದಾರೆ ತೇರಿನ ಮಧ್ಯಬಾಗದಿಂದ ಮುಂದೆ ಕುದುರೆಗಳನ್ನು ನಾಲ್ಕು ಮೂಲೆಗಳ ಕಂಬಗಳಿಗೆ ದೈತ್ಯ ಸಿಂಹಗಳನ್ನು ಕಟ್ಟಿರುತ್ತಾರೆ ಮೆಲ್ಭಾಗದಲ್ಲಿ ಇತ್ತೀಚಿನ ದಿನಗಳಲ್ಲಿ ಕಬ್ಬಿಣದ ಕಂಬಿಗಳಿಂದ ಗೋಪುರಾಕಾರದಲ್ಲಿ ನಟ್ಟು-ಬೊಲ್ಟ್‌ಹಾಕಿ ಜೋಡಿಸಿರುತ್ತಾರೆ ಗೋಪುರದ ಮೇಲ್ಭಾಗದ ತುದಿಗೆ ಕಳಸವನ್ನು ಪ್ರತಿಷ್ಠಾಪಿಸಿರುತ್ತಾರೆ ತೇರಿನ ಮಧ್ಯಬಾಗದಲ್ಲಿ ಮೇಲ್ಬಾಗದವರೆವಿಗೂ ಸೌಂದರ್ಯ ವರ್ದನೆಗಾಗಿ ಬಣ್ಣ ಬಣ್ಣದ ಬಟ್ಟೆಗಳನ್ನು ಮತ್ತು ಬಾವುಟಗಳನ್ನು ಕಟ್ಟಿರುತ್ತಾರೆ ತೇರಿನ ಕೆಳಬಾಗದಿಂದ ಕೊನೆಯ ತುದಿಯವರೆವಿಗೂ ತಳಿರು ತೋರಣಗಳಿಂದ ಹಾಗೂ ಹೂವಿನ ಅಲಂಕಾರ ಮಾಡಿ ಸಿಂಗರಿಸಿರುತ್ತಾರೆ ಇನ್ನು ರಥೋತ್ಸವದ ಶುಭ ದಿನದಂದು ಶ್ರೀ ಲಕ್ಷ್ಮೀ ರಂಗನಾಥ ಸ್ವಾಮಿಯ ಉತ್ಸವ ಮೂರ್ತಿಯನ್ನು ಕೂರಿಸಿ, ಶುಭಗಳಿಗೆಯಲ್ಲಿ ರಥಕ್ಕೆ ಕಬ್ಬಿಣದ ಸರಪಳಿಗಳನ್ನು ಕಟ್ಟಿ, ಭಕ್ತಾದಿಗಳು ಜಯಘೋಷ ಮಾಡುತ್ತಾ ಭಕ್ತಿ ಬಾವದಿಂದ ರಥವನ್ನು ಎಳೆಯುತ್ತಾ, ರಥಕ್ಕೆ ದವನ ಬಾಳೆಹಣ್ಣುಗಳನ್ನು ಎಸೆಯುತ್ತಾ ತಮ್ಮ ಹರಕೆಯನ್ನು ತೀರಿಸುತ್ತಾರೆ.

ಇಂತಹ ಜಾತ್ರಾ ಮಹೋತ್ಸವವನ್ನು ನಡೆಸುವ ಶಿರಾ ತಾಲ್ಲುಕು ಯಾದಲಡುಕು ಶ್ರೀ ರಂಗನಾಥ ಸ್ವಾಮಿ ದೇವಸ್ಥಾನವೂ ಒಂದು ಪ್ರತಿವರ್ಷ ಯುಗಾದಿ ಹಬ್ಬಕ್ಕಿಂತ ಹದಿನೈದು ದಿನಕ್ಕಿಂತ ಮುಂಚಿತವಾಗಿ ಜಾತ್ರೆ ಪ್ರಾರಂಭವಾಗಿ ಒಟ್ಟು ಆರು ದಿನಗಳ ಕಾಲ ನಡೆಯುತ್ತದೆ, ಮೊದಲನೇ ದಿನ ಮಹಾಗಣಪತಿಯ ಪೂಜಾಭಿಷೇಕ, ಕಲಶ ಸ್ಥಾಪನೆ ಎರಡನೇ ದಿವಸ ಶ್ರೀ ರಂಗನಾಥ ಸ್ವಾಮಿಯ ಹೂವಿನ ತೇರು ಮೂರನೆ ದಿನ ನರಸಿಂಹ ಸ್ವಾಮಿಗೆ ನೂರೊಂದೆಡೆ ಸೇವೆ ನಾಲ್ಕನೇ ದಿನ "ಕಲ್ಲು ಗಾಲಿ ರಥೋತ್ಸವ, ಆರತಿ ಹರಿಸೇವೆ, ಐದನೇ ದಿನ ಉಂಡೆ-ಮುಂಡೆ ಹರಕೆ ಸೇವೆ, ಆರನೇ ದಿನ ಶ್ರೀ ರಂಗನಾಥ ಸ್ವಾಮಿಯ ವಸಂತೋತ್ಸವದೊಂದಿಗೆ ಜಾತ್ರೆಯ ಮಹೋತ್ಸವವು ಸಂಪನ್ನವಾಗುತ್ತದೆ.

ಈ ಜಾತ್ರೆ ನಮ್ಮ ರಾಜ್ಯದ ಎಲ್ಲಾ ಜನಾಂಗದ ಜನರು ಬಾಗವಹಿಸಿ, ಸ್ವಾಮಿಯ ಕೃಪೆಗೆ ಪಾತ್ರರಾಗುತ್ತಾರೆ ಅದರಲ್ಲೂ ಹೆಚ್ಚಿನದಾಗಿ ಕುಂಚಿಟಿಗ ಎಮ್ಮೆನೋರ ಕುಲದೇವರಾದ್ದರಿಂದ, ಅವರ ಅಣ್ಣತಮ್ಮಂದಿರುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಜಾತ್ರೆಗೆ ಬಂದ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ನಡೆಸುತ್ತಾ, ಶ್ರೀ ರಂಗನಾಥ ಸ್ವಾಮಿಯ ಜಾತ್ರಾ ಮಹೋತ್ಸವವನ್ನು ಅದ್ದೂರಿಯಾಗಿ ನಡೆಸುತ್ತಾರೆ.



॥ ಶ್ರೀ ಓಂಕಾರೇಶ್ವರಸ್ವಾಮಿ ಪ್ರಸನ್ನ ॥

ಓಂ

## ಶ್ರೀ ಗುರುಗುಂಡ ಬ್ರಹ್ಮೇಶ್ವರಸ್ವಾಮಿ
## ಮಹಾ ಸಂಸ್ಥಾನ ಮಠ

ಶ್ರೀ ಕ್ಷೇತ್ರ, ಪಟ್ಟನಾಯಕನಹಳ್ಳಿ (ಸ್ಪಟಿಕ ಪುರಿ) ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ.



# ಜಾತ್ರಾ ಮಹೋತ್ಸವ ಆಹ್ವಾನ ಪತ್ರಿಕಾ

॥ ಶ್ರೀ ಗುರು ಗುಂಡಬ್ರಹ್ಮೇಶ್ವರಸ್ವಾಮಿ ಪ್ರಸನ್ನ ॥

ಶ್ರೀಮತ್ ಪರಮಹಂಸ ಪರಿಪ್ರಾಜಕಾಚಾರ್ಯ ಸಚ್ಚಿದಾನಂದ ಸದ್ಗುರು

ಶ್ರೀ ಗುರುಕುಮಾರಾವಧೂತ ಸ್ವಾಮಿಗಳವರ ಶಿಷ್ಯರಾದ ಪರಮಪೂಜ್ಯ

## ಶ್ರೀ ಶ್ರೀ ಶ್ರೀ ನಂಜಾವಧೂತ ಮಹಾಸ್ವಾಮಿಗಳು

ಸಮಸ್ತ ಭಕ್ತಮಹಾಶಯರ ಹಾಗೂ ಲೋಕ ಕಲ್ಯಾಣಾರ್ಥವಾಗಿ ಶಿರಾ ತಾಲ್ಲೂಕು ಶ್ರೀ ಕ್ಷೇತ್ರ ಪಟ್ಟನಾಯಕನಹಳ್ಳಿ (ಸ್ಪಟಿಕ ಪುರಿ) ಇವರ ದಿವ್ಯ ನೇತೃತ್ವದಲ್ಲಿ

ಐತಿಹಾಸಿಕ ಶ್ರೀ ಓಂಕಾರೇಶ್ವರಸ್ವಾಮಿಯ ಕಲ್ಲುಗಾಲಿ ರಥೋತ್ಸವ, ದನಗಳ ಜಾತ್ರೆಯು ಇದೇ ಶ್ರೀ ಪಾರ್ಥಿವನಾಮ ಸಂವತ್ಸರದ ಪುಷ್ಯ ಮಾಸ ಶುದ್ಧ ಪೂರ್ಣಿಮಾ ತಾ. 14-1-2006 ನೇ ಶನಿವಾರದಿಂದ 26-1-2006 ನೇ ಗುರುವಾರದವರೆಗೆ 13 ದಿನಗಳ ಕಾಲ ನಡೆಯುತ್ತದೆ ಸಮಸ್ತ ಭಕ್ತರು ಪ್ರತಿದಿನ ನಡೆಯುವ ' ದೇವತಾ ' ಉತ್ಸವ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಭಗವಂತನ ಕೃಪೆಗೆ ಪಾತ್ರರಾಗಬೇಕೆಂದು ಆಶಿಸುತ್ತೇವೆ.

**: ಕಾರ್ಯಕ್ರಮಗಳ ವಿವರ :**

* ಪುಷ್ಯಶುದ್ಧ ಪೂರ್ಣಿಮಾ 14-1-2006 ಶನಿವಾರ ಗಂಗಾ ಪೂಜೆ
* ಪುಷ್ಯಶುದ್ಧ ಬಹುಳ ಪಾಡ್ಯಮಿ 15-1-06 ಭಾನುವಾರ ವಿಘ್ನೇಶ್ವರ ಉತ್ಸವ
* ಪುಷ್ಯ ಬಹುಳ ಬಿದಿಗೆ 16-1-2006 ಸೋಮವಾರ ಹೂವಿನ ತೇರು
* ಪುಷ್ಯ ಬಹುಳ ತದಿಗೆ 17-1-06 ಮಂಗಳವಾರ ಕೈಲಾಸೋತ್ಸವ
* ಪುಷ್ಯ ಬಹುಳ ಚೌತಿ 18-1-06 ಬುಧವಾರ ನಂದೀಶ್ವರನ ಉತ್ಸವ
* ಪುಷ್ಯ ಬಹುಳ ಪಂಚಮಿ 19-1-06 ಗುರುವಾರ ಬೆಳಗ್ಗೆ ರಥಾಂಗಹೋಮ ಸಂಜೆ 5 ಗಂಟೆಗೆ **ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನ ಉದ್ಘಾಟನೆ** ರಾತ್ರಿ 10 ಗಂಟೆಗೆ ಮಡಿತೇರು.

ಪುಷ್ಯ ಬಹುಳ ಷಷ್ಠಿ 20-1-2006 ನೇ ಶುಕ್ರವಾರ ಸಾಯಂಕಾಲ ಆರತಿ ರಾತ್ರಿ 10-00 ಘಂಟೆಗೆ ಶ್ರೀ ಓಂಕಾರೇಶ್ವರಸ್ವಾಮಿ ಕಲ್ಲುಗಾಲಿ ರಥೋತ್ಸವ

## ತಾ. 20-1-2006 ಶುಕ್ರವಾರ ರಾತ್ರಿ 10-00 ಕ್ಕೆ ಭವ್ಯ ಐತಿಹಾಸಿಕ ಶ್ರೀ ಓಂಕಾರೇಶ್ವರಸ್ವಾಮಿಯ ಕಲ್ಲುಗಾಲಿ ರಥೋತ್ಸವ

ತಾರೀಖು : 25-1-06 ನೇ ಬುಧವಾರ ಮುತ್ತಿನ ಪಲ್ಲಕ್ಕಿ ಮತ್ತು ಮದ್ದು ಸುಡುವ ಕಾರ್ಯಕ್ರಮ ಇರುತ್ತದೆ. ತಾ. 21-1-06 ರಿಂದ 26-1-06 ರವರೆಗೆ ವೈವಿಧ್ಯಮಯ ಉತ್ಸವಗಳು ವಿಜೃಂಭಣೆಯಿಂದ ವಿಶೇಷವಾಗಿ ಜರುಗುತ್ತವೆ. ರೈತಾಪಿ ಜನಗಳಿಗೆ ಅನುಕೂಲವಾಗುವಂತೆ

## 5ನೇ ವರ್ಷದ ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನವನ್ನು

ಹಮ್ಮಿಕೊಳ್ಳಲಾಗಿದ್ದು, ಈ ಎಲ್ಲಾ ಕಾರ್ಯಕ್ರಮಗಳಲ್ಲಿ ನಿತ್ಯವೂ ಆಸ್ತಿಕ ಭಕ್ತ ಮಹಾಶಯರು ಸಹಸ್ರಾರು ಸಂಖ್ಯೆಯಲ್ಲಿ ಭಾಗವಹಿಸಿ ಭಗವಂತನ ಕೃಪೆಗೆ ಪಾತ್ರರಾಗಬೇಕಾಗಿ ತಮ್ಮಲ್ಲಿ ಆಶಿಸುತ್ತೇವೆ.

ಇಂತಿ ಭಗವಂತನ ಸೇವೆಯಲ್ಲಿ

**ಶ್ರೀ ಶ್ರೀ ಶ್ರೀ ನಂಜಾವಧೂತ ಮಹಾಸ್ವಾಮಿಗಳು, ಪೀಠಾಧ್ಯಕ್ಷರು,**

ಶ್ರೀ ಗುರುಗುಂಡ ಬ್ರಹ್ಮೇಶ್ವರ ಸ್ವಾಮಿ ಮಹಾ ಸಂಸ್ಥಾನ ಮಠ, ಪಟ್ಟನಾಯಕನಹಳ್ಳಿ ಶ್ರೀ ಗುರಪ್ಪಸ್ವಾಮಿ ಮಠ, ವಿಜಯಪುರ.

**ವಿಶೇಷ ಸೂಚನೆ :**

1) ದನಗಳ ಜಾತ್ರೆಯು ತಾ. 14-1-06 ರಿಂದ 26-1-06 ರವರೆಗೆ ನಡೆಯುತ್ತದೆ. ರಾಸುಗಳಿಗೆ ನೀರು, ನೆರಳು, ಬೆಳಗಿನ ವ್ಯವಸ್ಥೆ ಮತ್ತಿತರ ಅಗತ್ಯ ಸೌಲಭ್ಯಗಳನ್ನು ಏರ್ಪಡಿಸಲಾಗಿರುತ್ತದೆ. ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ಆಶಿಸುತ್ತೇವೆ.

2) ಭಕ್ತಾದಿಗಳಿಗೆ ಬಸ್ಸಿನ ಸೌಕರ್ಯ ಚೆನ್ನಾಗಿರುತ್ತದೆ. **ಉತ್ತಮ ರಾಸುಗಳಿಗೆ ವಿಶೇಷ ಬಹುಮಾನ ಕೊಡಲಾಗುತ್ತದೆ.**

3) ರಾಜ್ಯದ ಖ್ಯಾತ ಕಲಾವಿದರಿಂದ ಪ್ರತಿದಿನ ಸಾಯಂಕಾಲ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಪೌರಾಣಿಕ ನಾಟಕಗಳು ಇರುತ್ತವೆ.

ಮುದ್ರಣ : ಮೇಘನಾ ಆಫ್‌ಸೆಟ್ ಪ್ರಿಂಟರ್ಸ್ ಕೆ.ಇ.ಬಿ. ರಸ್ತೆ ಕೋತಿತೋಪು, ತುಮಕೂರು.

# 2. ಪಟ್ಟನಾಯಕನಹಳ್ಳಿ ಶ್ರೀ ಗುರುಗುಂಡ ಬ್ರಹ್ಮೇಶ್ವರಸ್ವಾಮಿ ಜಾತ್ರಾ ಮಹೋತ್ಸವ

**ಪೀಠಿಕೆ:**

ಪಟ್ಟನಾಯಕಹಳ್ಳಿ ಶ್ರೀ ಕ್ಷೇತ್ರವು ಶಿರಾ ಪಟ್ಟಣದಿಂದ 20 ಕಿ.ಮೀ ಹಾಗೂ ನಮ್ಮೂರು ಚಿಕ್ಕನಹಳ್ಳಿಯಿಂದ 30 ಕಿ.ಮೀ ದೂರದಲ್ಲಿರುವ ಈ ಗ್ರಾಮವುನಾದೂರಿನ ಜೋಡಿ ಗ್ರಾಮವಾಗಿದೆ ಈ ಗ್ರಾಮವು ತನ್ನ ಅವಳಿ ಗ್ರಾಮ ಕಾಮಗೊಂಡನಹಳ್ಳಿಯೊಂದಿಗೆ ಕೂಡಿಕೊಂಡಿದೆ. ಈ ಊರಿನ ಮುಖಂಡರಾದ ಶ್ರೀ ಚಂದ್ರಾಚಾರ್‌ರವರು ತಿಳಿಸುವಂತೆ ಬ್ಯಾಲದ ಕುರುಬನ ಭವಂತಿ ಮನೆತನದವರು ಈ ಗ್ರಾಮಕ್ಕೆ ಹುಗಿ ಹೊಯ್ದಿರುತ್ತಾರೆ ಗ್ರಾಮದಲ್ಲಿ ಶಿವನಿಗೆ ಸ್ಪಟಿಕದ ಮಣಿಯು ಪ್ರೀತಿಯಾದುದರಿಂದ "ಸ್ಪಟಿಕಪುರಿ" ಎಂಬ ಹೆಸರನ್ನು ಮೊದಲು ಹೊಂದಿದ್ದು ನಂತರ ನಾಯಕ ಜನಾಂಗದವರು ಪಟ್ಟಕಟ್ಟಿಸಿಕೊಂಡು ಆಳ್ವಿಕೆ ನಡೆಸುತ್ತಿದ್ದುದರಿಂದ "ಪಟ್ಟನಾಯಕನಹಳ್ಳಿ" ಆಯಿತೆಂಬ ಐತಿಹ್ಯವಿದೆ.

ಪಟ್ಟನಾಯಕನಹಳ್ಳಿ 800 ಮನೆಗಳಿದ್ದು ಸುಮಾರು 4000 ಜನ ಸಂಖ್ಯೆ

ಹೊಂದಿರುತ್ತದೆ ಈ ಗ್ರಾಮದಲ್ಲಿ ಕುಂಚಿಟಿಗರು, ಕುರುಬರು, ಆದಿಕರ್ನಾಟಕ, ಮುಸ್ಲಿಂ, ದರ್ಜಿ, ನಾಯಕ, ವಿಶ್ವಕರ್ಮ, ಕಮ್ಮಾರ ವೈಶ್ಯ, ಈಡಿಗ, ಬಜಂತ್ರಿ, ನೇಕಾರ, ಕ್ರಿಶ್ಚಿಯನ್ನರ ಮನೆಗಳಿದ್ದು, ಎಲ್ಲರೂ ಸಹಬಾಳ್ವೆಯಿಂದ ಕೂಡಿ ಬದುಕುತ್ತಿದ್ದಾರೆ, ಸಾಂಸ್ಕೃತಿಕ, ಧಾರ್ಮಿಕ ವಿಚಾರಗಳಲ್ಲಿ ಪರಸ್ಪರ ಸಹಕಾರ, ಸಂಯಮತೆಯನ್ನು ಕಾಯ್ದುಕೊಂಡು ಬರುತ್ತಿದ್ದಾರೆ ಇಲ್ಲಿ ಪ್ರತಿವಾರ ಸಂತೆ ನಡೆಯುತ್ತಿರುವುದರಿಂದ ಈ ಗ್ರಾಮವು ಒಳ್ಳೆಯ ವ್ಯಾಪಾರ ಹಾಗೂ ವಾಣಿಜ್ಯ ಕೇಂದ್ರವಾಗಿದೆ. ಈ ಪ್ರದೇಶದಲ್ಲಿ ನೀರಾವರಿ ಸೌಕರ್ಯವಿಲ್ಲದೆ, ಒಣಪ್ರದೇಶವಾಗಿ ಬಹಳ ಹಿಂದುಳಿದಿದ್ದು ಇಲ್ಲಿ ರೈತರು ಮಳೆಗಾಲದಲ್ಲಿ ರಾಗಿ, ಜೋಳ, ಶೇಂಗಾ, ತೊಗರಿ ಅವರೆ, ಅಲಸಂದೆ ಮುಂತಾದ ಬೆಳೆಗಳನ್ನು, ವಾಣಿಜ್ಯ ಬೆಳೆಯಾಗಿ ಹೆಚ್ಚಾಗಿ ತಮ್ಮ ಹೊಲಗಳಲ್ಲಿ ಹುಣಸೇ ಮರಗಳನ್ನು ಬೆಳೆಸಿದ್ದಾರೆ, ಮಿಕ್ಕುಳಿದವರು ಕುರಿ, ಮೇಕೆ, ದನಕರುಗಳನ್ನು ಸಾಕುತ್ತಾ ಆರ್ಥಿಕವಾಗಿ ಮುಂದುವರಿದಿದ್ದಾರೆ. ಇಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸರ್ಕಾರಿ ಪದವಿ ಪೂರ್ವ ಕಾಲೇಜು, ಗುರುಗುಂಡ ಬ್ರಹ್ಮೇಶ್ವರ ಬಾಲಕೀಯರ ಪ್ರೌಢಶಾಲೆ, ಶಾಂತಿನಿಕೇತನ ಕಾನ್ವೆಂಟ್, ಪ್ರಾಥಮಿಕ ಆರೋಗ್ಯ ಕೇಂದ್ರ, ಪಶುಚಿಕಿತ್ಸಾಲಯ, ಅಂಚೆಕಛೇರಿ, ವಿದ್ಯುತ್ ಕಛೇರಿ, ಪೊಲೀಸ್ ಠಾಣೆ, ಕೆನರಾ ಬ್ಯಾಂಕ್, ಗ್ರಾಮ ಲೆಕ್ಕಾಧಿಕಾರಿಗಳ ಕಛೇರಿ, ಅಂಗನವಾಡಿ ಕೇಂದ್ರ, ವ್ಯವಸಾಯ ಸೇವಾ ಕೇಂದ್ರ, ಕಂಬಳಿ ನೇಕಾರರ ಸಂಘಗಳು ಇರುತ್ತವೆ.

ಈ ಗ್ರಾಮದಲ್ಲಿ ಪ್ರಸಿದ್ದ ಗುರುಗುಂಡ ಬ್ರಹ್ಮೇಶ್ವರ ಸ್ವಾಮಿ ಮಠ ಇದ್ದು, ಓಂಕಾರೇಶ್ವರಸ್ವಾಮಿ, ದತ್ತಾತ್ರೇಯ, ನೀಲಕಂಠೇಶ್ವರ, ಪಾರ್ವತಿ ಮಂದಿರ, ಕುರುಬರ ಬೀರದೇವರು, ಮೈಲಾರಲಿಂಗ, ಕುಂಚಿಟಿಗರ ಎರಡುಕೆರೆಯವರ ಅಮಾವಾಸ್ಯೆ ದೇವರು, ಬಂದಮ್ಮ, ಶನಿಮಹಾತ್ಮ, ವಿನಾಯಕ, ಶ್ರೀರಾಮ, ಅಂಜನೇಯ ಬಂಡಿರಂಗನಾಥ ಸ್ವಾಮಿ, ಗ್ರಾಮದೇವತೆ ಕರಿಯಮ್ಮ ದೇವಸ್ಥಾನಗಳು ಹಾಗೂ ಮಸೀದಿ, ಚರ್ಚ್‌ಗಳು ಇದ್ದು, ಶನಿದೇವನಿಗೆ ಶ್ರಾವಣದಲ್ಲಿ ಜಾತ್ರೆ ಮಾಡುತ್ತಾರೆ, ಗ್ರಾಮದೇವತೆ ಕರಿಯಮ್ಮನಿಗೆ ವರ್ಷಕೊಮ್ಮೆ ಆರತಿ ಮಾಡಿ ಬಲಿಕೊಡುತ್ತಾರೆ, ಈ ಎಲ್ಲಾ ಜನಾಂಗದವರೂ ಪರಸ್ಪರ, ಸ್ನೇಹ ಸಹಬಾಳ್ವೆಯಿಂದ, ಸಹಕಾರದಿಂದ ಧಾರ್ಮಿಕ ಕಾರ್ಯಕ್ರಮಗಳನ್ನು ನೂರಾರು ವರ್ಷಗಳಿಂದಲೂ ನಡೆಸಿಕೊಂಡು ಬರುತ್ತಿದ್ದಾರೆ.

**ದೇವಸ್ಥಾನದ ಇತಿಹಾಸ :**

ಶಿರಾ ತಾಲ್ಲೂಕಿನಲ್ಲಿ ಶ್ರೀ ಗುರುಗುಂಡ ಬ್ರಹ್ಮೇಶ್ವರಸ್ವಾಮಿ ದೇವಸ್ಥಾನವು ಒಂದು ಪ್ರಮುಖ ದೇವಾಲಯವಾಗಿದೆ ಈ ದೇವಸ್ಥಾನದ ಗರ್ಭಗುಡಿಯಲ್ಲಿ ಕೃಷ್ಣಶಿಲೆಯ ಬೃಹತ್ ಲಿಂಗವಿದೆ ಈ ಕಪ್ಪುಶಿಲೆಯ ಶಿವಲಿಂಗದ ಶಿರೋಬಾಗವು ಮೂರು ಸ್ತರದ ಗ್ರಾನೈಟ್ ಪೀಠದ ಮೇಲೆ ವಿರಾಜಮಾನವಾಗಿದೆ. 12–13 ನೇ ಶತಮಾನದ ಹೋಯ್ಸಳರ ಕಾಲದ ಪ್ರಾಚೀನ ಶಿವಲಿಂಗವಾಗಿರುವ ಉಲ್ಲೇಖವಿದೆ. ಲಿಂಗದ ಎದುರಿಗೆ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ, ಗರ್ಭಗುಡಿಯ ಮುಂದಿನ ನವರಂಗ ಮಂಟಪದ ಬಲಬಾಗಕ್ಕೆ ನವಲಿಂಗದ ರೂಪದ ನಂದಿ, ಗಣಪತಿ ಇನ್ನೂ ಮುಂತಾದ ದೇವರುಗಳು ಇದ್ದು ಗರ್ಭಗುಡಿಯ ಎಡ ಭಾಗಕ್ಕೆ ಸೂರ್ಯ, ವಿಷ್ಣು, ಆಂಜನೇಯ, ಕಾಲ ಬೈರವೇಶ್ವರ, ಬೇರೆ ಬೇರೆ ಶೈಲಿಯ ಮೂರ್ತಿ ಶಿಲ್ಪಗಳಿವೆ ನವರಂಗದ ಭುವನೇಶ್ವರಿ ವಿಗ್ರಹವು ಬಹಳ ಸುಂದರವಾಗಿದ್ದು , ಅದರಿಂದ ಇಳಿಬಿಟ್ಟಿರುವ ಒಂದು ಚೌಕಟ್ಟಿನಲ್ಲಿ ಅನೇಕ ಗಂಟೆಗಳನ್ನು ಅಳವಡಿಸಲಾಗಿದ್ದು, ಅವುಗಳು ಏಕಕಾಲದಲ್ಲೇ ಮೊಳಗುವುದೇ ಅದರ ವಿಶೇಷ !

ದೇವಸ್ಥಾನದ ಮುಂಬಾಗದ ಜಗುಲಿಯ 16 ಕಂಬಗಳಲ್ಲಿ, ತೊಲೆಯ ಬಾಗದ ಕಂಬದಲ್ಲಿ ಕೆತ್ತಿರುವ ಆನೆ, ಸಿಂಹ, ವೃಷಭ, ನವಿಲು, ಗಂಡುಬೇರುಂದ, ಗಿಳಿಗಳ ಜೋಡಿ, ಐದು ತಲೆಯ ಹಸು ಮೊದಲಾದ ಉಬ್ಬು ಶಿಲ್ಪಿಗಳ ಕೆತ್ತನೆ ನಯನ ಮನೋಹರವಾಗಿ ಕಂಗೋಳಿಸುತ್ತಾ ಭಾರತೀಯ ಪುರಾಣ ಪುರುಷರ ಸಮೂಹವೇ ಇಲ್ಲಿ ಪ್ರತ್ಯಕ್ಷವಾದಂತಿದೆ ಈ ದೇವಸ್ಥಾನದ ಒಂದೊಂದು ಕಂಬವನ್ನು ಗ್ರಾನೈಟ್‌ನಂತಹ ಕಠಿಣ ಶಿಲೆಯನ್ನು, ಶಿಲ್ಪಿ ಒಲಿಸಿಕೊಂಡು ಕಲೆಯನ್ನು ಅರಳಿಸಿದನೋ, ಎನ್ನುವಂತೆ ಅವುಗಳು ಎದ್ದು ಕಾಣುತ್ತವೆ.

ಇನ್ನು ದೇವಸ್ಥಾನದ ಹಜಾರದಲ್ಲಿ ನೀಲಗಿರಿಸ್ವಾಮಿ, ಶ್ರೀಗುರುಗುಂಡರು, 1ನೇ ನಂಜಾವಧೂತರು, ರಂಗಾವಧೂತರು, ಶ್ರೀರಂಗವಧೂತರು, ಶ್ರೀ ಮುದ್ದುರಂಗಾವಧೂತರು, ಶ್ರೀಪರಮಹಂಸಾವಧೂತರು ಹಾಗೂ ಗುರುಕುಮಾರ ವಧೂತರುಗಳ ಬಾವಚಿತ್ರಗಳನ್ನು ಮತ್ತು ಪಾದುಕೆಗಳನ್ನು ಅನುಕ್ರಮವಾಗಿ ಜೋಡಿಸಲಾಗಿದೆ ದೇವಸ್ಥಾನಕ್ಕೆ ಅಭಿಮುಖವಾಗಿ ಎರಡು ಚಿಕ್ಕನಂದಿ ವಿಗ್ರಹಗಳನ್ನು ಇರಿಸಲಾಗಿದೆ ಈ ದೇವಸ್ಥಾನದ ಎಡಬಾಗಕ್ಕೆ ಮಠವಿದ್ದು, ಅದರಲ್ಲಿ ಎರಡನೇ ನಂಜಾವದೂತಸ್ವಾಮಿಗಳು ನೆಲಸಿದ್ದಾರೆ.

**ಶ್ರೀ ಗುರುಗುಂಡ ಬ್ರಹ್ಮೇಶ್ವರ ಸ್ವಾಮಿ ಮಠ:**

ಶ್ರೀ ಕ್ಷೇತ್ರ ಪಟ್ಟನಾಯಕನಹಳ್ಳಿ(ಸ್ಪಟಿಕಪುರಿ)ಶ್ರೀ ಗುರುಗುಂಡ ಬ್ರಹ್ಮೇಶ್ವರಸ್ವಾಮಿ ಸಂಸ್ಥಾನ ಮಠವು ಸುಮಾರು ಮೂರು ಶತಮಾನದ ಪ್ರಾಚೀನತೆಯನ್ನು ಹೊಂದಿದ್ದು, ಸಮಾಜದ ಎಲ್ಲಾ ವರ್ಗದ ಎಲ್ಲಾಧರ್ಮಗಳ ಜನರ ಭಾವನೆಗಳನ್ನು ಅರ್ಥಮಾಡಿಕೊಂಡು, ಅವರ ನೋವು ನಲಿವುಗಳಿಗೆ ಸ್ಪಂದಿಸುತ್ತಾ ಬಂದಿದೆ. ಸಾಮಾಜಿಕ ನೈತಿಕ, ಶೈಕ್ಷಣಿಕ ಹಾಗೂ ಧಾರ್ಮಿಕವಾಗಿ ಎಲ್ಲಾ ರೀತಿಯ ಪ್ರೋತ್ಸಾಹವನ್ನು ನೀಡುತ್ತಿವೆ. ಈ ನಿಟ್ಟಿನಲ್ಲಿ ಶ್ರೀ ಮಠದ ಪರಂಪರೆಯ ಆರು ಜನ ಮಹಾಸ್ವಾಮಿಗಳು ತಮ್ಮದೇ ಆಗಿರುವ ಅಮೂಲ್ಯವಾದ ಕೊಡುಗೆಗಳನ್ನು ಈ ಸಮಾಜದ ಶ್ರೇಯೋಭಿವೃದ್ಧಿಗಾಗಿ ನೀಡಿರುತ್ತಾರೆ ಎಲ್ಲಾ ಮಹಾ ಸ್ವಾಮಿಗಳನ್ನು ಭಕ್ತಸಮೂಹವು ಭಕ್ತಿ, ಶ್ರದೇಯಿಂದ ಪೂಜಿಸುತ್ತಾ ಬಂದಿವೆ, ಈ ಭವ್ಯ ಪರಂಪರೆಯ ಏಳನೇ ಫೀಠಾದಿಪತಿಗಳಾದ ಪರಮ ಪೂಜ್ಯ ಶ್ರೀಶ್ರೀಶ್ರೀ ನಂಜಾವಧೂತ ಮಹಾಸ್ವಾಮಿಗಳು ಮುಂದುವರಿಸಿಕೊಂಡು ಹೋಗುತ್ತಿರುವುದು ಹೆಮ್ಮೆಯ ವಿಷಯವಾಗಿದೆ ಸ್ವಾಮಿಗಳು ಹಳ್ಳಿ ಹಳ್ಳಿಗಳಲ್ಲಿ ಸಂಚರಿಸಿ, ಶ್ರೀ ಸಾಮಾನ್ಯ ಭಕ್ತ ಸಮೂಹವನ್ನು ಒಗ್ಗೂಡಿಸಿ ಸನ್ಮಾರ್ಗದೆಡೆಗೆ ಕೊಂಡೋಯುತ್ತಾ, ಸಾಮಾಜಿಕ ಅಭಿವೃದ್ಧಿಯ ಚಿಂತನೆಗಳ ಆಧಾರದ ಮೇಲೆ ನೊಂದವರ, ದೀನದಲಿತರ, ಧ್ವನಿ ಇಲ್ಲದವರಿಗೆ ಧ್ವನಿಯಾಗಿ, ಹಸಿದವರ ಹಾಗೂ ರೈತಾಪಿ ವರ್ಗದ ಸಮಸ್ಯೆಗಳನ್ನು ಅರಿತು ಅದರ ಪರಿಹಾರಕ್ಕಾಗಿ ನಿರಂತರ ಚಿಂತನೆಯಲ್ಲಿ ತೊಡಗಿರುವುದರ ಜೊತೆಗೆ, ಅದರ ಶಾಶ್ವತ ಪರಿಹಾರವನ್ನು ಕಂಡುಕೊಳ್ಳುವುದೇ ಪರಪೂಜ್ಯರ ಪರಮದ್ಯೇಯವಾಗಿದೆ.

ಈಗಿನ ಎರಡನೇ ನಂಜಾವಧೂತ ಮಹಾ ಸ್ವಾಮಿಗಳವರು ಚಿಕ್ಕ ವಯಸ್ಸಿನಲ್ಲಿಯೇ ಆದಿ ಚುಂಚನಗಿರಿ ಸಂಸ್ತಾನದ ಜಗದ್ಗುರುಗಳಾಗಿದ್ದ ಶ್ರೀಶ್ರೀಬಾಲಗಂಗಾದರನಾಥ ಮಹಾಸ್ವಾಮಿಗಳಿಂದ ಸನ್ಯಾನ್ಯ ದೀಕ್ಷೆ ಪಡೆದು. ಕ್ರಿ.ಶ. 1990 ರಲ್ಲಿ ಪೀಠಾದಿಪತಿಗಳಾಗಿ ಈ ಮಠಕ್ಕೆ ಹೊಸ ಅಯಾಮ ತಂದವರು ಅಜ್ಞಾತವಾಗಿದ್ದ ಶ್ರೀಮಠಕ್ಕೆ ರಾಷ್ಟ್ರೀಯ ಮನ್ನಣೆಗೆ ಕಾರಣರಾಗಿರುವುದಲ್ಲದೆ, ಮಠದ ಅಭಿವೃದ್ಧಿಯ ಹರಿಕಾರರಾಗಿ ಮುನ್ನಡೆಯುತ್ತಿದ್ದಾರೆ.


ಶ್ರೀಶ್ರೀಶ್ರೀ ನಂಜಾವಧೂತ ಮಹಾಸ್ವಾಮಿಗಳ ಮಾರ್ಗದರ್ಶನದಲ್ಲಿ ಅಮೇರಿಕಾದ ಕೆ.ಆರ್.ಎಸ್. ಪೌಂಡೇಷನ್ ವತಿಯಿಂದ ಮಠದ ಜಮೀನಿನಲ್ಲಿ ಉಚಿತ ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಿದ್ದಾರೆ ಹಾಗೂ ಮಠದಲ್ಲಿ ಎಂ.ಆರ್ ಶ್ರೀನಿವಾಸಯ್ಯನವರ ಸಹಕಾರದಿಂದ ತಜ್ಞ ವೈಧ್ಯರಿಂದ ಉಚಿತ ನೇತ್ರ ಚಿಕಿತ್ಸಾ ಶಿಬಿರವನ್ನು ಏರ್ಪಡಿಸಿ, ಈ ಗ್ರಾಮಾಂತರ ಪ್ರದೇಶದ ಸಾವಿರಾರು ಜನರ ಅಂದತ್ವವನ್ನು ಹೋಗಲಾಡಿಸಿ ದೃಷ್ಟಿಯನ್ನು ಪಡೆದುಕೊಳ್ಳಲು ಸಹಕಾರಿಯಾಗಿ ಅಂದರ ಬಾಳಿಗೆ ಬೆಳಕಾಗಿದ್ದಾರೆ.ಅದೇ ರೀತಿ ತುಮಕೂರು ಸಿದ್ದಾರ್ಥ ಶಿಕ್ಷಣ ಸಂಸ್ಥೆಯ ಸ್ಥಾಪಕರಾದ ಹೆಚ್.ಎಂ. ಗಂಗಾಧರಯ್ಯನವರ ಸ್ಮರಣಾರ್ಥ ಭವ್ಯವಾದ ಪ್ರಾರ್ಥನಾ ಮಂದಿರವನ್ನು ಉದ್ಘಾಟನೆಗೊಳಿಸಿದ್ದಾರೆ ಹಾಗೂ ಆಂದ್ರಪ್ರದೇಶದ ಕೃಷಿ ಸಚಿವರಾಗಿದ್ದ ಶ್ರೀ ರಘುವೀರರೆಡ್ಡಿಯವರ ಸಹಕಾರದಿಂದ ವಿಶಾಲವಾದ ಒಮ್ಮೆಗೆ 1500 ಭಕ್ತಾಧಿಗಳು ಊಟಮಾಡುವ ದಾಸೋಹ ನಿಲಯವನ್ನು ಕಟ್ಟಿಸಿ, ಪ್ರತಿದಿನ ಸಾವಿರಾರು ಮಕ್ಕಳಿಗೆ ಹಾಗೂ ಭಕ್ತರಿಗೆ ಅನ್ನದಾಸೋಹ ನಡೆಸುತ್ತಿದ್ದಾರೆ.

ಈ ಗ್ರಾಮಾಂತರ ಪ್ರದೇಶದ ರೈತ ಮಕ್ಕಳಿಗೆ ಒಳ್ಳೆಯ ಗುಣಮಟ್ಟದ ಶಿಕ್ಷಣವನ್ನು ನೀಡಬೇಕೆಂಬ ಮಹದಾಕಾಂಕ್ಷೆಯಿಂದ ಶ್ರಿನಂಜಾವದೂತರು "ಶ್ರೀ ಗುರುಗುಂಡ ಬ್ರಹ್ಮೇಶ್ವರ ಸ್ವಾಮಿ ವಿದ್ಯಾಸಂಸ್ಥೆ"ಯನ್ನು ಸ್ಥಾಪಿಸಿ ಸಾವಿರಾರು ವಿದ್ಯಾರ್ಥಿಗಳಿಗೆ ಮಾದರಿ ಶಿಕ್ಷಣವನ್ನು ನೀಡುತ್ತಿದ್ದಾರೆ ಹಾಗೂ ಮಠಕ್ಕೆ ಸೇರಿದ ನೂರಾರು ಎಕರೆಗಳ ಜಮೀನಿನಲ್ಲಿ ಹಣ್ಣಿನ ಗಿಡಗಳನ್ನು ಬೆಳಸಿ ಪಶು–ಪಕ್ಷಿಗಳ ಆಹಾರಕ್ಕೆ ಆಸರೆಯಾಗಿ, ಸ್ವಂತ ಕೃಷಿ ಮಾಡುತ್ತಿದ್ದಾರೆ ಶ್ರೀ ನಂಜಾವಧೂತರು!

ಪಟ್ಟನಾಯಕನಹಳ್ಳಿ ಶ್ರೀ ಗುರುಗುಂಡ ಬ್ರಹ್ಮೇಶ್ವರಸ್ವಾಮಿ ಜಾತ್ರೆಯ ಶಿರಾ ಸೀಮೆಯ ಒಂದು ಪ್ರಖ್ಯಾತ ಜಾತ್ರೆ ಪ್ರತಿವರ್ಷ ಜನವರಿ ಮೊದಲ ವಾರದಲ್ಲಿ ಹದಿನೈದು ದಿನಗಳ ಕಾಲ ಜನಗಳ ಮತ್ತು ಜಾನುವಾರುಗಳ ಜಾತ್ರೆ ನಡೆಯುತ್ತದೆ ಜಾತ್ರೆಯ ಮೊದಲನೆ ದಿನ ಮಠದ ಆವರಣದೊಳಗಿರುವ ಬಾವಿಯ ಹತ್ತಿರ ದೇವರನ್ನು ಮೆರವಣಿಗೆಯಲ್ಲಿ ಕರೆತಂದು, ಗಂಗಾಪೂಜೆ ಮಾಡುತ್ತಾರೆ. ಆನಂತರ ಪ್ರತಿದಿನ ರಾತ್ರಿ ಅಪಾ ಸಂಖ್ಯೆಯ ಭಕ್ತರ ಸಮ್ಮುಖದಲ್ಲಿ ದಿನಕ್ಕೊಂದರಂತೆ ವಿಘ್ನೇಶ್ವರನ ಉತ್ಸವ, ಹೂವಿನ ತೇರು, ಕಲ್ಲುಗಾಲಿ ರಥೋತ್ಸವ, ಕೈಲಾಸೋತ್ಸವ, ನಂದಿ ಉತ್ಸವ, ಮುತ್ತಿನಪಲ್ಲಕಿ ಉತ್ಸವಗಳು ನಡೆಯುತ್ತವೆ, ಜಾತ್ರೆ ಪ್ರಾರಂಭವಾಗಿ ಏಳನೇ ದಿನ ಶ್ರೀ ಗುರುಗುಂಡ ಬ್ರಹ್ಮೇಶ್ವರ ಸ್ವಾಮಿ ಬೃಹತ್ ಕಲ್ಲುಗಾಲಿ ರಥೋತ್ಸವ ಬಹಳ ವಿಜೃಂಬಣೆಯಿಂದ ನಡೆಯುತ್ತದೆ, ಅಂದು ಸುತ್ತಮುತ್ತಲಿನ ನೂರಾರು ಗ್ರಾಮಗಳ ಭಕ್ತರುಗಳು ಆರತಿ ಮಹೋತ್ಸವಗಳನ್ನು ನಡೆಸಿ, ಹರಕೆ ಹೊತ್ತ ಭಕ್ತರು, ಅಪಾರ ಪ್ರಮಾಣದ ಹೂವಿನ ಹಾರಗಳಿಂದ ರಥವನ್ನು ಸಿಂಗರಿಸಿ, ಭಕ್ತಿ ಬಾವದಿಂದ ಹರ್ಷೋದ್ಘಾರಮಾಡುತ್ತಾ ರಥವನ್ನು ಎಳೆದು ಪುನಿತರಾಗುತ್ತಾರೆ

ಜಾತ್ರೆಯ ಸಂದರ್ಭದಲ್ಲಿ ವಿವಿದ ಕ್ಷೇತ್ರಗಳಲ್ಲಿ ಅಂದರೆ ಕೃಷಿ, ತೋಟಗಾರಿಕೆ, ಕೈಗಾರಿಕೆ, ಆರೋಗ್ಯ,ಅರಣ್ಯ, ರೇಷ್ಮೆ, ಶಿಕ್ಷಣ ಇನ್ನು ಹಲವಾರು ರಂಗಗಳಲ್ಲಿ ಆದ ಬದಲಾವಣೆಯನ್ನು, ರೈತರಿಗೆ ಅವುಗಳಿಂದ ಆಗುವ ಪ್ರಯೋಜನ ಇತ್ಯಾದಿಗಳ ಅರಿವು ಮೂಡಿಸಲು ಕೃಷಿ ಮತ್ತು ಕೈಗಾರಿಕೆ ವಸ್ತುಪ್ರದರ್ಶನವನ್ನು ವ್ಯವಸ್ಥಿತ ರೀತಿಯಲ್ಲಿ ಏರ್ಪಡಿಸಲಾಗುತ್ತದೆ, ಪ್ರತಿದಿನಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿ ಮನರಂಜನೆ ನೀಡುತ್ತಾರೆ ಹಾಗೂ ದನಗಳ ಜಾತ್ರೆಗೆ ಬಂದ ಉತ್ತಮ ರಾಸುಗಳಿಗೂ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಉತ್ತಮ ಪ್ರದರ್ಶನ ನೀಡಿದವರಿಗೆ ಬಹುಮಾನಗಳನ್ನು ನೀಡಿ ಪ್ರೋತ್ಸಾಹಿಸಲಾಗುತ್ತದೆ.

ಜಾತ್ರೆಯ ಕೊನೆಯ ದಿವಸ ಸ್ವಾಮಿಯನ್ನು ಮುತ್ತಿನ ಪಲ್ಲಕ್ಕಿಯಲ್ಲಿ ಕೂರಿಸಿ ನಂದಿಕುಣಿತ ಡೊಳ್ಳುಕುಣಿತ, ವೀರಗಾಸೆ ಕುಣಿತದೊಂದಿಗೆ ವಿಜೃಂಬಣೆಯಿಂದ ಮೆರವಣಿಗೆ ಮಾಡಿ, ಸಿಡಿಮದ್ದಿನ ಕಾರ್ಯಕ್ರಮ ಹಾಗೂ ವಿವಿದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿ, ಶಿರಾ ತಾಲ್ಲೂಕಿನ ನೂರಾರು ಗ್ರಾಮಗಳಿಂದ ಆಗಮಿಸಿದ ಮಠದ ಭಕ್ತರ ಮನ ಸಂತೋಷಪಡಿಸಿ 15 ದಿವಸಗಳ ಕಾಲ ಪಟ್ಟನಾಯಕನಹಳ್ಳಿಯಲ್ಲಿ ನಡೆದ ಶ್ರೀ ಗುರುಗುಂಡಬ್ರಹ್ಮೇಶ್ವರಸ್ವಾಮಿ ಅದ್ದೂರಿ ಜಾತ್ರಾ ಮಹೋತ್ಸವವು ಸಂಪನ್ನವಾಗುತ್ತದೆ.


ತಡಕಲೂರು ಕಟ್ಟೆಮನೆ
ಶ್ರೀ ದಿಬ್ಬದ ವೀರಬೊಮ್ಮಣ್ಣಸ್ವಾಮಿ ಜಾತ್ರಾ ಮಹೋತ್ಸವ ಆಹ್ವಾನ ಪತ್ರಿಕೆ
ವೀರಬೊಮ್ಮನಹಳ್ಳಿ, ಹುಲಿಕುಂಟೆ ಹೋಬಳಿ ಶಿರಾ ತಾಲ್ಲೂಕು ತುಮಕೂರು ಜಿಲ್ಲೆ
ಕಲ್ಲುಗಾಲಿ ರಥೋತ್ಸವ
ಶ್ರೀ ರಾಮನವಮಿ ಕಾರ್ಯಕ್ರಮ
ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕೆ ವರ್ಷಂಗಳು 1939ಕ್ಕೆ ಸರಿಯಾದ ಸಂವತ್ಸರದ ಚೈತ್ರದ ಶುದ್ಧ
ಶ್ರೀರಾಮನವಮಿಯಿಂದ ಮೊದಲುಗೊಂಡು ದಿನಾಂಕ : 05-04-2017 ಬುಧವಾರದಿಂದ ದಿನಾಂಕ : 10-04-2017ನೇ
ಸೋಮವಾರದವರೆಗೆ ಜಾತ್ರಾ ಮಹೋತ್ಸವ ಕಾರ್ಯಕ್ರಮಗಳು ನಡೆಯುವಂತೆ ಭಗವತ್
ಪ್ರೇರಣೆಯಾಗಿರುವುದರಿಂದ ಅಣ್ಣ ತಮ್ಮಂದಿರು ಭಕ್ತಾದಿಗಳು ಭಾಗವಹಿಸಿ
ಶ್ರೀ ದಿಬ್ಬದ ವೀರಬೋಮ್ಮಣ್ಣಸ್ವಾಮಿ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.
ಕಾರ್ಯಕ್ರಮಗಳು
ದಿ॥ 05-04-2017 ಬುಧವಾರ ಬೆಳಿಗ್ಗೆ 5 ಗಂಟೆಗೆ ಗಂಗಾಪೂಜೆ, ನವಗ್ರಹ ಪೂಜೆ, ಭಜನೆ ಮುಂತಾದ ಕಾರ್ಯಕ್ರಮಗಳು
ದಿ॥ 06-04-2017ನೇ ಗುರುವಾರ ಭಜನೆ ಮುಂತಾದ ಕಾರ್ಯಕ್ರಮಗಳು
ದಿ॥ 07-04-2017ನೇ ಶುಕ್ರವಾರ "ಅಗ್ನಿಕುಂಡ" ಮುಂತಾದ ಕಾರ್ಯಕ್ರಮಗಳು
ದಿ॥ 08-04-2017ನೇ ಶನಿವಾರ ಬೆಳಿಗ್ಗೆ 11-00 ಗಂಟೆಗೆ ಮಂಗಳಾರತಿ, ನಂತರ ಗ್ರಾಮಸ್ಥರಿಂದ
ಸಾಯಂಕಾಲ 8-30 ಗಂಟೆಗೆ ಕುರುಕ್ಷೇತ್ರ ನಾಟಕ
ದಿ॥ 09-04-2017 ನೇ ಭಾನುವಾರ ಬೆಳಿಗ್ಗೆ 10-00 ಗಂಟೆಯಿಂದ ಆರತಿ, ಹರಿಸೇವೆ
ವೀರಬೋಮ್ಮನಹಳ್ಳಿ ಗ್ರಾಮಸ್ಥರಿಂದ ಅಣ್ಣ ತಮ್ಮಂದಿರುಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ
ರಾತ್ರಿ ಕಲ್ಲುಗಾಲಿ ರಥೋತ್ಸವ
ದಿ॥ 10-04-2017 ನೇ ಸೋಮವಾರ ವಸಂತೋತ್ಸವ ಮಹಾಮಂಗಳಾರತಿ
ಮೇಲ್ಕಂಡ 6 ದಿನಗಳ ಕಾಲ ಅನ್ನದಾಸೋಹ ಏರ್ಪಡಿಸಲಾಗಿದೆ.
ಕಾರ್ಯಕರ್ತರು
ಗುರುಗಳು ಹಳೇಪೂಜಾರಿಗಳು, ಪೂಜಾರಿಗಳು, ಏಳುಬಂಡಿ ಬಂಡಿಕಾರರು, ಮಟ್ಟಕ್ಕಿ ಯಜಮಾನರು,
ಅಣ್ಣತಮ್ಮಂದಿರು, ವೀರಬೊಮ್ಮನಹಳ್ಳಿ ಗ್ರಾಮಸ್ಥರು, ಕೋಲುಕಾರರು, ದಳವಾಯಿಗಳು,
ಹಾಗೂ 12 ಮಂದಿ ಕೈವಾಡಸ್ಥರು ಮತ್ತು ಭಕ್ತಾದಿಗಳು
ವಿಶೇಷ ಸೂಚನೆ : ತಡಕಲೂರು ಕಟ್ಟೆಮನೆಗೆ ಸೇರಿದ ಗೋತ್ರದ ಅಣ್ಣ ತಮ್ಮಂದಿರು ಕುಳ ಒಂದಕ್ಕೆ
100 ರೂ. 2ಸೇರು ಅಕ್ಕಿ, ಬಂಡಿಕಾರರ ವಶಕ್ಕೆ ಕೊಟ್ಟು ರಶೀದಿ ಪಡೆಯತಕ್ಕದ್ದು
ಪ್ರಕಟಣೆ : ತಡಕಲೂರು ಕಟ್ಟೆಮನೆಗೆ ಸೇರಿದ ಗೋತ್ರದ ಏಳು ಬಂಡಿ ಬಂಡಿಕಾರರು ಮತ್ತು ವೀರಬೊಮ್ಮನಹಳ್ಳಿ ಗ್ರಾಮಸ್ಥರು
ಸರ್ವರಿಗೂ ಆದರದ ಸುಸ್ವಾಗತ
ಬಾಣಗೆರೆ ಪ್ರಕಾಶನ...
ಅಮ್ಮಾಜಿ ಪ್ರಿಂಟರ್ಸ್
9900367237-9901108961

## 3. ವೀರಬೊಮ್ಮನಹಳ್ಳಿ ಶ್ರೀ ದಿಬ್ಬದ ವೀರಬೊಮ್ಮಣ್ಣಸ್ವಾಮಿ ಜಾತ್ರಾ ಮಹೋತ್ಸವ:

**ಪೀಠಿಕೆ:**

ಶಿರಾ –ಅಮರಾಪುರ ಮಾರ್ಗದಲ್ಲಿ ವೀರ ಬೊಮ್ಮನಹಳ್ಳಿ ಗೇಟ್‌ನಿಂದ ಎಡಭಾಗಕ್ಕೆ 2 ಕಿ.ಮೀ ಹಾಗೂ ಶಿರಾದಿಂದ 28 ಕಿ.ಮೀ ದೂರದಲ್ಲಿರುವ ಈ ಗ್ರಾಮವು ಜೋಡಿ ಗ್ರಾಮವಾಗಿದೆ, ಈ ಗ್ರಾಮದಲ್ಲಿ ಇತಿಹಾಸ ಪ್ರಸಿದ್ಧ ವ್ಯಕ್ತಿಯಾದ ವೀರ ಬೊಮ್ಮಣ್ಣನು ಇಲ್ಲಿ ಬಾಳಿ, ಬದುಕಿ, ಕೊಟ್ಟಮಾತಿನಂತೆ ನಡೆದು ಮರಣ ಹೊಂದಿದ ನಂತರ, ಅವನ ಹೆಸರಿನಲ್ಲಿ ದೇವಸ್ಥಾನ, ವೀರಗಲ್ಲು ಹಾಗೂ ಪೌಳಿಗಳು ಇರುವುದರಿಂದ ಈ ಗ್ರಾಮಕ್ಕೆ ವೀರಬೊಮ್ಮನಹಳ್ಳಿ ಎಂದು ಹೆಸರಾಯಿತು ಎಂದು ಈ ಗ್ರಾಮದ ವೀರಣ್ಣನವರು ತಿಳಸಿರುತ್ತಾರೆ.

ಈ ಗ್ರಾಮದ ಪೂರ್ವ ದಿಕ್ಕಿನಲ್ಲಿ ಪ್ರಸಿದ್ಧವಾದ ದಿಬ್ಬದ ವೀರಬೊಮ್ಮಣ್ಣನ ಸನ್ನಿದಿ ಇದೆ. ಸುತ್ತಲೂ ಆರಡಿ ಎತ್ತರದ ಪೌಳಿ (ಕಾಂಪೊಂಡು) ಇದ್ದು. ಇದರಲ್ಲಿ ಐದು ವೀರಗಲ್ಲುಗಳನ್ನು, ಒಂದು ನಾಗರಕಲ್ಲು ಇದೆ. ಈ ಐದು ವೀರಗಲ್ಲುಗಳ ಒಲಬಾಗಕ್ಕೆ ನಾಲ್ಕುವರೆ ಅಡಿ ಎತ್ತರದ ಚಿಕ್ಕಗುಡಿ ಇದೆ ಇದರಲ್ಲಿ ಹದಿನಾರು ಆಕಾರವಿಲ್ಲದ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ ಈ ವೀರಗಲ್ಲುಗಳ ಮುಂದೆ ನಾಲ್ಕು ಅಡಿ ಎತ್ತರದ ಪೌಳಿ ಇದ್ದು ಇದರಲ್ಲಿ ಎರಡು ದೇಹ, ಒಂದು ತಲೆಯ ನಂದಿಯ ವಿಗ್ರಹಗಳನ್ನು ಬಿಡಿಸಲಾಗಿದೆ, ಇತ್ತೀಚೆಗೆ ಸರ್ಕಾರದವರು ದೇವಸ್ಥಾನದ ಹಿಂಬಾಗದಲ್ಲಿ ವಿಶಾಲವಾದ ಸಮುದಾಯ ಭವನವನ್ನು ನಿರ್ಮಿಸಿದ್ದಾರೆ. ಗ್ರಾಮದಲ್ಲಿ ಇತ್ತೀಚೆಗೆ ನಿರ್ಮಿಸಿದ ಈಶ್ವರ ಹಾಗೂ ವಿನಾಯಕ ದೇವಸ್ಥಾನಗಳು ಇವೆ. ಮತ್ತು ಗ್ರಾಮದೇವತೆ ಕರಿಯಮ್ಮ, ಕೊಲ್ಲಾಪುರದಲ್ಲಿ ಹಾಗೂ ಗೌರಸಂದ್ರದ ಮಾರಮ್ಮನ ದೇವಸ್ಥಾನಗಳು ಇವೆ.

**ಇತಿಹಾಸ:**

ದಿಬ್ಬದ ವೀರ ಬೊಮ್ಮನಿಗೆ ಇವನೂ ಸೇರಿ ನಾಲ್ಕು ಜನ ಸಹೋದರರು ಎಂದರೆ ಶಿವಣ್ಣ, ಗಂಗಣ್ಣ, ಲಿಂಗಣ್ಣ ಮತ್ತು ವೀರಣ್ಣ ಎಂಬುವರುಗಳು ಇದ್ದರು ಯಾದಲಡುಕು ಗ್ರಾಮದ ಎಮ್ಮೆನೋರು ಕುಲದ ಪೂಜಾರ ರಂಗಪ್ಪನವರು ಸಾಕಿಕೊಂಡಿದ್ದರು. ರಂಗಪ್ಪನಿಗೆ ರಂಗಪ್ಪನಿಗೆ ನಾಗಮ್ಮ ಎಂಬ ಹೆಣ್ಣು ಮಗಳಿದ್ದಳು. ಇವಳಿಗೆ ವೀರಣ್ಣನ ಸಹೋದರ ಶಿವಣ್ಣನಿಗೆ ಕೊಟ್ಟು ವಿವಾಹದ ನಂತರ ನಾಗಮ್ಮನಿಗೆ

ಗಂಡುಮಗುವಾಯಿತು. ಮುಂಗಾರು ಮಳೆ ಬಂದಾಗ ರಂಗಪ್ಪನವರ ಜಮೀನಿನಲ್ಲಿ ವೀರಣ್ಣನವರ ಸಹೋದರರು ಮತ್ತು 3 ತಿಂಗಳ ಬಾಣಂತಿ ನಾಗಮ್ಮನೂ ಸೇರಿ ಒಂದೇ ದಿನ ಹನ್ನೆರಡು ಖಂಡುಗ ಸಜ್ಜೆಯನ್ನು ಬಿತ್ತಿ, ಕೋಳಿ ಕೂಗುವ ಹೊತ್ತಿಗೆ ಮನೆಗೆ ಬರುತ್ತಾರೆ, ನಾಗಮ್ಮ ಹೊಲದಿಂದ ಮನೆಗೆ ಬರುವಷ್ಟರಲ್ಲಿ ಮಗು ಎದ್ದು ಹಸುವಿನಿಂದ ಆಳುತ್ತಿರುತ್ತೆ, ಆಗ ಆಕೆ ಕೈಕಾಲುಗಳನ್ನು ಸಹ ತೊಳೆಯದೆ, ಹಾಲು ಕೊಡಲು ಹೋದಾಗ, ಆಕೆ ಹಗಲು ರಾತ್ರಿ ಎನ್ನದೆ ಹೊಲದಲ್ಲಿ ಕೆಲಸ ಮಾಡಿದ್ದರಿಂದ ಎದೆಯಲ್ಲಿ ಹಾಲು ಇರಲಿಲ್ಲ ವೀರಣ್ಣ ನೊಗವನ್ನು ಹೆಗಲಿಗೆ ಹಾಕಿಕೊಂಡು ಹೊಲದಿಂದ ಮನೆಗೆ ಬಂದಾಗ ಆಳುತ್ತಿರುವ ಮಗುವಿಗೆ, ತಾಯಿ ನಾಗಮ್ಮ ನಿಮ್ಮಪ್ಪಗಳೇನು ಹಾಲು ಕರೆಯುವ ಹಸುಗಳನ್ನು ಸಾಕಿದ್ದಾರೆಯೇ, ನಿನಗೆ ಹಾಲು ಕುಡಿಸಲು, **"ನನ್ನ ನಾಲಿಗೆಯನ್ನಾದರೂ ಸೀಳಿ, ನಿನ್ನ ಹೊಟ್ಟೆಗೆ ನನ್ನ ರಕ್ತ ಹೊಯ್ಯಲೇ"** ಎಂದು ಸಿಟ್ಟಿನಿಂದ ಹೇಳುತ್ತಿದ್ದಳು, ಈ ಮಾತುಗಳನ್ನು ಮೈದುನನಾದ ವೀರಣ್ಣ ಕೇಳಿಸಿಕೊಂಡು, ಹೆಗಲಿನ ಮೇಲಿದ್ದ ನೊಗವನ್ನು ಬೇಸರದಿಂದ ಪಡುವಲ ದಿಕ್ಕಿಗೆ ಎಸೆದು, ನಾನು ಗೊಲ್ಲರ ಮನೆಯಲ್ಲಾದರೂ ಸಂಬಳ ಇದ್ದು, ಹಾಲು ಕರೆಯುವ ಗೋವುಗಳನ್ನು ಹೊಡೆದುಕೊಂಡು ಬರುವೆನು ಎಂದು ಹೇಳಿ ಅದೇ ದಿಕ್ಕಿಗೆ ಹೊರಟು ಹೋದನು.

ವೀರಣ್ಣನು ಬಹುದೂರ ನಡೆದು ಸಾಕಾಗಿ ಒಂದು ಕಲ್ಯಾಣಿಯ ಹತ್ತಿರ ನೀರು ಕುಡಿದು ದಣಿವಾರಿಸಿಕೊಳ್ಳುತ್ತಿದ್ದನು, ಆಗ ಹತ್ತಿರದ ಗೊಲ್ಲರ ಹಟ್ಟಿಯ ಹೆಂಗಸರು ಈ ಕಲ್ಯಾಣಿಯಲ್ಲಿ ನೀರು ತೆಗೆದುಕೊಂಡು ಹೋಗಲು ಬಂದಿದ್ದರು ಪ್ರತಿದಿನ ನೀರಿಗೆ ಬಂದಾಗ ಯಾರು ಇರುತ್ತಿರಲಿಲ್ಲ. ಇಂದು ಯಾರೋ ಒಬ್ಬ ಅಜ್ಜ ಕುಳಿತ್ತಿದ್ದಾನೆ ಎಂದು ಅಜ್ಜನನ್ನು ಯಾವ ಊರು, ಎಲ್ಲಿಂದ ಬಂದಿರುವಿರಿ ಎಂದು ವಿಚಾರಿಸಿದರು, ಅಜ್ಜ ಬೇಸರದಿಂದ ಯಾವುದೋ ಊರು ಎಂದು ಹೇಳಿ ಸುಮ್ಮನಾದನು. ಮತ್ತೆ ಹೆಂಗಸರು ನೀರಿಗೆ ಬಂದಾಗ, ಅಜ್ಜ ತನ್ನ ಜಡೆಯನ್ನು ಕಲ್ಯಾಣಿಯ ನೀರಿನಲ್ಲಿ ಬಿಟ್ಟಿದ್ದನು,ಅವು ಹಾವಾಗಿ ಗಡಿಗೆಯಲ್ಲಿ ಬರುತ್ತಿದ್ದವು, ಹಾವುಗಡಿಗೆಯಲ್ಲಿ ಬರುತ್ತಿರುವುದರಿಂದ ನೀರು ತುಂಬಿಕೊಳ್ಳಲು ಹೆದರಿಕೊಂಡು ಹೆಂಗಸರು ಮನೆಗೆ ವಾಪಸ್ ಬಂದು, ನಡೆದ ವಿಚಾರವನ್ನು ಮನೆಯಲ್ಲಿ ತಿಳಿಸಿದರು ಆ ಹಟ್ಟಿಯ ಒಂಭತ್ತು ಜನ ಗಂಡಸರು ಕಲ್ಯಾಣಿಯ ಹತ್ತಿರ ಬಂದು ಆ ಅಜ್ಜನನ್ನು ಹಟ್ಟಿಗೆ ಕರೆದುಕೊಂಡು ಬಂದು ಊರಮುಂದಿನ ಜಗುಲಿಯ ಮುಂದೆ ಕುಳ್ಳಿರಿಸಿ, ವಿಚಾರಣೆ ಮಾಡಿದರು. ಆಗ ಅಜ್ಜ ನನಗೆ ಯಾರ ದಿಕ್ಕು ದೆಸೆ ಇಲ್ಲಾ, ನನಗೆ ಯಾವುದಾದರೂ ಕೆಲಸ ಕೊಡಿ ಎಂದನು ಆಗ ಹಟ್ಟಿಯ ಗೌಡರು ನನ್ನ ಮನೆಯಲ್ಲಿ ದನ ಕಾಯ್ದುಕೊಂಡು ಇರು ಎಂದು ಹೇಳಿದನು.

ಅದರಂತೆ ಗೌಡರು ಒಪ್ಪಿ ಅಜ್ಜನಿಗೆ ಹೊಸಬಟ್ಟೆ ಹೊಲಿಸಿ, ಕ್ಷೌರ, ಸ್ನಾನ ಮಾಡಿಸಿ, ಊಟ ಮಾಡಿಸಿದ ನಂತರ, ಚಪ್ಪಲಿ, ಕರಿ ಕಂಬಳಿ ಕೊಟ್ಟು ದನಕಾಯಲು ಕಳುಹಿಸಿದನು, ಹೀಗೆ ವರ್ಷಾನುಕಾಲ ಗೌಡರ ಮನೆಯಲ್ಲಿ ಊಟಮಾಡಿ, ದನಮೇಯಿಸಿಕೊಂಡು, ಮನೆ ಮಗನಂತೆ ನಂಬಿಕಸ್ತನಾಗಿ ಇರುತ್ತಿದ್ದನು. ಈ ಅಜ್ಜ ಗೌಡರ ದನ ಕಾಯುವ ಮೊದಲು ಒಂದು ಹಸು ಕರು ಹಾಕಿದರೆ, ಒಂಭತ್ತು ಹಸುಗಳು ಕಂದು ಹಾಕಿಕೊಳ್ಳುತ್ತಿದ್ದವು ಆದರೆ ಈಗ ಎಲ್ಲಾ ಗೊಡ್ಡು ಹಸುಗಳೆಲ್ಲಾ ಗರ್ಭವಾಗಿ ಕರು ಹಾಕುತ್ತಿದ್ದವ. ಇದರಿಂದ ಗೌಡರಿಗೆ ವೀರಣ್ಣ ತಾತನ ಬಗ್ಗೆ ಅಪಾರ ನಂಬಿಕೆ ಉಂಟಾಯಿತು.

ಗೊಲ್ಲರಿಗೆ ಪಕ್ಕದೂರಿನ ದೇವಸ್ಥಾನದಲ್ಲಿ "ಕಟ್ಟೆಗೆ ಹಾಲು ಹೋಯ್ಯುವ ಹಬ್ಬ"ಬಂದಿತ್ತು ಗೌಡರು ಈ ಹಬ್ಬಕ್ಕೆ ವೀರಣ್ಣ ತಾತನನ್ನು ಕರೆದಾಗ, ನನಗೆ ದನಗಳು ಜಾಸ್ತಿ ಇವೆ, ಬರಲು ಆಗುವುದಿಲ್ಲ, ನಾನು ಮನೆ ಮತ್ತು ದನಗಳನ್ನು ನೋಡಿಕೊಂಡು ಇಲ್ಲೆ ಇರುತ್ತೇನೆ ಎಂದು ಹೇಳಿದನು, ಆಗ ಗೌಡರ ಸೊಸೆಗೆ ಈ ತಾತನನ್ನು ಒಬ್ಬನೇ ಮನೆಯಲ್ಲಿ ಬಿಟ್ಟರೆ, ಕಳ್ಳತನ ಮಾಡಬಹುದೆಂಬ ಅನುಮಾನ ಶುರುವಾಗಿತ್ತು, ಆದರೆ ಅವಳು ಯಾರಿಗೂ ಹೇಳಿಕೊಳ್ಳಲಿಲ್ಲ. ಬೆಳಿಗ್ಗೆ ಕಟ್ಟೆಯ ಅಭಿಷೇಕಕ್ಕೆ ಪಂಚ ಕಲ್ಯಾಣಿಯ (ಐದು ಮೊಲೆಯ ಹಸು) ಹಸುವಿನಲ್ಲಿ ಎರಡು ಕೊಡ ಹಾಲನ್ನು ಕರೆದು ಗೌಡರ ಜೊತೆ ದೇವಸ್ಥಾನಕ್ಕೆ ಕಳುಹಿಸಿದನು ಮತ್ತೆ ಗೌಡರು ಅಜ್ಜನಿಗೆ ನೀನು ದನಗಳನ್ನು ಮದ್ಯಾಹ್ನದವರೆವಿಗೆ ಮೇಯಿಸಿ, ದನಗಳನ್ನು ರೊಪ್ಪದಲ್ಲಿ ಕೂಡಿ, ಬೀಗ ಹಾಕಿ, ಪಕ್ಕದೂರಿನಲ್ಲಿ ನಡೆಯುವ ಹಬ್ಬಕ್ಕೆ ಬಾ ಎಂದು ಒತ್ತಾಯಿಸಿದನು ಆಗ ಗೌಡರ ಮಾತನ್ನು ಮೀರಬಾರದು ಎಂದು ಅಜ್ಜ ಮದ್ಯಾಹ್ನದವರೆವಿಗೂ ದನ ಮೇಯಿಸಿ, ರೊಪ್ಪದಲ್ಲಿ ಕೂಡಿ, ಬೀಗಹಾಕಿ ದೇವಸ್ತಾನಕ್ಕೆ ಬಂದನು, ದೇವರ ದರ್ಶನ ಮಾಡಿ ತೀರ್ಥಪ್ರಸಾದ ಪಡೆದ ಅಜ್ಜ, ನಾನು ದನಗಳನ್ನು ರೊಪ್ಪದಲ್ಲಿ ಬಿಟ್ಟು ಬಂದಿದ್ದೇನೆ, ವಾಪಸ್ಸ್ ಹೋಗುತ್ತೇನೆ ಎಂದು ಗೌಡರಿಗೆ ತಿಳಿಸಿದರು, ಆಗ ಗೌಡರು ಮನೆಯವರೆಲ್ಲರೂ ಇವತ್ತು ರಾತ್ರಿ ದೇವಸ್ಥಾನದಲ್ಲಿ ನಡೆಯುವ ಉತ್ಸವದಲ್ಲಿ ಬಾಗವಹಿಸಿ ಬೆಳಿಗ್ಗೆ ಹಟ್ಟಿಗೆ ಬರುತ್ತೇವೆ ಅಜ್ಜ ಹಾಲು ಕರೆದು ಕಾಯಿಸಿ ಹೆಪ್ಪಾಕಿ, ಮನೆಯಲ್ಲೇ ಇಂದು ರಾತ್ರಿ ಮಲಗಲಿ ಎಂದು, ಸೊಸೆಗೆ ಮನೆಯ ಬೀಗ ಕೊಡು ಎಂದನು. ಆಗ ಸೋಸೆ ಮನೆಯ ಬೀಗ ಕೊಡಲು ನಿರಾಕರಿಸಿದಳು, ಇದರಿಂದ ಬೇಸರಗೊಂಡ ಅಜ್ಜ, ನಾನು ಗೌಡರ ಮನೆಯಲ್ಲಿ ಮಗನಾಗಿ, ನಂಬಿಕೆಯಿಂದ ದುಡಿದಿದ್ದರೂ ನನ್ನನ್ನು ನಂಬಲಿಲ್ಲ. ನಂಬಿಕೆಗೆ ಅರ್ಹನಲ್ಲನಾದ ನಾನು ಒಂದು ಕ್ಷಣವೂ ಈ ಮನೆಯಲ್ಲಿರಬಾರದು ಎಂದು ತೀರ್ಮಾನಮಾಡಿ ಹಟ್ಟಿಗೆ ಬಂದು, ಕೊಟ್ಟಿಗೆಯಲ್ಲಿದ್ದ ದನಗಳನ್ನು ಹೊಡೆದುಕೊಂಡು ಕುನ್ನಿಕೆರೆಯ ತೊರೆಯ ದಂಡೆಗೆ ಬಂದನು ತೊರೆಯು ದಾರಾಕಾರವಾಗಿ ಹರಿಯುತ್ತಿದ್ದುದರಿಂದ ತೊರೆ ದಾಟಲು ಕಷ್ಟವಾಯಿತು, ಆ ಸಮಯದಲ್ಲಿ ಮ್ಯಾಸ

ಬೇಡರು, ನೀರಿನಲ್ಲಿ ಗಾಳಹಾಕಿರುವ ಜಾಗದಲ್ಲಿ ದನಗಳನ್ನು ತೊರೆ ದಾಟಿಸಲು ಪ್ರಯತ್ನಿಸುತ್ತಾನೆ. ಆದರೆ ಸಾಧ್ಯವಾಗುವುದಿಲ್ಲ.

ಆಗ ವೀರಣ್ಣನು ಗಂಗಾಮಾತೆಯನ್ನು (ತೊರೆ ನೀರು) ತೆಗೆದುಕೊಂಡು ಸೂರ್ಯ ನಮಸ್ಕಾರ ಮಾಡಿ " ನನ್ನ ಶಿರ ತೆಗೆದು ಮಂಗಳಾರತಿ ಮಾಡುತ್ತೇನೆ" ತೊರೆಯಿಂದ ನನ್ನ ದನಗಳನ್ನು ಆ ಕಡೆ ದಂಡೆಗೆ ದಾಟಿಸು ಎಂದು ಗಂಗಾ ಮಾತೆಯನ್ನು ಬೇಡಿಕೊಳ್ಳುತ್ತಾನೆ. ಆಗ ವೀರಣ್ಣನು ಮ್ಯಾಸ ಬೇಡರಿಗೆ ನನ್ನ ತಲೆ ತೆಗೆದು ಗಂಗಾ ದೇವತೆಗೆ ಆರತಿ ಮಾಡಿ ನಂತರ ತಲೆಯನ್ನು (ರುಂಡವನ್ನು) ಮುಂಡಕ್ಕೆ ಕೂಡಿಸಿರಿ ಎಂದು ತಿಳಿಸುತ್ತಾನೆ. ಆದರಂತೆ ಮ್ಯಾಸ ಬೇಡರು ವೀರ ಬೊಮ್ಮಣ್ಣನ ತಲೆ ತೆಗೆದು ಆರತಿ ಮಾಡಿ, ಧಾರಾಕಾರವಾಗಿ ರಕ್ತ ಹರಿಯುತ್ತಿರುವಾಗ ಆ ರುಂಡವನ್ನು ಕೂಡಿಸಲು ಸಾಧ್ಯವಾಗದೆ, ಅದನ್ನು ಅಲ್ಲೆ ತೆಗೆದು ಬಿಸಾಡಿ, ಹೊರಟುಹೋಗುತ್ತಾರೆ. (ಈಗ ವೀರ ಬೊಮ್ಮಣ್ಣನ ರುಂಡವನ್ನು ಕುನ್ನಿಕೆರೆ ಬಯಲಿನಲ್ಲೆ ಸಮಾದಿ ಮಾಡಿರುತ್ತಾರೆ.)

ಆ ಮುಂಡವು ದೈವ ಶಕ್ತಿಯಿಂದ ಉರುಳಿ–ಉರುಳಿ ಕೋಡಿಹಳ್ಳಿ ಸಮೀಪಕ್ಕೆ ಬಂದು, ಕೊಂಡಾಲಮ್ಮನ ಹಾವಿನ ದನದ ಸಮೇತ ನೆಲೆಸಲು ಜಾಗ ಕೇಳಿಕೊಂಡಿತು, ನನ್ನ ಜಾಗ ನನಗೆ ಸಾಲದು, ಮುಂದೆ ಸ್ವಲ್ಪ ದೂರ ಹೋದರೆ ಗುಂಡಾಂಜನೇಯ ನೆಲಸಿದ್ದಾನೆ, ಅಲ್ಲಿಗೆ ಹೋಗು, ಅವರಲ್ಲಿ ಬಹಳ ಜಾಗವಿದೆ ಎಂದು ಹೇಳಿದಳು, ವೀರಬೊಮ್ಮಣ್ಣನಿಗೆ ಜಾಗ ನೀಡದ ಕಾರಣ, ಕೊಂಡಾಲಮ್ಮನಿಗೆ " ನಿನ್ನ ಹೊಲದ ಮೇರೆ ತುಳಿಯುವುದಿಲ್ಲ, ಉಗುಳು ನುಂಗುವುದಿಲ್ಲ, ಆಳುವ ಮಕ್ಕಳಿಗೆ ಹಾಲು ಕೊಡುವುದಿಲ್ಲ" ಎಂದು ಶಪಿಸಿ ಬಂದನು.ಅದರಂತೆ ಕುಂಚಿಟಿಗರ ಅಳುವನವರ ಕುಲದವರು ಇಂದೂ ಸಹಾ ಕೋಡಿಹಳ್ಳಿ ಹೊಲ ಮೇರೆ ತುಳಿಯುವುದಿಲ್ಲ.

ಅಲ್ಲಿಂದ ಮುಂಡ ಉರುಳಿಕೊಂಡು ಬಂದು ಗುಂಡಾಂಜನೇಯನ(ಹಾವಿನವರ ಮನೆದೇವರು) ಹತ್ತಿರ ಬಂದು ಜಾಗ ಬೇಡಿದಾಗ, ನನ್ನ ಜಾಗ ನನಗೆ ಸಾಲದು, ನನಗೆ ನೆಂಟ, ನಿನಗೆ ಅಣ್ಣ ತಮ್ಮ ಎಂಬ ಬಾವನೆಯಿಂದ ರಂಗನಾಥ ಸ್ವಾಮಿಯನ್ನು ಬೇಡಿಕೋ, ಅವನು ಜಾಗ ಕೊಟ್ಟರೆ, ನೀನು ಅಲ್ಲೆ ನೆಲಸು, ಎಂದು ಹೇಳಿದ ಮತ್ತೆ ಮುಂಡದಲ್ಲಿ ಉರುಳಿಕೊಂಡು ಕ್ಯಾದಿಗುಂಟೆ ಗ್ರಾಮದ ರಂಗನಾಥಸ್ವಾಮಿಯನ್ನು ಬಂದು ಬೇಡಿಕೊಂಡನು ಆಗ ರಂಗನಾಥ ಸ್ವಾಮಿಯನ್ನು ಬೇಡಿಕೊ ಎಂದು ಹೇಳಿತು ಅಲ್ಲಿಂದ ರುಂಡದಲ್ಲಿಯೇ ಉರುಳಿಕೊಂಡು ಯಾದಕಡುಕು ರಂಗನಾಥ ಸ್ವಾಮಿಯ ಸನ್ನಿದಿಗೆ ಬಂದು ಆಶ್ರಯ ಬೇಡಿಕೊಳ್ಳುತ್ತಾನೆ. ಆಗ ರಂಗನಾಥ ಸ್ವಾಮಿಯು ನಾನಿರುವ ಪೂರ್ವ ದಿಕ್ಕಿನ ಎಡ ಬಾಗಕ್ಕೆ ದಿಬ್ಬದ ಮೇಲೆ ಸ್ವಲ್ಪ ಜಾಗವಿದೆ ಆ ಜಾಗದಲ್ಲಿ ಹಾವಿನ ದನದ

ಗೂಡನ್ನು ಹಾಕಿಕೊಂಡು ನೆಲೆಗೊಳ್ಳು ಎಂದು ತಿಳಿಸಿದಾಗ,ಅದರಂತೆ ವೀರ ಬೊಮ್ಮಣ್ಣನ ರುಂಡವು ದಿಬ್ಬದ ಮೇಲೆ ಹೋಗಿ ನೆಲೆಗೊಳ್ಳುತ್ತದೆ. ಈಗ ಈ ಸ್ಥಳವೇ "ದಿಬ್ಬದ ವೀರ ಬೊಮ್ಮಣ್ಣನ ಸನ್ನಿದಿ"ಎಂದು ಜಗತ್ ಪ್ರಸಿದ್ದಿ ಪುಣ್ಯ ಕ್ಷೇತ್ರವಾಗಿದೆ.

ಒಡೆಯನಿಲ್ಲದ ಮೇಲೆ ನಾವು ಯಾಕೆ ಬದುಕಿರಬೇಕು ಎಂದು ದನಕರುಗಳು ಆ ರುಂಡದ ಮೇಲೆಯೇ ಬಿದ್ದು ಸಾವನಪ್ಪುತ್ತವೆ, ಈಗ ಆ ರುಂಡವು ನೆಲಗೊಂಡ ದಿಬ್ಬದ ವೀರಬೊಮ್ಮಣ್ಣನ ಸನ್ನಿದಿಯಲ್ಲಿ ವೀರಗಲ್ಲುಗಳಿವೆ ವೀರಬೊಮ್ಮಣ್ಣನಿಗೆ ದನಕರುಗಳ ಬಗ್ಗೆ ಅಪಾರ ಪ್ರೀತಿಯಿದ್ದುದರಿಂದ ಆ ಪೌಳಿಯಲ್ಲಿರುವ ವೀರಗಲ್ಲುಗಳ ಸುತ್ತಲೂ ದನಕರುಗಳ ಚಿತ್ರಗಳನ್ನು ಬಿಡಿಸಲಾಗಿದೆ, ವೀರಬೊಮ್ಮಣ್ಣ ಸ್ವಾಮಿಯು ಕುಂಚಿಟಿಗರ ಆಳುವ ನೋರು ಕುಲದ ಮನೆ ದೇವರಾಗಿದೆ, ಪ್ರತಿ ವರ್ಷ ಶ್ರೀ ರಾಮನವಮಿಯ ಜಾತ್ರೆ ಸಮಯದಲ್ಲಿ ದಿಬ್ಬದ ವೀರಬೊಮ್ಮಣ್ಣ ಸ್ವಾಮಿಗೆ ಮೊದಲ ಪೂಜೆಯನ್ನು ಗ್ರಾಮದ ಗೌಡರು ಮತ್ತು ಎಮ್ಮೆನೋರು ಕುಲದೆವರೇ ಮಾಡಬೇಕು.

## ಜಾತ್ರಾ ಮಹೋತ್ಸವ

ವೀರಬೊಮ್ಮಣ್ಣಸ್ವಾಮಿಯ ಜಾತ್ರೆಯ ಶ್ರೀ ರಾಮನವಮಿಯದಿನದಿಂದ ಮೊದಲುಗೊಂಡು ಗಂಗಾಪೂಜೆ ಕಳಸ ಸ್ಥಾಪನೆ, ನವಗ್ರಹಪೂಜೆ, ಎರಡನೇ ದಿನ ಅಖಂಡ ಬಜನೆ ಮೂರನೇ ದಿನ ಅಗ್ನಿಕುಂಡ ನಾಲ್ಕನೇ ದಿನ ಮಂಗಳಾರತಿ ಹಾಗೂ ಹರಿಸೇವೆ 5 ನೇ ದಿನ ಏಳೂರು ಅಣ್ಣ ತಮ್ಮಂದಿರುಗಳು ಮತ್ತು ಗ್ರಾಮಸ್ಥರಿಂದ ಆರತಿ ಉತ್ಸವ ಹಾಗೂ ರಾತ್ರಿ ಕಲ್ಲುಗಾಲಿ ರಥೋತ್ಸವವು ಸಾವಿರಾರು ಭಕ್ತರ ಸಮ್ಮುಖದಲ್ಲಿ ಬಹಳ ವಿಜೃಂಬಣೆಯಿಂದ ನೇರವೇರುವುದು, ಅದೇ ದಿನ ಒಕ್ಕಲುಗಳಿಂದ ಉಂಡೆ–ಮಂಡೆ ವಸಂತೋತ್ಸವ ಮಂಗಳಾರತಿಗಳೊಂದಿಗೆ ಜಾತ್ರೆ ಸಂಪನ್ನವಾಗುತ್ತದೆ.

ಗುರುಗಳು ಪೂಜಾರಿಗಳು, ಏಳು ಬಂಡಿ ಬಂಡಿಕಾರರು, ಮಟ್ಟಕ್ಕಿಯಜಮಾನರುಗಳು, ಅಣ್ಣ ತಮ್ಮಂದಿರುಗಳು ವೀರಬೊಮ್ಮನಹಳ್ಳಿ ಗ್ರಾಮಸ್ಥರು, ನೆಂಟರು, ಕೋಳುಕಾರರು, ದಳವಾಯಿಗಳು, ದಾಸಯ್ಯನವರು, ಏಳವನವರು ಹಾಗೂ 12 ಮಂದಿ ಕೈವಾಡಸ್ಥರುಗಳು ಎಲ್ಲರು ಸೇರಿ ದಿಬ್ಬದ ವೀರ ಬೊಮ್ಮಣ್ಣ ಸ್ವಾಮಿ ಜಾತ್ರೆಯನ್ನು ಬಹಳ ಅದ್ದೂರಿಯಾಗಿ ನೆರವೇರಿಸುತ್ತಾರೆ ಹಾಗೂ ಜಾತ್ರೆಗೆ ಬಂದ ಎಲ್ಲಾ ಭಕ್ತಾದಿಗಳಿಗೂ 6 ದಿವಸಗಳ ಕಾಲ ಅನ್ನದಾಸೋಹ ಕಾರ್ಯಕ್ರಮವನ್ನು ಬಹಳ ಅಚ್ಚುಕಟ್ಟಾಗಿ ಏರ್ಪಡಿಸುತ್ತಾರೆ.

# 4. ಹಾಲೇನಹಳ್ಳಿ ಶ್ರೀ ಜುಂಜಪ್ಪ ಸ್ವಾಮಿಯ ಜಾತ್ರಾ ಮಹೋತ್ಸವ

## ಪೀಠಿಕೆ

ಶಿರಾ–ತುಮಕೂರು 4ನೇರಾಷ್ಟ್ರೀಯ ಹೆದ್ದಾರಿಯಲ್ಲಿರುವ ನನ್ನೂರು ಚಿಕ್ಕನಹಳ್ಳಿಯಿಂದ ಎಡಬಾಗಕ್ಕೆ 2 ಕಿ.ಮೀ ದೂರದಲ್ಲಿರುವ ಹಾಲೇನಹಳ್ಳಿ ಗ್ರಾಮವು ಕಂದಾಯ ಗ್ರಾಮವಾಗಿದೆ, ಈ ಗ್ರಾಮಕ್ಕೆ ಕುಂಚಿಟಿಗರ ವುಡಸೇಗೌಡರು, ನಾಯಕ ಜನಾಂಗದ ಕುರಿ ಹನುಮಂತನಾಯಕ, ಹರಿಜನರ ಅರಳಿ ಮರದ ನಾಗಜ್ಜ ಎಂಬುವವರುಗಳು ಸೇರಿ ಹುಗಿ ಹೊಯ್ದಿದ್ದಾರೆಂದು ಗ್ರಾಮದ ವೀರಣ್ಣನವರು ತಿಳಿಸಿರುತ್ತಾರೆ. ಈ ಗ್ರಾಮವು ಪೂರ್ವಭಾಗದಲ್ಲಿ ಬೂಪಸಂದ್ರ ಕೆರೆಯ ಕೋಡಿಹಳ್ಳವೂ ಹರಿಯುತ್ತಿದ್ದು, ಕಳ್ಳಂಬೆಳ್ಳ ಕೆರೆಯ ಕಾಲುವೆಯ ನೀರಿನಿಂದ ಇಲ್ಲಿನ ರೈತರು ಅಡಿಕೆ, ತೆಂಗು, ಭತ್ತ, ರಾಗಿ, ಮುಸುಕಿನ ಜೋಳ ಮುಂತಾದ ಬೆಳೆಗಳನ್ನು ಬೆಳೆದು ಸಂಪತ್ಭರಿತವಾಗಿ ಪಶು, ಸಂಪತ್ತು, ಹೆಚ್ಚಾಗಿ ಹಾಲು ಸಮೃದ್ಧಿಯಾಗಿ ದೊರೆಯುತ್ತಿದ್ದುದರಿಂದ "ಹಾಲೇನಹಳ್ಳಿ"ಆಯಿತೆಂಬ ಐತಿಹ್ಯವಿದೆ.

ಈ ಗ್ರಾಮದ ಹೊಸಕಾಲೋನಿಯು ಸೇರಿ 1000 ಸಾವಿರ ಮನೆಗಳಿದ್ದು, ಸುಮಾರು 4000 ಜನರು ವಾಸಮಾಡುತ್ತಿದ್ದಾರೆ, ಗ್ರಾಮದಲ್ಲಿ ಹೆಚ್ಚಾಗಿ ಕುಂಚಿಟಿಗ, ವೀರಶೈವ, ವೈಶ್ಯ, ಆದಿಕರ್ನಾಟಕ, ನಾಯಕ, ಮುಸ್ಲಿಂ, ದೇವಾಂಗ, ಆದಿದ್ರಾವಿಡ, ಈಡಿಗ, ಬಳೆಶೆಟ್ಟಿ, ಕುಂಬಾರ, ದರ್ಜಿಗ, ಬ್ರಾಹ್ಮಣ, ವಿಶ್ವಕರ್ಮದ ಎಲ್ಲಾ ಜನಾಂಗದ ಸಮ್ಮಿಲನದಿಂದ ಈ ಗ್ರಾಮವು ವ್ಯಾಪಾರ ಕೇಂದ್ರವಾಗಿ ಪರಿಣಮಿಸಿ, ಪ್ರತಿವಾರ ಸಂತೆಯೂ ಸಹಾ ನಡೆಯುತ್ತಿತ್ತು, ಇಂದಿಗೂ ಈ ಊರಿನ ಮುಖ್ಯರಸ್ತೆಯನ್ನು "ಪೇಟೆದಾರಿ" ಎಂದು ಕರೆಯುತ್ತಾರೆ.

ಈ ಗ್ರಾಮದಲ್ಲಿ ಈಶ್ವರ, ಬಸವಣ್ಣ, ಬೇಡರಕಣ್ಣಪ್ಪ, ಶನಿಮಹಾತ್ಮ, ಲಕ್ಕಮ್ಮನವರ ದೇವಸ್ಥಾನಗಳಿದ್ದು ಪ್ರತಿವರ್ಷ ಈ ಗ್ರಾಮದ ಜನತೆ ಆಷಾಡಮಾಸದಲ್ಲಿ ಮಾರಮ್ಮ ಮತ್ತು ಕೊಲ್ಲಾಪುರದಮ್ಮನವರುಗಳಿಗೆ ಆರತಿ ಮಾಡಿ ಬಲಿ ಕೊಡುತ್ತಾರೆ. 12 ವರ್ಷಕೊಮ್ಮೆ 7 ಊರಿನ ಎಲ್ಲಾ ಜನಾಂಗದವರೂ ಸೇರಿ ಕೊಲ್ಲಾಪುರದಮ್ಮನಿಗೆ ಆರತಿ ಮಾಡಿ ಬಲಿಕೊಟ್ಟು ಶಾಂತಿಮಾಡಿ, ಭರ್ಜರಿ ಬಾಡೂಟ ನಡೆಸಿ ಆನಂದ ಪಡುತ್ತಾರೆ, ಶ್ರಾವಣ ಮಾಸಲದಲಿ ಹನುಮಂತರಾಯನಿಗೆ ತೊಂಬಿಟ್ಟು ಆರತಿ ಮಾಡಿ ಸಂಭ್ರಮಿಸುತ್ತಾರೆ ಮತ್ತು ಮುಸ್ಲೀಂ ಬಾಂದವರುಗಳು ಗ್ರಾಮದ ಎಲ್ಲಾ ಜನಾಂಗದವರನ್ನು 'ಕೂಡಿಸಿ' ಮೊಹರಂ ಹಬ್ಬ" ಆಚರಿಸಿ ಸಿಹಿ ಹಚ್ಚುತ್ತಾರೆ. ಅದೇರ ರೀತಿ ಈ ಗ್ರಾಮದ ಅತಿ

ಮುಖ್ಯವಾದ ಭಕ್ತಿ ಬಾವದ ಸಂಕೇತದ ಸ್ಥಳವೆಂದರೆ "ಜುಂಜಪ್ಪನ ಗುಡ್ಡೆ"(ಸಮಾದಿ) ಇಲ್ಲಿ ಪ್ರತಿವರ್ಷ ಯುಗಾದಿಯ ಮಾರನೇ ದಿನ ಅತಿ ವಿಜೃಂಬಣೆಯಿಂದ ನಡೆಯುವ "ಜುಂಜಪ್ಪನ ಜಾತ್ರೆ"ಗೆ ಸುತ್ತಮುತ್ತಲ ಗ್ರಾಮಗಳ ಎಲ್ಲಾ ಜನಾಂಗದವರು ಸಾವಿರಾರು ಸಂಖ್ಯೆಯಲ್ಲಿ ಬಾಗವಹಿಸಿ ಸಂಭ್ರಮಿಸುತ್ತಾರೆ.

## ಜುಂಜಪ್ಪನ ಪಟ್ಟದ ಬಸವನ ಇತಿಹಾಸ

ಹಾಲೇನಹಳ್ಳಿಯಲ್ಲಿ ಜುಂಜಪ್ಪನ ಜಾತ್ರೆ ನಡೆಯಲು 100 ಹಿಂದಿನ ಇತಿಹಾಸವಿದೆ ಕಳ್ಳಂಬೆಳ್ಳ ಕೆರೆಯ ಅಚ್ಚುಕಟ್ಟು ಪ್ರದೇಶವು ವ್ಯವಸಾಯದಿಂದ ಹೆಚ್ಚು ಸಂಪತ್‌ಭರಿತವಾಗಿದ್ದು, ಇಲ್ಲಿನ ರೈತರು ಹೆಚ್ಚಾಗಿ ಪಶುಪಾಲನೆ ಮಾಡುತ್ತಿದ್ದುದರಿಂದ, ವ್ಯವಸಾಯಕ್ಕೆ ಬೇಕಾದ ಹೋರಿಗಳ ಅವಶ್ಯಕತೆ ಇದ್ದು, ಹೋರಿಗಳ ಸಂಖ್ಯೆ ವೃದಿಯಾಗಲಿ ಎಂದು ಜುಂಜಪ್ಪಸ್ವಾಮಿಗೆ ಹರಕೆ ಮಾಡಿಕೊಳ್ಳುತ್ತಿದ್ದರು,

ಈ ದನಗಳ ಹಿಂಡಿನಲ್ಲಿ ಹೆಚ್ಚಾಗಿ ಕರುಗಳು ಜನಿಸಿದಾಗ, ತಮ್ಮ ಹರಕೆಯಂತೆ ಜುಂಜಪ್ಪನ ಹೆಸರಿನಲ್ಲಿ "ಹೋರಿ" ಅಥವಾ "ಬಸವನಿಗೆ" ಬಲ ಭಾಗದ ತೊಡೆಯ ಮೇಲೆ ವೃತ್ತಾಕಾರದ ಮುದ್ರೆಯನ್ನು ಒತ್ತಿ, ಕೊರಳಿಗೆ ಗಂಟೆಯನ್ನು ಕಟ್ಟಿ, "ಜುಂಜಪ್ಪನ ಬಸವ" ಎಂದು ಪೂಜೆ ಮಾಡಿಸಿ ಊರ ಮುಂದಿನ ಹೊಲದಲ್ಲಿ ಬಿಡುತ್ತಿದ್ದರು ಇಂತಹ ಚಿನ್ಹೆ ಇರುಬ 'ಬಸವ'ನನ್ನು ದೇವರ ಪ್ರತಿನಿಧಿಗಳೆಂದು ಬಾವಿಸುವುದರಿಮದ ಅವುಗಳು ನಿರಾಂತಕವಾಗಿ ಯಾರ ಹೊಲದಲ್ಲಾದರೂ ಮೆಯ್ದರೂ ಯಾರು ಅಡ್ಡಿ ಪಡಿಸುವುದಿಲ್ಲ ಏಕೆಂದರೆ ದೇವರ ಪ್ರತಿನಿಧಿಯಾದ 'ಬಸವ' ನಮ್ಮ ಹೊಲಕ್ಕೆ ಕಾಲಿಡುವುದರ ಮೂಲಕ ತಮ್ಮ ಹೊಲದ ಫಸಲು ವೃದ್ಧಿಯಾಗುತ್ತದೆ ಎಂದು ಜನ ನಂಬುತ್ತಿದ್ದರು

ಹಿಂದಿನಿಂದಲೂ ಜುಂಜಪ್ಪನ ಮಹಿಮೆ ಸಾರುವ ರೀತಿಯಲ್ಲಿಯೇ ಇಂದಿನ ಆಧುನಿಕ ಯುಗದಲ್ಲಿ ಜುಂಜಪ್ಪನ ಮಹಿಮೆಗೆ ಆಕರ್ಷಿತರಾದ ಪರಮ ಭಕ್ತರು ನಮ್ಮನಾಡಿನ ಎಲ್ಲಾ ಕಡೆ ಇದ್ದಾರೆ ಹಿಂದಿನಂತೆಯೇ 'ಕೊಲೆ ಬಸವ' ಅಥವಾ 'ಪಟ್ಟದ ಬಸವ' ನನ್ನು ಆಡಿಸುವ ಕುಲಕಸಬನ್ನು ಮುಂದುವರಿಸಿಕೊಂಡು ಹೊಗುತ್ತಿರುವ ಕೆಲವು ಗೊಲ್ಲ ಸಮುದಾಯದವರೂ ಇಂದಿಗೂ ಶಿರಾ ತಾಲ್ಲುಕಿನಲ್ಲಿ ಅಜ್ಜೇನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದಾರೆ ಇವರುಗಳಿಗೆ 'ಪಟ್ಟದ ಬಸವಗಳು' ಬೇಕಾದಾಗ ಭಕ್ತರ ಬಳಿ ಹೋಗಿ ತಮ್ಮ ದನದ ಕೊಟ್ಟಿಗೆಯಲ್ಲಿ (ದೊಡ್ಡಿಯಲ್ಲಿರುವ ಒಳ್ಳೆಯ ಗುಣ ಲಕ್ಷಣಗಳಿರುವ ದಷ್ಟಪುಷ್ಟವಾದ ಹೋರಿಗಳ ಬೇಡಿಕೆಗೆ ಮೊರೆಹೋದಾಗ ಭಕ್ತರು 'ಹೋರಿ' ಅಥವಾ 'ಬಸವ' ಕೊಡಲು ಸಂತೋಷದಿಂದ ಒಪ್ಪಿಗೆ ನೀಡುತ್ತಾರೆ ಈ ಗೊಲ್ಲ ಸಮುದಾಯದವರು ದೇವರಿಗೋಸ್ಕರ ಬಿಡಬೇಕಾದ ಹೋರಿ ಗುಣ ಲಕ್ಷಣಗಳು ಹೀಗೆಯೇ ಇರಬೇಕೆಂಬ ನಿಯಮ ಪಾಲನೆಯಂತೆ 'ಕೊಂಬಿನ ತುದಿ ಹಾಗೂ ಕಣ್ಣುಗಳು ಕೆಂಪು ವರ್ಣದಿಂದ ಕೂಡಿರಬೇಕು ಉಳಿದ ಶರೀರದ ಬಾಗವು ಬಿಳಿಯ ಬಣ್ಣದಾಗಿದ್ದು

ಮತ್ತು ಖುರಗಳು ನುಣಪಾಗಿ ಕೆಂಪಾಗಿ ಗೆಜ್ಜರಿ ಬಣ್ಣದಂತೆ ಇರುವ ಈ ಹೋರಿಗಿಂತ ಮಿಗಿಲಾಗಿ ಹೋರಿ ಬೇರೊಂದಿಲ್ಲವೆಂದು ತಿಳಿದು ಹೋರಿಯ ಕಾಲುಗಳು, ಮುಖವು ಬಿಳಿಯ ಬಣ್ಣದಾಗಿದ್ದು ಬಾಲ ನೆಲಕ್ಕೆ ಮುಟ್ಟುವಂತಿರಬೇಕು, ಉಳಿದ ಶರೀರವು ಅರಗಿನ ಬಣ್ಣದಂತಿರುವ ಹೋರಿಯನ್ನೇ "ಜುಂಜಪ್ಪನ ಬಸವ" ಎಂದು ನಾಮಕರಣ ಮಾಡಿ, ಸಿರಾ ತಾಲ್ಲೂಕಿನ ಮರಡಿ ಗುಡ್ಡದ ತಪ್ಪಲಿನಲ್ಲಿರುವ "ಪುರುಷವ್ವನಕೆರೆ"ಯಲ್ಲಿ ಮೈತೊಳೆದು. ಮೂಲಸ್ಥಳ ಕಳುವರಹಳ್ಳಿಗೆ ಹೋಗಿ ಜುಂಜಪ್ಪನ ಗುಡ್ಡೆಯನ್ನು ಮೂರು ಸುತ್ತು ಪ್ರದಕ್ಷಿಣೆ ಮಾಡಿಸಿ ಹೂವಿನ ಹಾರ ಹಾಕಿದರೆ "ಜುಂಜಪ್ಪನ ಬಸವನಿಗೆ ಪಟ್ಟಾಭಿಷೇಕ"ವಾದಂತೆ !

## ಜುಂಜಪ್ಪನ ಕೋಲೆ ಬಸವ

ಹೀಗೆ ಪಟ್ಟಾಭಿಷೇಕವಾದ ಜುಂಜಪ್ಪನ ಬಸವಗಳನ್ನು ಒಕ್ಕಲುಗಳ ಮನೆಗಳಿಗೆ ಹೋಗುವ ಅನೇಕ ತಂಡಗಳು ನಮ್ಮೂರು ಚಿಕ್ಕನಹಳ್ಳಿಗೆ ಕೇವಲ 4 ಕಿ.ಮೀ ದುರದ ಅಜ್ಜೇನಹಳ್ಳಿ ಗೊಲ್ಲರಹಟ್ಟಿಯಲ್ಲಿ ವಾಸವಾಗಿದ್ದಾರೆ ಕಣ್ಣುಸನ್ನೆ, ಬಾಯಿಸನ್ನೆಯನ್ನೇ ಗ್ರಹಿಸಿ ಈ ಬಸವಗಳು "ಬುದ್ದಿ" ಬಂದ ಹಾಗೇ ವರ್ತಿಸುತ್ತವೆ ಯಾವತ್ತೂ ಹಗ್ಗಹಾಕಿ ಕಟ್ಟಿಹಾಕುವುದಿಲ್ಲ, ಜುಂಜಪ್ಪಸ್ವಾಮಿ ನಾಗರದೇವತೆಯ ಪ್ರತಿರೂಪವಾಗಿರುವುದರಿಂದ, ಈ ಬಸವಗಳ ಎರಡು ಕೊಂಬಿನ ಮಧ್ಯೆ ಏಳು ಎಡೆ ಸರ್ಪದ ಬೆಳ್ಳಿಯ ವಿಗ್ರಹಗಳನ್ನು, ಜೋಡಿಸಿಒಡವೆಗಳನ್ನು ಹಾಕಿ, ಬಣ್ಣದ ಬಟ್ಟೆಗಳನ್ನು ಕಟ್ಟಿ, ನಾಲ್ಕು ಕಾಲುಗಳಿಗೆ ಗೆಜ್ಜೆಗಳನ್ನು ಕಟ್ಟಿ ಸೀಂಗರಿಸುತ್ತಾರೆ ಹೀಗೆ ಸಿಂಗರಿಸಿದ ಜುಂಜಪ್ಪನಸ್ವಾಮಿ ಪಟ್ಟದ ಬಸವವನ್ನು ಛತ್ರ ಚಾಮರಗಳನ್ನು ಹಿಡಿದುಕೊಂಡು, ಅರೆ ವಾದ್ಯಗಳನ್ನು ನುಡಿಸುತ್ತಾ, ಊರಿನ ರಸ್ತೆಗಳಲ್ಲಿ ಬರುತ್ತಿದ್ದರೆ ದೇವಲೋಕದ ದೇವೇಂದ್ರನೇ ದರೆಗಿಳಿದು ಬಂದಂತೆ ಬಾಸವಾಗುತ್ತದೆ ಈ ಜುಂಜಪ್ಪನ ಬಸವಗಳು!

ಇನ್ನು ನಮ್ಮ ವಕ್ಕಲುಗಳ ಮನೆ ಮುಂದೆ ಬಂದಾಗ, ಸಾರಿಸಿ ರಂಗೋಲಿ ಹಾಕಿದ ಸ್ಥಳದಲ್ಲಿ ಜುಂಜಪ್ಪನ ಬಸವನನ್ನು ನಿಲ್ಲಿಸಿ, ಪಾದಗಳನ್ನು ತೊಳೆದು, ಹರಿಶಿನ ಕುಂಕುಮವಿಟ್ಟು ಪೂಜಿಸಿ, ಬಲಗಾಲಿನಿಂದ ಮನೆಯ ಹೊಸಲನ್ನು ದಾಟಿಸಿ, ಹರಿಕೆ ಮಾಡಿಕೊಂಡವರು ಅಂಗಾತವಾಗಿ ಮಲಗಿ ಶರಣಾಗತನಾದರೆ, ಒಳ್ಳೆಯದಾಗುವುದಿದ್ದರೆ, ನೆಲದ ಮೇಲೆ ಮಲಗಿದ್ದವರನ್ನು ಈ ಬಸವ ತುಳಿಯದಂತೆ ದಾಟುತ್ತದೆ. ಇಲ್ಲದಿದ್ದರೆ ಪಕ್ಕಕೆ ಹೋಗುತ್ತದೆ, ಇದೇ ನಮ್ಮ ವಕ್ಕಲುಗಳು, ಭಕ್ತರು ಜುಂಜಪ್ಪನ ಪಟ್ಟದ ಬಸವ ಮೇಲೆ ಇಟ್ಟಿರುವ ನಂಬಿಕೆ.

ಇತ್ತೀಚಿನ ದಿನಗಳಲ್ಲಿ ಅಜ್ಜೇನಹಳ್ಳಿ ಗೊಲ್ಲರ ಹಟ್ಟಿಯಲ್ಲಿ 5 ಜುಂಜಪ್ಪನ ಪಟ್ಟದ ಬಸವಗಳಿದ್ದು, ಈ ಗೊಲ್ಲ ಜನಾಂಗದವರು ಜುಂಜಪ್ಪನ ಜಾತ್ರೆಯಾದ ಮಾರನೇ ದಿನ ವಕ್ಕಲುಗಳ ಮೇಲೆ ಬೆಂಗಳೂರು, ಹಾಸನ, ಶಿವಮೊಗ್ಗ, ಕೋಲಾರ, ತುಮಕೂರು ಜಿಲ್ಲೆಗಳಲ್ಲಿ ಬೇರೆ ಬೇರೆ ತಂಡಗಳಾಗಿ ಹೋಗಿ ಜುಂಜಪ್ಪನ ಮಹಿಮೆ ಸಾರುತ್ತಾ ದೀಪಾವಳಿಯ ಹೊತ್ತಿಗೆ ಊರೂರು ಸುತ್ತಿ ವಾಪಸ್ಸು ಬಂದು, ದೀಪಾವಳಿಯ ದಿನ ಜುಂಜಪ್ಪನ ಗುಡ್ಡೆಯ ಮುಂದೆ ದೀಪ ಹತ್ತಿಸಿ ಮತ್ತೆ ವಕ್ಕಲುಗಳ ಮೇಲೆ ಊರೂರು ಸುತ್ತಿ ಮತ್ತೆ ಜುಂಜಪ್ಪನ ಜಾತ್ರೆಯ ಹೊತ್ತಿಗೆ ಊರಿಗೆ ವಾಪಸ್ಸಾಗುತ್ತಾರೆ.

## ಜುಂಜಪ್ಪನ ಗುಡ್ಡೆ

ಜುಂಜಪ್ಪನ ಜಾತ್ರೆ ನಡೆಸಲು ಮೂಲ ಕಾರಣ ನೂರು ವರ್ಷಗಳ ಹಿಂದೆ ಹಾಲೇನಹಳ್ಳಿಯ ಗೌಡರಾದ ವುಡಸೇಗೌಡರ ಮನೆ ಮುಂದೆ ವಯಸ್ಸಾದ ಜುಂಜಪ್ಪನ ಬಸವ ಆಕಸ್ಮಾತಾಗಿ ಯುಗಾದಿ ಹಬ್ಬದ ಮಾರನೇ ದಿನವೇ ಮರಣ ಹೊಂದಿತು, ಆಗ ಗೌಡರು ದೇವರ ಬಸವನನ್ನು ಕಳುವಂಹಳ್ಳಿಯ ಜುಂಜಪ್ಪನ ಮೂಲ ನೆಲೆ ಮನೆಗೆ ಸಾಗಿಸಲು ಕಷ್ಟವಾದ ಕಾರಣ, ಆಗ ಗೌಡರು, ಚಿಂತಾಕ್ರಾಂತರಾಗಿ ಗುರು ಹಿರಿಯರ ಮಾರ್ಗದರ್ಶನದಂತೆ, ತಮ್ಮ ಹೆಸರಿನಲ್ಲಿರುವ ಎರಡು ಎಕರೆ ಜಮೀನನ್ನು ದಾನ ಬರೆದು, ಆ ಜಮೀನಿನಲ್ಲೆ ಜುಂಜಪ್ಪನ ಬಸವನನ್ನು ಸಮಾದಿ ಮಾಡಿ, ಆ ಸ್ಥಳದಲ್ಲಿ ಒಂದು ಬೇವಿನ ಮರವನ್ನು ಬೆಳೆಸಿ, ಆ ಗುಡ್ಡೆಯ ಸುತ್ತಲೂ ಕಲ್ಲಿನ ಪೌಳಿ ನಿರ್ಮಾಣ ಮಾಡಿದ್ದಾರೆ ಈ ಸಮಾದಿಯ ಸ್ಥಳವೇ "ಜುಂಜಪ್ಪನ ಗುಡ್ಡೆ" ಎಂದು ಇಂದಿಗೂ ಲೋಕ ಪ್ರಸಿದ್ಧಿಯಾಗಿದೆ!

## ಶ್ರೀ ಜುಂಜಪ್ಪ ಸ್ವಾಮಿಯ ಜಾತ್ರಾ ಮಹೋತ್ಸವ

ಅಂದಿನಿಂದ ಇಂದಿನವರೆವಿಗೂ ಹಾಲೇನಹಳ್ಳಿ ಜುಂಜಪ್ಪನ ಬಸವನ ಗುಡ್ಡೆಯ ಹತಿರ ಪ್ರತಿವರ್ಷ ಯುಗಾದಿಯ ಮಾರನೇದಿನ ಅತಿ ವೈಭವದಿಂದ ಜುಂಜಪ್ಪನ ಜಾತ್ರಾ ಮಹೋತ್ಸವ ಜರುಗುತ್ತದೆ ಇಲ್ಲಿ ಜುಂಜಪ್ಪನ ದೇವಸ್ಥಾನ ಕಟ್ಟಲು ಬಯಲು ಪ್ರದೇಶವಾಗಿ, ವಾಸಮಾಡಲು ಅನಾನುಕೂಲವಾದ ಪರಿಣಾಮ ಇಲ್ಲಿಗೆ 4 ಕಿ.ಮೀ ದೂರದ ಅಜ್ಜೇನಹಳ್ಳಿ ಗೊಲ್ಲರಹಟ್ಟಿ ಈ ಊರಿನ ಗೌಡರಾದ ಮುದ್ದರಂಗೇಗೌಡರು ಸುಮಾರು 2 ಎಕರೆ 20 ಗುಂಟೆ ಜಮೀನನ್ನು ದಾನ ಮಾಡಿದ ಫಲ, ಭಕ್ತರ ಕಾಣಿಕೆಯಿಂದ ದೇವಸ್ಥಾನ ಕಟ್ಟಿಸಿ ಜುಂಜಪ್ಪ ಸ್ವಾಮಿಯ ಉತ್ಸವ ಮೂರ್ತಿಯನ್ನು ಹಾಗೂ ಮೂಲ-ದೇವರನ್ನು ಇಲ್ಲಿಯೇ ಪ್ರತಿಷ್ಠಾಪಿಸಿದ್ದಾರೆ, ಈಗ ಇಲ್ಲಿಯೇ 20 ಮನೆಗಳಲ್ಲಿ ಗೊಲ್ಲ ಸಮುದಾಯದ ಪೂಜಾರಪ್ಪನವರುಗಳ ವಂಶದವರು ವಾಸವಾಗಿದ್ದಾರೆ ಹಾಗೂ 5 ಜುಂಜಪ್ಪನ ಪಟ್ಟದ ಬಸವಗಳನ್ನು ಸಾಕಿದ್ದಾರೆ.

ಜುಂಜಪ್ಪನ ಜಾತ್ರೆಯ ದಿನ ಬೆಳಿಗ್ಗೆ ಅಜ್ಜೇನಹಳ್ಳಿ ಈ ಮೂಲ ದೇವಸ್ಥಾನದಿಂದ ಜುಂಜಪ್ಪ ಸ್ವಾಮಿಯ ಉತ್ಸವ ಮೂರ್ತಿಯನ್ನು ಹಾಗೂ ಜುಂಜಪ್ಪನ ಪಟ್ಟದ ಬಸವಗಳನ್ನು ಅಲಂಕಾರ ಮಾಡಿಕೊಂಡು ತಾಳಮೇಳ ವಾದ್ಯಗಳೊಂದಿಗೆ ಮೆರವಣಿಗೆ ಮುಖಾಂತರ ಬಂದು, ಜುಂಜಪ್ಪನಗುಡ್ಡೆ ಕಲ್ಲು ಹಾಸಿನ ಮೇಲೆ ಪ್ರತಿಷ್ಠಪಿಸುತ್ತಾರೆ ಜುಂಜಪ್ಪಸ್ವಾಮಿಯ ಉತ್ಸವ ಮೂರ್ತಿಯು ನಾಗರದೇವತೆಯ ಏಳು ಎಡೆ ಸರ್ಪದ ಪ್ರತಿರೂಪವಾಗಿರುವುದರಿಂದ ಹರಕೆ ಹೊತ್ತಿರುವ ಭಕ್ತರು ಬೆಳ್ಳಿಯ ನಾಗರ ಹಾವಿನ ವಿಗ್ರಹಗಳನ್ನು ಜುಜ್ಜಂಪಸ್ವಾಮಿಗೆ ಸಮರ್ಪಿಸುತ್ತಾರೆ ಇಂತಹ ಪುರಾಣ ಪ್ರಸಿದ್ದವಾದ ಜಾತ್ರೆಗೆ ನೂರಾರು ಗ್ರಾಮಗಳ ಸಾವಿರಾರು ಭಕ್ತರು ಭಕ್ತಿ ಬಾವದಿಂದ ಬಾಗವಹಿಸಿ ಜುಂಜಪ್ಪಸ್ವಾಮಿ ಕೃಪೆಗೆ ಪಾತ್ರರಾಗುತ್ತಾರೆ, ಜಾತ್ರಾ ಸಮಯದಲ್ಲಿ ಚಿಕ್ಕನಹಳ್ಳಿಯ ವೀರಗಾಸೆ ವೀರಣ್ಣನವರು ತಮ್ಮ ಹಿರಿಯರು ನಡೆಸಿಕೊಂಡು ಬಂದ ರೀತಿಯಲ್ಲೇ ಬಂದಂತಹ ಭಕ್ತಾದಿಗಳಿಗೆ ಪಾನಕ, ಕೋಸಂಬರಿ ಹಾಗೂ ಕುಡಿಯುವ ನೀರನ್ನು ಒದಗಿಸಿ ಭಕ್ತಿ ಸಮರ್ಪಿಸುತ್ತಾರೆ, ಸಾಯಂಕಾಲ ಜುಂಜಪ್ಪಸ್ವಾಮಿಯ ಉತ್ಸವ ಮೂರ್ತಿಯನ್ನು ಅಜ್ಜೆನಹಳ್ಳಿ ಗೊಲ್ಲರಹಟ್ಟಿಯಲ್ಲಿ ಮೂಲ ದೇವಸ್ಥಾನದಲ್ಲಿ ಗುಡಿ ದುಂಬಿಸುತ್ತಾರೆ.

ನಾನು ಜುಂಜಪ್ಪಸ್ವಾಮಿ ಪರಮಭಕ್ತೆಯಾಗಿ ನನ್ನೂರಿಗೆ 2 ಕಿ.ಮೀ ದೂರದಲ್ಲಿರುವ ಈ ಜಾತ್ರೆಗೆ ನನ್ನ ಬಾಲ್ಯದ 5 ನೇ ವರ್ಷದಿಂದ ಇಲ್ಲಿಯವರೆವಿಗೂ ಅಂದರೆ 25 ವರ್ಷಗಳ ಕಾಲ ಪ್ರತಿವರ್ಷವು ಜಾತ್ರೆಗೆ ಬಂದು ಸ್ವಾಮಿಯ ಆಶಿರ್ವಾದ ಪಡೆಯುತ್ತಿದ್ದೇನೆ. ಈ ಜಾತ್ರೆಯ ವಿಶೇಷವೆಂದರೆ ನಾನು ಚಿಕ್ಕನಹಳ್ಳಿಯ ಪ್ರೈಮರಿ ಶಾಲೆಯಿಂದ ಕಾಲೇಜುಗಳಲ್ಲಿ ನನ್ನೊಂದಿಗೆ ಕುಳಿತು, ಆಟವಾಡಿ, ವಿದ್ಯಾಬ್ಯಾಸ ಮಾಡಿದ, ಹಳೆಯ ಸ್ನೇಹಿತರೊಂದಿಗೆ ಮತ್ತೆ ಈ ಜಾತ್ರೆಯಲ್ಲಿ ಕೆಲವೇ ಗಂಟೆಗಳ ಕಾಲ ಪುನರ್ಮಿಲನಗೊಂಡು ಹಿಂದಿನ ನೆನಪುಗಳನ್ನು ಹಂಚಿಕೊಳ್ಳುತ್ತಾ, ಮುಂದಿನ ವರ್ಷ ನಾವುಗಳು ಈ ಜಾತ್ರೆಯಲ್ಲಿ ಮತ್ತೆ ಸೇರೋಣ ಎಂದು ವಿದಾಯ ಹೇಳುವ ಆ ಮಧುರ ಕ್ಷಣಗಳು ಇಂದಿಗೂ ನನ್ನ ಮನದಲ್ಲಿ ಜುಂಜಪ್ಪನ ಜಾತ್ರೆಯ ನೆನಪಾಗುತ್ತದೆ ಜುಂಜಪ್ಪನ ಜಾತ್ರೆಯಂತೆ ನನ್ನ ಬಾಲ್ಯದಿಂದಲೂ ಶಿರಾ ತಾಲ್ಲೂಕಿನ ಹಲವಾರು ಜಾತ್ರೆಗಳಲ್ಲಿ ಭಕ್ತಿ ಬಾವದಿಂದ ಬಾಗವಹಿಸಿವ, ನಮ್ಮ ಹಳ್ಳಿಗಾಡಿನ ಈ ಧಾರ್ಮಿಕ ಸಂಸ್ಕೃತಿಯನ್ನು ಆನಂದಿಸಿದ ಆ ಕ್ಷಣಗಳೇ ನನ್ನನ್ನು ಇಂದು ಶಿರಾ ತಾಲ್ಲೂಕಿನ ಜಾತ್ರಾ ಮಹೋತ್ಸವಗಳ ಬಗ್ಗೆ ಹೆಚ್ಚಿನ ಸಂಶೋದನೆ ಮಾಡಲು(ಎಂ,ಫಿಲ್)ಮಾಡಲು ಪ್ರೇರಣೆಯಾಯಿತು.


॥ ಶ್ರೀ ವಿಘ್ನೇಶ್ವರ ಪ್ರಸನ್ನ ॥ ಶ್ರೀ ರಂಗನಾಥಸ್ವಾಮಿ ಪ್ರಸನ್ನ ॥
॥ ಶ್ರೀ ಹುಳಿಯಾರು ಕೆಂಚಮ್ಮದೇವಿ ಪ್ರಸನ್ನ ॥

ಶ್ರೀ ರಂಗನಾಥಸ್ವಾಮಿ ಜಾತ್ರಾ ಮಹೋತ್ಸವದ ಆಹ್ವಾನ ಪತ್ರಿಕೆ

ಗಿಡಗನಹಳ್ಳಿ,
ಶಿರಾ ತಾ॥ ತುಮಕೂರು ಜಿಲ್ಲೆ.

ತಾ॥ 25-03-2018 ಭಾನುವಾರದಿಂದ
ತಾ॥ 29-03-2018 ಗುರುವಾರದವರೆಗೆ

ಶ್ರೀಮತಿ/ಶ್ರೀ..................................................................
..................................................................
..................................................................
..................................................................

ಸರ್ವರಿಗೂ ಆದರದ ಸುಸ್ವಾಗತ

## 5. ಗಿಡಗನಹಳ್ಳಿ ಶ್ರೀ ರಂಗನಾಥ ಸ್ವಾಮಿ ಜಾತ್ರಾ ಮಹೋತ್ಸವ:

**ಪೀಠಿಕೆ:**

ಸಿರಾ–ಅಗಳಿ ಮಾರ್ಗದಲ್ಲಿ ಗಿಡಗನಹಳ್ಳಿ ಗೇಟ್‌ನಿಂದ ಎಡಬಾಗಕ್ಕೆ 0.5 ಕಿ.ಮೀ, ಸಿರಾ ಪಟ್ಟಣದಿಂದ 14.ಕಿ.ಮೀ ದೂರದಲ್ಲೂ, ನಮ್ಮೂರು ಚಿಕ್ಕನಹಳ್ಳಿಯಿಂದ 20 ಕಿ.ಮೀ ದೂರದಲ್ಲೂ ಆಂದ್ರದ ಗಡಿಗೆ ಹೊಂದಿಕೊಂಡಂತೆ ಈ ಗ್ರಾಮವಿದೆ. ಈ ಗ್ರಾಮವು ಮದಲೂರು ಗ್ರಾಮ ಪಂಚಾಯಿತಿಯ ಉಪ ಗ್ರಾಮವಾಗಿದೆ, ಗ್ರಾಮದ ಮುಖಂಡರಾದ ಗೋವಿಂದಪ್ಪನವರು ಹೇಳುವ ಪ್ರಕಾರ ಈ ಗ್ರಾಮಕ್ಕೆ ಕುಂಚಿಟಿಗರ ಕರೇ ರಂಗಪ್ಪನವರ ವಂಶಸ್ಥರು ಹುಗಿ ಹೋಂಯ್ದಿರುತ್ತಾರೆ ಗ್ರಾಮಕ್ಕೆ " ಗಿಡಗ" ಎಂಬ ಪಕ್ಷಿಯು ಬಂದ ದೇವಸ್ಥಾನಕ್ಕೆ ಹುಣಸೇಮರದಲ್ಲಿ ನೆಲಸಿದುದ್ದರಿಂದ "ಗಿಡಗನಹಳ್ಳಿ"ಯಾಯಿತು ಎಂಬ ಐತಿಹ್ಯವಿದೆ.

ಗಿಡಗನಹಳ್ಳಿ ಗ್ರಾಮದಲ್ಲಿ 300 ಮನೆಗಳಿದ್ದು ಸುಮಾರು 1200 ಜನಸಂಖ್ಯೆ ಹೊಂದಿದ್ದು, ಕುಂಚಿಟಿಗರು, ಆದಿಕರ್ನಾಟಕ, ಆದಿದ್ರಾವಿಡ, ಮಡಿವಾಳ, ನಾಯಕರ ಮನೆಗಳಿವೆ ಗ್ರಾಮದ ನೀರಿನ ಆಸರೆಗೆ ಹೊಸಕಟ್ಟೆ, ಮಾರಣ್ಣಕಟ್ಟೆಗಳು ಇರುತ್ತವೆ, ಇಲ್ಲಿನ ರೈತರು ಭತ್ತ, ರಾಗಿ,ಅಡಿಕೆ, ತೆಂಗು, ಶೆಂಗಾ ಮುಂತಾದ ಬೆಳೆಗಳನ್ನು ಕೊಳವೆಬಾವಿಗಳ ಆಸರೆಯಲ್ಲಿ ಬೆಳೆಯುತ್ತಿದ್ದಾರೆ, ಖುಷ್ಕಿ ಜಮೀನುಗಳಲ್ಲಿ ಹೆಚ್ಚಾಗಿ ಹುಣಸೇಮರಗಳನ್ನು ಬೇಳೆಸಿ ಆರ್ಥಿಕವಾಗಿ ಮುಂದುವರೆದಿದ್ದಾರೆ ಈ ಗ್ರಾಮದ ಪಕ್ಕದಲ್ಲೇ ಕಳ್ಳಂಬೆಳ್ಳ ಕೆರೆಯಿಂದ ಮದಲೂರು ಕೆರೆಗೆ ಹೇಮಾವತಿ ನಾಲೆಯ ನೀರನ್ನು ಹರಿಸಲು ಕಾಲುವೆ ನಿರ್ಮಾಣ ಮಾಡಿದ್ದಾರೆ.

ಈ ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸಿದ್ದಾರ್ಥ ಪ್ರೌಡಶಾಲೆ, ಅಂಗನವಾಡಿ ಕೇಂದ್ರಗಳು ಇವೆ. ಸಣ್ಣ ತಿಮ್ಮಕ್ಕ, ಅಶ್ವತಪ್ಪ ಹಾಗೂ ರಂಗಪ್ಪನವರುಗಳು ನಾಟಿ ವೈದ್ಯರಾಗಿದ್ದಾರೆ, ಮಕ್ಕಳ ತಜ್ಞರಾದ ಡಾ॥ ಶ್ರೀ ರಂಗಪ್ಪ, ವೈದ್ಯರಾದ ಡಾ॥ ದಯಾನಂದ, ಉಪನ್ಯಾಸಕಿಯಾದ ಶ್ರೀಮತಿ ಕೆಂಚಮಾರಮ್ಮ, ಭೂಗರ್ಭ ವಿಜ್ಞಾನಿಯಾದ ಡಾ॥ ಲಕ್ಷ್ಮಣರವರುಗಳು ಇದೇ ಗ್ರಾಮದವರಾಗಿದ್ದಾರೆ.

ಗ್ರಾಮದಲ್ಲಿ ರಂಗನಾಥಸ್ವಾಮಿ, ಆದಿ ದ್ರಾವಿಡ ಮನೆದೇವರು, ಲಕ್ಷ್ಮೀ ಗ್ರಾಮದೇವತೆ ಯರಬಳ್ಳಿ ಮಾರಮ್ಮ, ಮುತ್ತುರಾಯ ಸ್ವಾಮಿ, ಹಾಗೂ ಶನಿದೇವರ ದೇವಸ್ಥಾನಗಳಿವೆ. ರಂಗನಾಥಸ್ವಾಮಿದೇವಸ್ಥಾನದ ಮುಂದೆ ವಿಜಯನಗರ ಕಾಲದ ಮಹಾಸತಿಕಲ್ಲು ಮತ್ತು ವೀರಗಲ್ಲುಗಳಿವೆ ಮಾಸ್ತಿಗಲ್ಲಿನಲ್ಲಿ ವೀರನು ಎಡಗೈಯಲ್ಲಿ ಬಿಲ್ಲನ್ನು ಬಲಗೈಯಲ್ಲಿ ಬಾಣವನ್ನು ಹಿಡಿದು ನಿಂತಿರುತ್ತಾರೆ. ವೀರನು ಸಮರೋಚಿತವಾದ

ಉಡುಪನ್ನು ಧರಿಸಿ, ತಲೆಯ ತುರುಬನ್ನು ಬಲಬಾಗಕ್ಕೆ ಕಟ್ಟಿರುತ್ತಾನೆ, ಕೈಗಳಲ್ಲಿ ಕಡಗ ಧರಿಸಿರುತ್ತಾನೆ, ಎಡಬಾಗದಲ್ಲಿ ಮಹಾಸತಿಯು ತನ್ನ ಎರಡು ಕೈಗಳನ್ನು ಮೇಲೆತ್ತಿ ನಿಂತಿರುತ್ತಾಳೆ ಉದ್ದನೆಯ ತುರುಬನ್ನು ಬಿಟ್ಟಿರುತ್ತಾಳೆ, ಕೈಕಾಲಗಳಿಗೆ ಕಡಗ ಧರಿಸಿರುತ್ತಾಳೆ, ಪಕ್ಕದಲ್ಲಿ ರೇಖಾ ಚಿತ್ರಗಳನ್ನು ಬಿಡಿಸಿ, ಮೇಲ್ಬಾಗದಲ್ಲಿ ಸೂರ್ಯ, ಚಂದ್ರ, ಪಕ್ಷಿ ಹಾಗೂ ಎರಡು ರಂದ್ರಗಳನ್ನು ಬಿಡಿಸಲಾಗಿದೆ.

**ಇತಿಹಾಸ :**

ಶ್ರೀ ರಂಗನಾಥ ಸ್ವಾಮಿ ದೇವಸ್ಥಾನ ಉದ್ಭವಾಗಲು ಐತಿಹಾಸಿಕ ಹಿನ್ನೆಲೆ ಏನೆಂದರೆ, ನೂರಾರು ವರ್ಷಗಳ ಹಿಂದೆ ಪುಣ್ಯ ಕ್ಷೇತ್ರ ಕಂಚಿಯಿಂದ ಚಿನ್ನ, ಬೆಳ್ಳಿ, ಮತ್ತು ರತ್ನಗಳ ವ್ಯಾಪಾರಗಳು ಹಂಪೆಯ ವಿಜಯನಗರ ಸಂಸ್ತಾನಕ್ಕೆ ಈ ಗ್ರಾಮದ ಮುಖಾಂತರ ಕುದುರೆ ದನಕರುಗಳ ಜೊತೆ ಹೋಗುವಾಗ ರಾತ್ರಿಯಾಗಿತ್ತು ಆಗ ಇಲ್ಲಿಂದ ಮಂಟಪವೊಂದರಲ್ಲಿ ತಂಗಲು ವ್ಯವಸ್ಥೆ ಮಾಡಿಕೊಂಡು, ಕುದುರೆಯ ಒಂದು ಮಗ್ಗುಲಲ್ಲಿ ಹೇರಿದ್ದ ಚಿನ್ನ, ಬೆಳ್ಳಿ, ಮತ್ತು ರತ್ನಗಳನ್ನು, ಇನ್ನೊಂದು ಮಗ್ಗುಲಲ್ಲಿ ಸಮತೂಕ ಮಾಡಿಕೊಳ್ಳಲು ಹೇರಿದ್ದ ಕಲ್ಲನ್ನು ಇಳಿಸಿದರು ರಾತ್ರಿ ಅಡುಗೆ ಮಾಡಿಕೊಳ್ಳಲು ಒಲೆಗೆ ಕತ್ತಲಲ್ಲಿ ಎರಡು ಕಲ್ಲುಗಳನ್ನು ಹುಡುಕಿದರು. ಇನ್ನೊಂದು ಕಲ್ಲು ಸಿಗದಿದ್ದಾಗ ತಾವು ಕಂಚಿಯಿಂದ ಸಮತೂಕ ಮಾಡಿಕೊಳ್ಳಲು ತಂದಿದ್ದ ಕಲ್ಲನ್ನೇ ಓಲೆಗೆ ಉಪಯೋಗಿಸಿದರು. ಅಡುಗೆ ಮಾಡುವಾಗ, ಸಾರಿಗೆ ಹುಳಿಯನ್ನು ಹಿಂಡಿ ಹುಣಸೇ ತೊಕ್ಕು ಮತ್ತು ಬೀಜವನ್ನು ಕಂಚಿಯಿಂದ ತಂದಿದ್ದ ಕಲ್ಲಿನ ಮೇಲೆ ಹಾಕಿದಾಗ, ಆ ಕಲ್ಲು ದೈವಕೃಪೆಯೋ ಎಂಬಂತೆ ಸಿಡಿದು ಸ್ವಲ್ಪ ದೂರದಲ್ಲೇ ಬಿತ್ತು ಮತ್ತು ಕಲ್ಲಿನ ಮೇಲಿದ್ದ ಹುಣಸೇ ತೊಕ್ಕು, ಬೀಜ ಇನ್ನೊಂದು ಮಗುಲಲ್ಲಿ ಬಿದ್ದಾಗ ಬಹಳ ಆಘಾತವಾಗಿ ಕುದುರೆ ಮತ್ತು ದನಕರುಗಳು ಮೂರ್ಛೆ ಹೋದವು. ಇದರಿಂದ ಚಿಂತಾಕ್ರಾಂತರಾದ ವ್ಯಾಪಾರಿಗಳು ಊರಿನ ಗೌಡರಿಗೆ ತಿಳಿಸಿದಾಗ, ಅವರೂ ಸಹಾ ಗಾಬರಿಗೊಂಡು ಈ ಗ್ರಾಮದ ಪೂರ್ವ ದಿಕ್ಕಿನಲ್ಲಿರುವ ಹುಲ್ಲೆಕೆರೆ ಗ್ರಾಮದೇವತೆ ಕರಿಯಮ್ಮನನ್ನು ಶಾಸ್ತ್ರ ಕೇಳಲು ಹೋಗುತ್ತಿರುವಾಗ ಮಾರ್ಗ ಮಧ್ಯದಲ್ಲಿಯೇ ದೇವಿ ಕೊರವಂಜಿ ರೂಪದಲ್ಲಿ ಪ್ರತ್ಯಕ್ಷಳಾಗಿ, ಗೌಡರಿಗೆ ಕಲ್ಲು ಸಿಡಿದಿರುವ ಆ ಸ್ಥಳದಲ್ಲಿ, ನನ್ನ ಅಣ್ಣ ರಂಗನಾಥ ಸ್ವಾಮಿಯ ಗುಡಿಯನ್ನು ಕಟ್ಟಿಸಿ, ನಿಮಗೆ ಶಾಪ ವಿಮೋಚನೆಯಾಗುತ್ತದೆ ಎಂದು ಆಜ್ಞಾಪಿಸಿದಳು ಮಾರನೇ ದಿನವೇ ಆ ಕಲ್ಲು ಸಿಡಿದಿರುವ ಸ್ಥಳದಲ್ಲೇ ಬೃಂದಾವನವನ್ನು ಕಟ್ಟಿಸಿ, ಅದಕ್ಕೆ ನೆರಳಾಗಿ ಕಲ್ಲು ಮಂಟಪವನ್ನು ಕಟ್ಟಿಸಿದರು, ಆಗ ಶಾಪ ವಿಮೋಚನೆಯಾಗಿ ಕುದುರೆ, ದನಕರುಗಳು ಓಡಾಡಿದವು, ಆಗ ವ್ಯಾಪಾರಿಗಳು ಸಂತೋಷದಿಂದ ಮುಂದಿನ ಊರಿಗೆ ಪ್ರಯಾಣ ಬೆಳೆಸಿದರು.

ಕಲ್ಲು ಸಿಡಿದ ಪಕ್ಕದಲ್ಲಿ ಹುಣಸೆ ಬೀಜ ಬಿದ್ದಿದ್ದು ಅದು ಸಸಿಯಾಗಿ, ಆ ಹುಣಸೆಮರ ಹೆಮ್ಮರವಾಗಿ ಬೆಳೆದು, ಆ ರಂಗನಾಥ ಸ್ವಾಮಿ ಬೃಂದಾವನ ಮತ್ತು ಕಲ್ಲಿನ ಮಂಟಪಕ್ಕೆ ನೆರಳಾಗಿ ಆಸರೆಯಾಗಿತ್ತು. ಮುಂದಿನ ದಿನಗಳಲ್ಲಿ ಆ ಊರಿನ ಗೌಡರು, ಗ್ರಾಮಸ್ಥರು ಹಾಗೂ ಈ ದೇವರನ್ನು ಕುಂಚಿಟಿಗರ ಹೇರೆ ನೋರು ಕುಲದ ಮನೆದೇವರನ್ನಾಗಿ ಮಾಡಿಕೊಂಡಿರುವ ಅಣ್ಣ ತಮ್ಮಂದಿರುಗಳು ಸೇರಿ, ಆ ಕಲ್ಲು ಮಂಟಪದಲ್ಲಿರುವ ಬೃಂದಾವನ ಮತ್ತು ದೈವಸೃಷ್ಟಿಯಿಂದ ಬೃಹದಾಕಾರವಾಗಿ ಬೆಳೆದ ಹುಣಸೆಮರವನ್ನು ಈ ದೇವಸ್ಥಾನದ ಗೋಡೆಗೆ ಸೇರಿಸಿಕೊಂಡು ಶ್ರೀ ರಂಗನಾಥ ಸ್ವಾಮಿಯ ದೇವಸ್ಥಾನವನ್ನು ಕಟ್ಟಿಸಿ, ಪ್ರತಿವರ್ಷ, ಜಾತ್ರೆ, ರಥೋತ್ಸವಗಳನ್ನು ವಿಜೃಂಬಣೆಯಿಂದ ನಡೆಸುತ್ತಿದ್ದಾರೆ.

## ದೇವಸ್ಥಾನದ ವಿನ್ಯಾಸ :

ಈ ದೇವಸ್ತಾನದ ಅಡಿಪಾಯದಿಂದ ಮೇಲ್ಚಾವಣಿಯವರೆವಿಗೂ ಕಲ್ಲಿನಿಂದ ನಿರ್ಮಿಸಿ, ಗರ್ಭಗುಡಿ ಅಂತರಾಳ, ಮುಖಮಂಟಪಗಳನ್ನು ದ್ರಾವಿಡ ಶೈಲಿಯಲ್ಲಿ ವಿನ್ಯಾಸಗೊಳಿಸಿದ್ದಾರೆ, ದೇವಸ್ಥಾನದ ವಿಮಾನ ಗೋಪುರವು ಏಕಪಲ ವಿನ್ಯಾಸಹೊಂದಿದ್ದು, ವಿರುದ್ದ ದಿಕ್ಕಿನಲ್ಲಿ ಒಂದು ತಲೆ ಎರಡು ದೇಹದ ನಾಲ್ಕು ಸಿಂಹದ ವಿಗ್ರಹಗಳನ್ನು ಜೋಡಿಸಿದ್ದಾರೆ, ವಿಮಾನ ಗೋಪುರದ ಮೇಲೆ ಕಳಸವನ್ನು ಪ್ರತಿಸ್ಥಾಪಿಸಲಾಗಿದೆ, ದೇವಸ್ಥಾನದ ಸುತ್ತಲೂ ವಿಶಾಲವಾದ ಪ್ರಾಕಾರವಿದ್ದು, ಅರ್ದ ಮಂಟಪದ ಮುಂಬಾಗದಲ್ಲಿ, ಮೂರು ಅಡಿ ಕೆಳಗೆ ಕಲ್ಲು ನಾರು ಶೀಟಿನ ಮತ್ತೊಂದು ಹಜಾರವನ್ನು ನಿರ್ಮಿಸಲಾಗಿದೆ ಅದರ ಮುಂಬಾಗದ ಹತ್ತು ಅಡಿ ಅಂತರದಲ್ಲಿ ತುಳಸಿಕಟ್ಟೆ ಮತ್ತು ದ್ವಜ ಸ್ಥಂಭವನ್ನು ನಿರ್ಮಿಸಿದ್ದಾರೆ, ಪೂರ್ವಕ್ಕೆ ಮಹಾದ್ವಾರವಿದ್ದು, ಈಶಾನ್ಯದಲ್ಲಿ ಮುನ್ನೂರು ವರ್ಷಗಳ ಪುರಾತನ ಸುಸ್ಥಿತಿಯಲ್ಲಿರುವ ರಥವನ್ನು ಇಡಲಾಗಿದೆ ಜಾತ್ರಾ ಸಮಯದಲ್ಲಿ ಪ್ರತಿದಿನ ಒಂದೊಂದರಂತೆ ಅಲಂಕಾರ ಮಾಡಿ ಗುರುಡೋತ್ಸವ, ದವನೋತ್ಸವ, ಆನೆ ಕುದುರೆ ಸಮೇತ ಹನುಮಂತರಾಯಯ ಸ್ವಾಮಿಯ ಹೂವಿನ ಉತ್ಸವಗಳನ್ನು ದೇವಸ್ಥಾನದ ಪ್ರಾಂಗಣದಲ್ಲೆ ಈ ರಥದಲ್ಲಿ ವೈಭವದಿಂದ ಉತ್ಸವಗಳನ್ನು ಮಾಡುತ್ತಾರೆ ದೇವಸ್ಥಾನದ ಎಡಬಾಗದಲ್ಲಿ ಅಕ್ಷರ ಸ್ಪುಟವಿಲ್ಲದ ವಿಜಯನಗರೋತ್ತರ ಕಾಲದ ಅಪ್ರಕಟಿತ ಸ್ಥಂಬ ಶಾಸನವಿದೆ ಈ ದೇವಸ್ತಾನದ ಇತಿಹಾಸ ಮತ್ತು ವಿನ್ಯಾಸವನ್ನು ಕುಂಚಿಟಿಗರ ಜಾತಿಯ ಅರ್ಚಕರಾದ ಶ್ರೀ ನಾಗೇಶ್‌ರವರು ಸವಿಸ್ತಾರವಾಗಿ ತಿಳಿಸಿರುತ್ತಾರೆ.

ಈ ಗ್ರಾಮದ ಗ್ರಾಮಸ್ಥರುಗಳು, ಭಕ್ತಾದಿಗಳು ಹಾಗೂ ಕುಂಚಿಟಿಗರ ಹೇರೆನೊರು ಕುಲದ ಅಣ್ಣ ತಮ್ಮಂದಿರುಗಳು ಸೇರಿ, ಬೃಹದಾಕಾರವಾದ ಸುಂದರವಾದ ಶ್ರೀರಂಗನಾಥ ಸ್ವಾಮಿಯ ಕಲ್ಲಿನ ಹೊಸ ದೇವಸ್ಥಾನವನ್ನು ಕಟ್ಟಲು ದೇಣಿಗೆಯಿಂದ ಸುಮಾರು 50 ಲಕ್ಷ

ರೂಪಾಯಿಗಳನ್ನು ಸಂಗ್ರಹಿಸಿಕೊಂಡು, ಈ ದೇವಸ್ಥಾನದ ಗೋಡೆಯಲ್ಲಿ ನೂರಾರು ವರ್ಷಗಳಿಂದ ದೇವರಿಗೆ ನೆರಳಾಗಿ ನಿಂತಿರುವ ದೈವಸ್ವರೂಪಿ ಹುಣಸೇಮರವನ್ನು ಕಡಿದು ದೇವಸ್ಥಾನವನ್ನು ಜೀರ್ಣೋದ್ದಾರ ಮಾಡಲು ಸ್ವಾಮಿಯ ಅಪ್ಪಣೆ ಕೇಳಿದಾಗ ರಂಗನಾಥ ಸ್ವಾಮಿಯು ಹುಣಸೆ ಮರವನ್ನು ಕಡಿದು ಹೊಸ ದೇವಸ್ತಾನವನ್ನು ಕಟ್ಟಲು ಇಲ್ಲಿಯವರೆವಿಗೂ ಬಲಭಾಗಕ್ಕೆ ಹೂವು ಕೊಡದ ಕಾರಣ, ಭಕ್ತಾದಿಗಳಿಂದ ಸಂಗ್ರಹಿಸಿದ ದೇಣಿಗೆ ಹಣವನ್ನು ಸದ್ವಿನಿಯೋಗ ಪಡಿಸುವ ಉದೇಶದಿಂದ ದೇವಸ್ಥಾನದ ಬಲಭಾಗದಲ್ಲಿ ಕಲ್ಯಾಣ ಮಂಟಪವನ್ನು ಕಟ್ಟಿಸಿದ್ದಾರೆ ಜಾತ್ರೆಯ ಕಾಲದಲ್ಲಿ ಹಬ್ಬ ಹರಿದಿನಗಳಲ್ಲಿ, ಮದುವೆ, ಮುಂಜಿ ಇನ್ನೂ ಮುಂತಾದ ಶುಭ ಕಾರ್ಯಗಳನ್ನು ಮಾಡುತ್ತಾ ಹಾಗೂ ":ಅನ್ನ ದಾಸೋಹ"ನಡೆಸುತ್ತಾ ಈ ಭಕ್ತಾದಿಗಳು ನೀಡಿದ ದೇಣಿಗೆ ಹಣವನ್ನು ಸದ್ಬಳಕೆ ಮಾಡಿಕೊಂಡಿದ್ದಾರೆ.

**ಈ ಜಾತ್ರೆಯ ವೈಶಿಷ್ಟ್ಯಗಳು:**

ಮಾನವ ತನ್ನ ಬೆಳವಣಿಗೆಯ ಆರಂಭ ದಿನಗಳಲ್ಲಿ ಆಚರಣೆ ಪದ್ದತಿಗಳಿಗೆಲ್ಲಾ ಧಾರ್ಮಿಕ ಬಾವನೆಗಳ ಪ್ರೇರಕ ಶಕ್ತಿಯಾಗಿತ್ತು ಹೀಗೆ ದೇವರಲ್ಲಿ ಭಯ-ಬಕ್ತಿ ಶ್ರದ್ದೆಯುಳ ಮಾನವ ದೇವರನ್ನು ಒಲಿಸಿಕೊಂಡು ಶಾಂತಿ-ನೆಮ್ಮದಿ, ಸುಖ-ಕಾಣಲು ನಂಬಿಕೆಗಳನ್ನು ಆಶ್ರಯಿಸಿದ, ನಂಬಿಕೆಗಳಿಗೆ ಪೂರಕವಾದ ಹಲವಾರು ಸಂಪ್ರದಾಯದ ಆಚರಣೆಗಳನ್ನು ಜೀವನದಲ್ಲಿ ಆಳವಡಿಸಿಕೊಂಡ, ದೈವವನ್ನು ಮೊರೆಹೊದ, ದೈವರಾಧನೆಯಲ್ಲಿ ಹಬ್ಬ - ಹರಿದಿನಗಳನ್ನು ಹಾಗೂ ಜಾತ್ರಾ ಮಹೋತ್ಸವಗಳಲ್ಲಿ ಸಂತಸವನ್ನು ಕಂಡಕೊಂಡ.

**"ಹೋಳಿಗೆಯಿಲ್ಲದೆ ಹಬ್ಬವಿಲ್ಲ, ರಥವಿಲ್ಲದೆ ಜಾತ್ರೆಯಲ್ಲ"** ಎಂಬ ಗಾದೆಯಂತೆ ಜಾತ್ರೆಗಳು ಮತ್ತು ಹಬ್ಬಗಳು ಪರಸ್ಪರ ಪೂರಕವಾದವು ಹಬ್ಬಗಳ ಜೊತೆಯಲ್ಲಿಯೇ ಬಹುಪಾಲು ಜಾತ್ರೆಗಳು ಜನಿಸಿರುವುದು ಜಾತ್ರೆಗಳು ಸಿರಾ ತಾಲ್ಲೂಕಿನಲ್ಲಿ ಜರುಗುವ ಸ್ಥಳದ ಮಹಿಮೆ ಅಥವಾ ಅಲ್ಲಿಯ ದೇವರ ಹೆಸರಿನಿಂದ ಜನಪ್ರಿಯವಾಗಿರುವುದುಂಟು ಈ ಜಾತ್ರೆಗಳು ಜನತೆಯಲ್ಲಿ ಉತ್ಸಾಹವನ್ನು ಉಕ್ಕಿಸುತ್ತದೆ, ಮನರಂಜನೆಯನ್ನು ನೀಡುತ್ತವೆ. ಇವು ಬದುಕಿನ ಬಾಂದವ್ಯವನ್ನು ಬೆಸೆಯುತ್ತವೆ. ಜೀವನ ಸಂಗಾತಿಯನ್ನು ಆರಿಸಿಕೊಳ್ಳುವ ಸದಾವಕಾಶವನ್ನು ಜಾತ್ರೆಗಳು ಒದಗಿಸುತ್ತವೆ.

ಸಿರಾ ತಾಲ್ಲೂಕಿನಲ್ಲಿ ಹೆಚ್ಚಿನ ಜಾತ್ರೆಗಳು ನಡೆಯುವುದು ಕೃಷಿ ಕೆಲಸಗಳು ಮುಗಿದು ಫಸಲು ಕೈಗೆ ಬಂದು ದವಸ ಧಾನ್ಯಗಳನ್ನು ಕಣಜಗಳಲ್ಲಿ ಭದ್ರಪಡಿಸಿ, ಉಳಿದುದ್ದನ್ನು ಮಾರಿ, ರೈತರು ಬಿಡುವಾಗಿರುವ ಸುಗ್ಗಿಯ ಕಾಲದಲ್ಲಿ ಕೈಗೆ ಬಂದ ಉತ್ತಮ ಫಲಕ್ಕಾಗಿ, ದೇವರಿಗೆ ಹರಕೆ ಸಲ್ಲಿಸುವ ಸಂದರ್ಭದಲ್ಲಿ ದುಡ್ಡು ಕೈಯಲ್ಲಿರುವುದರಿಂದ, ರೈತರ ಅಗತ್ಯ ವಸ್ತುಗಳ ವ್ಯಾಪಾರ-ವಹಿವಾಟಿಗೆ ಜಾತ್ರೆ ಒಂದು ಅನುಕೂಲಕರ ಅಂಗ, ಜಾತ್ರೆಯಲ್ಲಿ ರೈತನಿಗೆ ವರ್ಷವಿಡಿ ಕೃಷಿಗೆ ಬೇಕಾದ ಕೃಷಿ

ಸಲಕರಣೆಗಳು ಅಂದರೆ ಮಚ್ಚು, ಕೊಡಲಿ, ಪಟ್ಟೆ, ಸಲಿಕೆ, ಗುದ್ದಲಿ, ಹಾರೆ, ಹಗ್ಗಗಳು ಇನ್ನೂ ಮುಂತಾದ ಬೇಸಾಯಕ್ಕೆ ಬೇಕಾದ ದಿನ ನಿತ್ಯದ ವಸ್ತುಗಳ ವಿವಿಧ ರೀತಿಯ ಅಂಗಡಿಗಳಿಂದ ಒಂದೇ ಕಡೆಕೊಂಡುಕೊಳ್ಳಲು ಅನುಕೂಲವಾಗುತ್ತದೆ.


ಇನ್ನು ಜಾತ್ರೆಗೆ ಹೆಂಡತಿಯನ್ನು ಕರೆದುಕೊಂಡು ಹೋದರೆ ಮನೆಗೆ ಬೇಕಾದ ಸ್ಟೀಲ್ ಪಾತ್ರೆಗಳು, ಚೊಂಬು, ಬಿಂದಿಗೆ, ಬಕೇಟ್ ಇತ್ಯಾದಿಗಳ ಹಾಗೂ ಹೆಂಡತಿಗೆ ಬೇಕಾದ ಸೀರೆ, ಚೂಡಿದಾರ, ಬಳೆ, ಕಾಲುಚೈನು, ವಾಲೆ, ಜುಮ್ಕಿ, ಸ್ಟಿಕರ್, ಹೇರ್ ಪಿನ್. ಚಪ್ಪಲಿ, ತೆಗೆದುಕೊಳ್ಳುವಷ್ಟರಲ್ಲಿ ಗಂಡನ ಜೇಬಿನಲ್ಲಿರುವ ಸಾವಿರಾರು ರೂಪಾಯಿಗಳು ಮುಗಿದು ಜೇಬು ಕಾಲಿಯಾಗಿದಾಗ ಮತ್ತೆಹೆಂಡತಿ ರೀ" ಅದೂ ಅಂತ ಬಾಯಿ ಬಿಟ್ಟಾಗ, ಗಂಡ ಸಿಟ್ಟಿನಿಂದ ಈ ಅಂಗಡಿನೇ ಕೊಂಡುಕೊಂಡು ಬಿಡೋಣ ಅಂತ ಮೂದಲಿಸಿದಾಗ, ಹೆಂಡತಿ ಸಪ್ಪೆಮೋರೆ ಹಾಕಿಕೊಂಡು, ಮನೆಕಡೆ ಹೋಗೋಣ ಎಂದು ಗಾಡಿ ಹತ್ತಿ ಕುಳಿತುಕೊಳ್ಳುವಳು **"ಮಕ್ಕಳನ್ನು ಕಟ್ಟಿಕೊಂಡು ಮದುವೆಗೆ ಹೋಗಬೇಡ, ಹೆಂಡತಿಯನ್ನು ಕಟ್ಟಿಕೊಂಡು ಜಾತ್ರೆಗೆ ಹೋಗಬೇಡ"** ಎಂಬ ಗಾದೆಯಂತೆ ಗಂಡನ ಜೇಬಲ್ಲಿ ಎಷ್ಟೇ ದುಡಿದ್ದರೂ ಸಾಕಾಗುವುದಿಲ್ಲ.


ಇನ್ನು ಗ್ರಾಮೀಣ ಜಾತ್ರೆಗಳು ಮನರಂಜನೆಯನ್ನು ಒದಗಿಸುವ ತಾಣವಾಗಿದೆ **"ಹಬ್ಬ ಊಟಕ್ಕೆ ಚೆಂದ ಜಾತ್ರೆ ನೋಟಕ್ಕೆ ಚೆಂದ"** ಎಂಬ ಗಾದೆಯಂತೆ ದುಡಿಮೆಯೇ ದೇವರು ಎಂದು ನಂಬಿರುವ ನಮ್ಮ ಮಕ್ಕಳಿಗೆ ಜಾತ್ರೆಗಳು ಮನರಂಜನೆ ನೀಡಿ ಮುದುಡಿದ ಮನಸ್ಸಿಗೆ ಮುದ ನೀಡುತ್ತವೆ. ಜಾತ್ರೆಯಲ್ಲಿ ಕೀಲು ಕುದುರೆ, ಹಾವಾಡಿಗರು ಕೊಲೆ ಬಸವ ಆಡಿಸುವವರು, ಹುಲಿವೇಷದವರು, ಗೊರವರವೇಷದವರು ಇನ್ನೂ ಮುಂತಾದ ಜನಪದ ಕಲೆಗಳನ್ನು ಕರಗತ ಮಾಡಿಕೊಂಡಿರುವವರು ನಮ್ಮ ಮಕ್ಕಳ ಮನಸ್ಸನ್ನು ರಂಜಿಸುತ್ತಾರೆ ಜಾತ್ರೆಗಳಲ್ಲಿ ಗಂಡು ಮಕ್ಕಳಿಗೆ ಚೆಂಡು, ಬುಗುರಿ, ಚಪ್ಪಲಿ, ಬೆಂಡು ಬತಾಸು ಇನ್ನು ಹೆಣ್ಣು ಮಕ್ಕಳಿಗೆ ವಾಲೆ, ಜುಮ್ಕಿ, ಹೆರ್‌ಪಿನ್, ಸ್ಟಿಕರ್, ಚುಡಿದಾರ, ಬಳೆ ಕೊಡಿಸಿದರೆ ಸಾಕು ಸಂತೋಷಪಡುತ್ತಾ, ಮುಂದಿನ ವರ್ಷದ ಜಾತ್ರೆಯವರೆವಿಗೂ ನೆನೆಪಿಸಿಕೊಳ್ಳುತ್ತಿರುತ್ತಾರೆ ಈ ಜಾತ್ರೆಗಳ ಸೊಬಗನ್ನು.!

**ಜಾತ್ರಾ ಮಹೋತ್ಸವ :**

ಇನ್ನು ಶಿರಾ ತಾಲ್ಲುಕಿನಲ್ಲಿ "ರಥೋತ್ಸವ"ನಡೆಯುವಲ್ಲಿ ಬಹುಪಾಲು ಜಾತ್ರೆ ನಡೆಯುತ್ತಿರುತ್ತದೆ, ಅದೇ ರೀತಿಗಿಡಗನಹಳ್ಳಿ ಶ್ರೀ ರಂಗನಾಥ ಸ್ವಾಮಿ ಜಾತ್ರೆಯಲ್ಲೂ ಒಂದು ಶುಭದಿನ ರಥೋತ್ಸವ ನಡೆಯುತ್ತದೆ. ಇಲ್ಲಿ ಪ್ರತಿವರ್ಷ ಚೈತ್ರ ಮಾಸದ ಶ್ರೀ ರಾಮ ನವಮಿ ಹಬ್ಬದ ದಿನದಿಂದ ಪ್ರಾರಂಭವಾಗಿ ಒಟ್ಟು 6 ದಿನಗಳ ಕಾಲ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತವೆ ಮೊದಲನೇ ದಿವಸ ಬೆಳಿಗ್ಗೆ ಗ್ರಾಮಸ್ಥರುಗಳು ಮದಲೂರು ಕೆರೆಗೆ ಹೋಗಿ ಸ್ವಾಮಿಗೆ ಗಂಗಾಪೂಜೆ ಮಾಡಿಸಿ ಗುಡಿ ದುಂಬಿಸುತ್ತಾರೆ,

ಸಾಯಂಕಾಲ ಮಡಿ ಹೂವಿನ ತೇರನ್ನು ದೇವಸ್ಥಾನದ ಅಂಗಳದಲ್ಲಿ ಹೊರಡಿಸುತ್ತಾರೆ, ಎರಡನೇ ದಿನ ಸ್ವಾಮಿಯನ್ನು ದವನದಿಂದ ಅಲಂಕೃತವಾದ ಗರುಡವಾಹನದಲ್ಲಿ ಕುಳ್ಳಿರಿಸಿ ಉತ್ಸವ ಮಾಡುತ್ತಾರೆ, ಮೂರನೇ ದಿನ "ಕಲ್ಲುಗಾಲಿ ರಥೋತ್ಸ"ವನ್ನು ಹೂವು ಮತ್ತು ಬಣ್ಣ ಬಣ್ಣದ ಬಟ್ಟೆಗಳಿಂದ ಮತ್ತು ಬಾವುಟಗಳಿಂದ, ತಳಿರು, ತೋರಣಗಳಿಂದ ಅಲಂಕಾರ ಮಾಡಿ ಸ್ವಾಮಿಯ ಉತ್ಸವ ಮೂರ್ತಿಯನ್ನು ರಥದಲ್ಲಿ ಕುಳ್ಳಿರಿಸಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ಹರ್ಷೋದ್ಗಾರಗಳಿಂದ ರಥಕ್ಕೆ ದವನ, ಬಾಳೆಹಣ್ಣುಗಳನ್ನು, ಭಕ್ತಿಬಾವದಿಂದ ಎಸೆಯುತ್ತಾ ರಥವನ್ನು ಎಳೆದು ತಮ್ಮ ಹರಕೆಯನ್ನು ತೀರಿಸುತ್ತಾರೆ, ನಾಲ್ಕನೇ ದಿವಸ ಆನೆ ಉತ್ಸವ, ಅಂದರೆ ಗಜಪತಿಯ ಮೇಲೆ ಸ್ವಾಮಿಯನ್ನು ಅಲಂಕಾರ ಮಾಡಿ ಕುಳ್ಳಿರಿಸಿ ಉತ್ಸವ ಮಾಡುತ್ತಾರೆ. ಐದನೇ ದಿವಸ ಮಧ್ಯಾಹ್ನ ಹರಕೆ ಹೊತ್ತ ವಕ್ಕಲುಗಳಿಂದ ಉಂಡೆ–ಮಂಡೆ ಅಂದರೆ ಚೌಲೋಪನಯನ ಕಾರ್ಯಕ್ರಮವನ್ನು ಮಾಡಿ ಭಕ್ತರೆಲ್ಲರಿಗೂ ಅನ್ನ ಸಂತರ್ಪಣೆ ಏರ್ಪಡಿಸುತ್ತಾರೆ ಅಂದು ರಾತ್ರಿ (ಹನುಮನ) ಆಂಜನೇಯ ಹೂವಿನ ಉತ್ಸವ" ವನ್ನು ವಿಜೃಂಭಣೆಯಿಂದ ಮಾಡಿ, ಹರಿಸೇವೆ ಮಾಡುತ್ತಾರೆ. ಕೊನೆಯ ದಿವಸ ರಂಗನಾಥನ ತಂಗಿ ಎಂದೇ ಕರೆಯಲ್ಪಡುವ ಕರಿಯಮ್ಮ ದೇವಿಯ ಜಾತ್ರೆಯನ್ನು ಏರ್ಪಡಿಸುತ್ತಾರೆ ಭಕ್ತರು ಹರಕೆಯ ರೂಪದಲ್ಲಿ ಕರಿಯಮ್ಮ ದೇವಿಗೆ ಕುರಿ, ಕೋಳಿ, ಬಲಿಕೊಟ್ಟು ಆರತಿ ಮಾಡಿ, **'ಗಾವು'** ಸಿಗಿಯುತ್ತಾರೆ, ಬಂದಂತಹ ನೆಂಟರಿಷ್ಟರುಗಳು ಭಕ್ತರು, ಭರ್ಜರಿ **'ಬಾಡೂಟ'** ಮಾಡಿ ಸಂತೋಷದಿಂದ ತಮ್ಮ ತಮ್ಮ ಊರುಗಳಿಗೆ ಹಿಂತಿರುಗುತ್ತಾರೆ ಈ ಎಲ್ಲಾ 6 ದಿನಗಳ ಕಾರ್ಯಕ್ರಮಗಳನ್ನು ಅಣ್ಣ–ತಮ್ಮಂದಿರುಗಳು, ಪೂಜಾರಿಗಳು, ಒಕ್ಕಲುಗಳು, ಕೈವಾಡಸ್ತರು, ಭಕ್ತಾದಿಗಳು ಹಾಗೂ ಗ್ರಾಮಸ್ಥರುಗಳು ಸೇರಿ ಶ್ರೀ ರಂಗನಾಥ ಸ್ವಾಮಿಯ ಜಾತ್ರಾ ಮಹೋತ್ಸವವನ್ನು ವಿಜೃಂಬಣೆಯಿಂದ ನಡೆಸಿ ಸಂತೋಷ ಪಡುತ್ತಾರೆ.





ಭಾರತದ ಭವ್ಯ ಪರಂಪರೆಯಲ್ಲಿ ಕರ್ನಾಟಕದಲ್ಲಿ ಹೂವಿನ ರಥೋತ್ಸವಕ್ಕೆ ಹೆಸರುವಾಸಿಯಾದ

# ಶ್ರೀ ಕಂಬದ ರಂಗನಾಥಸ್ವಾಮಿ ಜಾತ್ರಾ ಮಹೋತ್ಸವದ ಆಹ್ವಾನ ಪತ್ರಿಕೆ

**ಮಾಗೋಡು, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ.**

ಸ್ವಸ್ತಿಶ್ರೀ ಹೇವಿಳಂಬಿ ನಾಮ ಸಂವತ್ಸರದ ಮಾಘ ಮಾಸ ಭಾರತ ಹುಣ್ಣಿಮೆ

ದಿನಾಂಕ 27-01-2018ನೇ ಶನಿವಾರ ದಿಂದ 03-02-2018ನೇ ಶನಿವಾರದ ವರೆಗೆ

ಪ್ರತಿ ವರ್ಷದಂತೆ ಈ ವರ್ಷವೂ ಸಹ ಶ್ರೀ ಸ್ವಾಮಿಯ ಜಾತ್ರೆ ನಡೆಯುವುದು.

## ಕಾರ್ಯಕ್ರಮಗಳು

| | |
|---|---|
| 27-01-2018ನೇ ಶನಿವಾರ | ಬೆಳಗ್ಗೆ ಗಂಗಾಸ್ನಾನ, [illegible] |
| 28-01-2018ನೇ ಭಾನುವಾರ | ಗರುಡ ವಾಹನೋತ್ಸವ |
| 29-01-2018ನೇ ಸೋಮವಾರ | ಹೂವಿನ ರಥೋತ್ಸವ |
| 30-01-2018ನೇ ಮಂಗಳವಾರ | ಆಂಜನೇಯ ವಾಹನೋತ್ಸವ |
| 31-01-2018ನೇ ಬುಧವಾರ | ತಲೆಮುಂಡೆ |
| 1-02-2018ನೇ ಗುರುವಾರ | ಅನ್ನಸಂತರ್ಪಣೆ |
| 2-02-2018ನೇ ಶುಕ್ರವಾರ | ಜಾಡಿ ಲೆಕ್ಕಾಚಾರ |
| 3-02-2018ನೇ ಶನಿವಾರ | ಮರು ಪೂಜೆ |

ಈ ಮೇಲ್ಕಂಡ ಎಲ್ಲಾ ಕಾರ್ಯಕ್ರಮಗಳಿಗೆ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ,

ಶ್ರೀ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ

ವಿ.ಸೂ.: ಮಾನ್ಯ ಭಕ್ತಾದಿಗಳಲ್ಲಿ ಮನವಿ ದೇವಸ್ಥಾನದ ರಾಜಗೋಪುರ ಕೆಲಸ ನಡೆಯುತ್ತಿರುವುದರಿಂದ ಭಕ್ತಾದಿಗಳು ಧನ ಸಹಾಯ ಮಾಡಿ ರಸೀದಿ ಪಡೆಯತಕ್ಕದ್ದು




ಇಂತಿ,

ನಾಗರಾಜು ಪಿ., ಪಾಲಿರಂಗಯ್ಯನವರ ಮಗ

ಪಾಲಿರಂಗಯ್ಯ ಮತ್ತು ಗಂಗಯ್ಯ, ಜೆ.ಸಿ.ಬಿ. ಮಾಲೀಕರು, ಪಾಲಿಹಟ್ಟಿ

**ಸರ್ವರಿಗೂ ಆದರದ ಸ್ವಾಗತ**

ಮುದ್ರಣ: ... ಪ್ರೆಸ್, ... 9740211236

# 6. ಮಾಗೋಡು ಶ್ರೀ ಕಂಬದ ರಂಗನಾಥಸ್ವಾಮಿ ಹೂವಿನ ಜಾತ್ರಾ ಮಹೋತ್ಸವ

**ಪೀಠಿಕೆ:**

ತುಮಕೂರು ಜಿಲ್ಲೆ ಶಿರಾ –ಮಧುಗಿರಿ ಮಾರ್ಗದಲ್ಲಿ ಮಾಗೋಡು ಗೇಟ್‌ನಿಂದ ಉತ್ತರ ಬಾಗಕ್ಕೆ 3 ಕಿ.ಮೀ ಶಿರಾಪಟ್ಟಣದಿಂದ 10.ಕಿ.ಮೀ ಹಾಗೂ ನಮ್ಮೂರು ಚಿಕ್ಕನಹಳ್ಳಿಯಿಂದ 13 ಕಿ.ಮೀ ದೂರದಲ್ಲಿ ಮಾಗೋಡು ಗೊಲ್ಲರಹಟ್ಟಿ ಎಂಬ ಮಾಗೋಡಿನ ಉಪ ಗ್ರಾಮವಿದೆ ಗ್ರಾಮಸ್ಥರಾದ ರಂಗಯ್ಯನವರು ಹೇಳುವ ಪ್ರಕಾರ ಈ ಗ್ರಾಮಕ್ಕೆ ಆಂದ್ರ ರತ್ನಗಿರಿಯಿಂದ ಸಿರಾ ಪಟ್ಟಣಕ್ಕೆ ಪಾಳ್ಯಗಾರರು ಕುದುರೆಯಲ್ಲಿ ಬರುವಾಗ, ಈ ಗ್ರಾಮದ ರಸ್ತೆಯ ಮಧ್ಯಬಾಗದಲ್ಲಿ 'ಮೊಲ' ಅಡ್ಡ ಬಂದು ನಿಂತಾಗ, ಕುದುರೆಯೇ ಹೆದರಿ ಹಿಂದಕ್ಕೆ ತಿರುಗಿತು, ಆಗ ಪಾಳೆಗಾರ ಈ 'ಮೊಲ'ದ ಧೈರ್ಯವನ್ನು ಮೆಚ್ಚಿ ಈ ಗ್ರಾಮಕ್ಕೆ "ಮಗೋಡು" (ಮಗೋಡು ಎಂದರೆ ಆಂದ್ರದ ಬಾಷೆಯಲ್ಲಿ 'ದೈರ್ಯವಂತ' ಎಂದು) ಎಂದು ನಾಮಕರಣ ಮಾಡಿದರು, ಕಾಲಾನಂತರ ಈ ಗ್ರಾಮ 'ಮಾಗೋಡು" ಎಂದು ರೂಪಾಂತರ ಹೊಂದಿತು ಅದೇ ರೀತಿ ಈ ಗ್ರಾಮಕ್ಕೆ ಮುದ್ದೇಗೌಡರ ವಂಶದವರು ಹುಗಿ ಹೋಯ್ದರು ಎಂಬ ಐತಿಹ್ಯವಿದೆ. ಈ ಜೋಡಿ ಗ್ರಾಮಗಳಲ್ಲಿ 600 ಮನೆಗಳಿದ್ದು, ಸುಮಾರು 3000 ಜನ ಸಂಖ್ಯೆ ಇದ್ದು, ಗೊಲ್ಲರು, ಸಾದರು, ಆದಿಕರ್ನಾಟಕ, ನಾಯಕರು, ಆದಿ ದ್ರಾವಿಡ, ಕುಂಚಿಟಿಗ, ವಿಶ್ವಕರ್ಮ, ಬಾವಸಾರ ಕ್ಷತ್ರೀಯರುಗಳ ಮನೆಗಳಿವೆ ಈ ಗ್ರಾಮದ ಜೋಗಿರಣ್ಣ ಗಣೆಕಲಾವಿದನಾಗಿದ್ದು, ಮಾಗೋಡು ರಂಗನಾಥ ಕಥೆಯನ್ನು ಕಾವ್ಯದ ರೂಪದಲ್ಲಿ ಹಾಡುತ್ತಾರೆ, ಇದೇ ರೀತಿ ಕಂಬಣ್ಣ, ಚಿತ್ರಪ್ಪ ಹಾಗೂ ಈರಜ್ಜಿಯು ಸಹಾ ಕಾವ್ಯಗಳನ್ನು ಹಾಡುತ್ತಾರೆ.

ಈ ಎರಡೂ ಗ್ರಾಮಗಳಲ್ಲೂ ತಲಾ ಒಂದೊಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮತ್ತು ಅಂಗನವಾಡಿ ಕೇಂದ್ರಗಳಿವೆ ಅಲ್ಲದೆ ಗ್ರಾಮಪಂಚಾಯ್ತಿ ಕಾರ್ಯಾಲಯ, ವ್ಯವಸಾಯ ಸೇವಾ ಸಹಕಾರ ಸಂಘ, ಹಾಲು ಉತ್ಪಾದಕರ ಸೇವಾ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ, ಈ ಗ್ರಾಮದಲ್ಲಿ ಬೃಹತ್ ಕೆರೆ ಇದ್ದು, ಇಲ್ಲಿ ಭತ್ತ, ರಾಗಿ, ಜೋಳ, ರೇಷ್ಮೆ, ಅಡಿಕೆ, ತೆಂಗು ಇನ್ನು ಮುಂತಾದ ಬೆಳೆಗಳನ್ನು ಬೆಳೆದು ಇಲ್ಲಿನ ರೈತರು ಆರ್ಥಿಕವಾಗು ಮುಂದುವರಿದಿದ್ದಾರೆ. ಗ್ರಾಮದಲ್ಲಿ ಪ್ರಸಿದ್ದವಾದ ಕಂಬದ ರಂಗನಾಥ ಸ್ವಾಮಿ ದೇವಸ್ತಾನವಿದೆ. ಈ ದೇವಸ್ತಾನದ ಆವರಣದಲ್ಲಿ ಚಿತ್ರ ದೇವರು, ಭೂತಪ್ಪ ಮತ್ತು ಯಲ್ಲಮ್ಮ ದೇವಸ್ಥಾನಗಳಿವೆ, ಅಲ್ಲದೆ ಗ್ರಾಮದ ಕೆರೆ

ದಂಡೆಯಲ್ಲಿರುವ ಕಲ್ಲೇಶ್ವರ (ಮಲ್ಲೇಶ್ವರ) ಆಂಜನೇಯ, ಮೈಲಾರಲಿಂಗೇಶ್ವರ ಸ್ವಾಮಿಯ ಉತ್ಸವಗಳು ಹಬ್ಬ-ಹರಿದಿನಗಳಿಗೆ ನಡೆಯುತ್ತವೆ.

**ದೇವಸ್ಥಾನದ ವಿನ್ಯಾಸ :**

ಶ್ರೀ ಕಂಬದ ರಂಗನಾಥ ಸ್ವಾಮಿ ದೇವಸ್ಥಾನವು ಮೂರು ಗರ್ಭ ಗುಡಿಗಳನ್ನು ಹೊಂದಿದ್ದು "ತ್ರಿಕೂಟಾಚಲ" ದೇವಸ್ಥಾನದ ಮಾದರಿಯಲ್ಲಿದೆ. ದೇವಸ್ತಾನವು ಪೂರ್ವಾಭಿಮುಖವಾಗಿದ್ದು, ಇತ್ತೀಚೆಗೆ ಭಕ್ತರ ಸಹಕಾರದಿಂದ ಸಂಪೂರ್ಣ ವಾಗಿ ಜೀರ್ಣೋದ್ದಾರ ಮಾಡಿದ್ದಾರೆ, ಅಂತರಾಳದ ಅಕ್ಕಪಕ್ಕಗಳಲ್ಲಿ ಮೂರು ಗುಡಿಗಳನ್ನು ನಿರ್ಮಿಸಿದ್ದು ದಕ್ಷಿಣ ದಿಕ್ಕಿಗೆ ಯಲ್ಲಮ್ಮ, ಉತ್ತರ ದಿಕ್ಕಿಗೆ ರಂಗಪ್ಪನನ್ನು, ಮದ್ಯದ ಗರ್ಬಗುಡಿಯಲ್ಲಿ ಕಂಬದ ರಂಗವನ್ನು ಪ್ರತಿಷ್ಠಾಪಿಸಲಾಗಿದೆ. ಮುಖಮಂಟಪಕ್ಕೆ ಹತ್ತು ಕಂಬಗಳನ್ನು ಮಾಡಿ, ಕಂಬಗಳನ್ನು ದ್ರಾವಿಡ ಶೈಲಿಯಲ್ಲಿ ಕೆತ್ತನೆಮಾಡಲಾಗಿದೆ. ಯಲ್ಲಮ್ಮ ದೇವಸ್ತಾನದ ಬಾಗಿಲು ವಾಡಗಳನ್ನು ಕಮಲದಿಂದಲೂ, ಲಲಾಟ ಪಟ್ಟಿಕೆಯನ್ನು ಕಂಬಂದಿಂದ ಅಲಂಕರಿಸಿಲಾಗಿದೆ ದ್ವಾರದಲ್ಲಿ ದ್ವಾರಪಾಲಕರಾಗಿ ಎರಡು ಆನೆಗಳನ್ನು ಕೆತ್ತಲಾಗಿದೆ. ಮಧ್ಯದಲ್ಲಿರುವ ಕಂಬದ ರಂಗನಾಥಸ್ವಾಮಿ ದೇವಸ್ಥಾನದ ಬಾಗಿಲುವಾಡವನ್ನು ಪತ್ರ ಶಾಖೆಗಳಿಂದಲೂ, ಕಮಲದ ಶಾಳೆಗಳಿಂದಲೂ ಅಲಂಕರಿಸಲಾಗಿದೆ. ಕೆಳಗಡೆ ದ್ವಾರಪಾಲಕರಾದ ಜಯ-ವಿಜಯರನ್ನು ಕೆತ್ತಲಾಗಿದೆ ಮೂರನೆ ಗರ್ಭಗುಡಿಯಾದ ರಂಗಪ್ಪನ ದೇವಸ್ತಾನದ ಬಾಗಿಲುವಾಡವು, ಪತ್ರಶಾಖೆಗಳಿಂದ, ಮಾಡಲ್ಪಟ್ಟಿದ್ದು, ಎರಡು ನವಿಲುಗಳು ಕಚ್ಚಿಕೊಂಡುನಿಂತಿರುವಂತೆ ಚಿತ್ರಿಸಲಾಗಿದೆ ಲಲಾಟ ಪಟ್ಟಿಕೆಯಲ್ಲಿ ಐದು ಹೆಡೆಯ ಸರ್ಪವನ್ನು,ಅದರ ಎಡ-ಬಲ ಬಾಗಗಳಲ್ಲಿ ಒಂದೊಂದು ಹೆಡೆ ಬಿಚ್ಚಿದ ನಾಗರಗಳನ್ನು ಚಿತ್ರಿಸಲಾಗಿದೆ ಕಂಬದ ಮಧ್ಯಬಾಗದಲ್ಲಿ ಗಂಡುಬೇರುಂಡ, ಅಶೋಕ ಸ್ಥಂಬ, ವೇಣುಗೋಪಾಲ ಸ್ವಾಮಿ, ವಿಠಲಲಿಂಗ, ಮೃದಂಗದಾರಿ ನಂದಿಯನ್ನು ಕೆತ್ತಲಾಗಿದೆ, ಈ ಎಲ್ಲಾ ವಿಗ್ರಹಗಳು ಪೂರ್ವಾಭಿಮುಖವಾಗಿವೆ. ಕಂಬದ ಉತ್ತಾರಾದಿಮುಖದಲ್ಲಿ ಸಿಂಹ, ಎರಡು ತಲೆ ಹಾಗೂ ಒಂದೇ ದೇಹದಲ್ಲಿ ಮಾಡಿರುವ ಹಸುವನ್ನು ಮತ್ತು ಕುದುರೆಯ ತಲೆಯನ್ನು ಅಳವಡಿಸಿಲಾಗಿದೆ. ಅದರ ಮುಂಬಾಗದ ನಾಲ್ಕು ಕಂಬಗಳಲ್ಲಿ, ಹಾವು ತೆಕ್ಕೆ ಹಾಕಿಕೊಂಡು ಹೆಡೆ ಬಿಚ್ಚಿದಂತೆ ಚಿತ್ರಿಸಿ, ಈ ದೇವಸ್ಥಾನದ ಕುಸರಿ ಕೆಲಸವನ್ನು ಶಿಲ್ಪಿ ಅತಿ ವೈಭವದಿಂದ ಕೆತ್ತಿರುವ ಸಂಗತಿಯನ್ನು ರಾಮಾಜೋಯಿಸರು ಅತಿ ಸೂಕ್ಷ್ಮವಾಗಿ ತಿಳಿಸಿರುತ್ತಾರೆ.

**ಇತಿಹಾಸ :**

ಕಂಬದ ರಂಗನಾಥನು ಎಲ್ಲಾ ಜನಾಂಗಕ್ಕೆ ಮಹಿಮಾ ಭಾವನೆಯುಳ್ಳ ಪುರಾಣ ಪುರುಷನಾಗಿದ್ದು, ಶ್ರೀಹರಿಯು ರಂಗನಾಥನ ರೂಪದಲ್ಲಿ ಹಲವಾರು ಪವಾಡಗಳನ್ನು ಮಾಡಿ ಮಾಗೋಡಿನಲ್ಲಿ ನೆಲಸಿದನೆಂಬ ಬಾವನೆ ಇಲ್ಲಿಯ ಜನರಲ್ಲಿದೆ. ರಂಗನಾಥನ ಬಗ್ಗೆ ಹಲವಾರು ಕಥೆ ಹೇಳುತ್ತಾರೆ, ಕಾವ್ಯ ಹಾಡುತ್ತಾರೆ ಕಥೆ ಹೇಳುವಾಗ ಕಾವ್ಯದ ಮೂಲಕ ಹೇಳುವುದೇ ಒಂದು ವಿಶೇಷ ಶ್ರೀ ಹರಿಯು ಚಿಟ್ಪಾಲದ ಮೇಲೆ ಮಲಗಿದ್ದಾಗ, ಮುಂಗಾರು ಮಳೆಯ ಸಿಡಿಲು ಬಡಿದು ಉಕ್ಕಿನ ಪಾಳಿನ (ಕಂಬದ)ರೂಪದಲ್ಲಿ ಭೂಮಿಯನ್ನು ಸೇರುತ್ತಾನೆ. ಹೀಗೆ ಭೂಮಿ ಸೇರಿದ ಶ್ರೀ ಹರಿಯು 12 ವರ್ಷಗಳ ಕಾಲ ಭೂಮಿಯಲ್ಲಿ ನೆಲೆಸುತ್ತಾನೆ. ಶ್ರೀ ಹರಿಗೆ ಭೂಮಿಯನ್ನು ಹೊರಬರಬೇಕೆಂಬ ಬಯಕೆ ಉತ್ಕಟವಾಗುತ್ತದೆ, ಬಾರಿ ಜಮೀನ್ದಾರನೂ ಹಾಗೂ ಶ್ರೀಮಂತನಾದ ಬಬ್ಬೂರ ಗೌಡನಿಗೆ ಏಳು ಜನ ತಮ್ಮಂದಿರಗಳಿದ್ದು, ಎಲ್ಲರಿಗೂ ವಿವಾಹವಾಗಿರುತ್ತದೆ, ಬಬ್ಬೂರ ಗೌಡನಿಗೆ ರೂಪವಂತೆ ಹೆಂಡತಿಯಿದ್ದರೂ, ಆತ ಸೂಳೆಯ ಸಹವಾಸದಿಂದ ಹಿರಿಯೂರು ಪಟ್ಟಣ ಸೇರಿದ್ದ, ಮುಂಗಾರು ಮಳೆ ಬಿದ್ದಿತ್ತು, ಹೊನ್ನಾರು ಪೂಜೆ ನಡೆಸಿ, ಏಳು ಜನ ತಮ್ಮಂದಿರು ಏಳು ಜೊತೆ ಎತ್ತುಗಳಿಗೆ ನೇಗಿಲು ಹೊಡಿಕೊಂಡು, ಊರಮುಂದಿನ ಹೊಲದಲ್ಲಿ ಉಳುವುದಕ್ಕೆ ಪ್ರಾರಂಭಮಾಡಿ, ನೇಗಿಲು ಒಂದೆರಡು ಸುತ್ತು ಬರುತ್ತದೆ. ಅದರಲ್ಲಿ ಮುಂದಿನ ಸಾಲುಗಳ ಎತ್ತುಗಳಾದ ದೊಡ್ಡ ಬೆಳ್ಳಿ–ಚಿಕ್ಕಬೆಳ್ಳಿ ಎಂಬ ಎತ್ತುಗಳ ನೇಗಿಲಿಗೆ ನೆಲದಲ್ಲಿದದ ಉಕ್ಕಿನ ಪಾಳು ಸಿಕ್ಕಿಹಾಕಿಕೊಳ್ಳುತ್ತದೆ. ಹೀಗೆ ಉಕ್ಕಿನ ಪಾಳು ಸಿಕ್ಕಿಹಾಕಿಕೊಂಡ ಕೂಡಲೇ, ಏಳು ಜನ ತಮ್ಮಂದಿರುಗಳು, ಏಳು ಜನ ಮಡದಿಯರು ಹಾಗೂ ಏಳು ಜೊತೆ ಎತ್ತುಗಳು ಸಾಯುತ್ತವೆ, ಸುದ್ದಿ ತಿಳಿದು ಬಂದು ನೋಡಿದ ಬಬ್ಬೂರ ಗೌಡನ ಹೆಂಡತಿಯೂ ಸಾಯುತ್ತಾಳೆ. ಗೌಡರ ಕುಟುಂಬದ ಪರಿವಾರದವರೆಲ್ಲರೂ ಸತ್ತು ಬಿದ್ದಿರುವ ಸುದ್ದಿ ಸೂಳೆಯ ಮನೆಯಲ್ಲಿರುವ ಗೌಡನಿಗೆ ತಿಳಿದು, ಗಾಭರಿಗೊಂಡು ಓಡೋಡಿ ಬರುತ್ತಾನೆ. ಎಲ್ಲರೂ ಸತ್ತು ಶವವಾಗಿರುವುದನ್ನು ಕಂಡು ಗೌಡ ತೀವ್ರ ದುಖಃ ಪಡುತ್ತಾನೆ. ಆ ಸಂದರ್ಭಕ್ಕೆ ಆಶರೀರ ವಾಣಿಯಾಗುತ್ತದೆ ಭೂಮಿಯಲ್ಲಿ ಉಕ್ಕಿನ ಪಾಳಿನ ರೂಪದಲ್ಲಿ ಶ್ರೀ ಹರಿ ಇದ್ದು. ಅದನ್ನು ತೆಗೆಸಿ ಗರುಡಗಂಬ ಮಾಡಿಸಿದರೆ ಎಲ್ಲರೂ ಬದುಕುತ್ತಾರೆ"ಎಂದು ಹೇಳುತ್ತದೆ, ಇದರಿಂದ ತೀವ್ರ ವ್ಯಾಕುಲಗೊಂಡ ಗೌಡ ಆ ಅಶರೀರ ವಾಣಿಯನ್ನು ತಿರಸ್ಕರಿಸಿ, ಸತ್ತ ಎಲ್ಲಾ ಮಡದಿಯರೂ ಸೇರಿದಂತೆ ಏಳು ಜನ ತಮ್ಮಂದಿರುಗಳನ್ನು ಶವ ಸಂಸ್ಕಾರ ಮಾಡಲು ಸಿದ್ದತೆಮಾಡಿಕೊಮಡು, ಸಮಾದಿಗೆ ಗುಂಡಿ ತೆಗೆಸಲು ಸ್ಮಶಾನಕ್ಕೆ

ಕಳುಹಿಸುತ್ತಾನೆ. ಏನು ಮಾಡಿದರೂ ಗುಂಡಿ ಒಂದು ಅಂಗಲವು ಇಳಿಯುವುದಿಲ್ಲ ಗುಂಡಿ ತೆಗೆಯಲು ಹೋಗಿದ್ದವರೆಲ್ಲಾ ಸಾಯುತ್ತಾರೆ, ಆಗ ಬಬ್ಬೂರ ಗೌಡನಿಗೆ ದಿಗಿಲಾಗುತ್ತದೆ. ಆಶರೀರವಾಣಿಯ ಕಡೆ ಗಮನ ಹೋಗುತ್ತದೆ ಅನಂತರ ಗೌಡ ಶಾಸ್ತ್ರ ಕೇಳಲು ಕೋರವಂಜಿಯ ಬಳಿ ಹೋಗಿ ಕಣಿ ಕೇಳುತ್ತಾನೆ. ಆಗ ಕೊರವಂಜಿ " ನಿನ್ನ ಒಂದು ಹಿಡಿ ಹೊನ್ನು ತೆಗೆದುಕೊಂಡು ಹೋಗಿ ಹಿರಿಯೂರು ಪಟ್ಟಣದಿಂದ ಬಂದು ಹಿಡಿ ಮಣ್ಣನ್ನು ತಂದು ಇವರಿಗೆ ಮುಟ್ಟಿಸಿದರೆ ಸತ್ತವರೆಲ್ಲರೂ ಬದುಕುತ್ತಾರೆ. ಮುಂದೆ ಭೂಮಿಯಲ್ಲಿರುವ ಉಕ್ಕಿನ ಪಾಳಿನಿಂದ ಗರುಡ ಗಂಬ ಮಾಡಿಸಿ ಪ್ರತಿಷ್ಠಾಪಿಸಬೇಕು ಎಂದು ಕಣಿ ಹೇಳುತ್ತದೆ ಅದರಂತೆ ಒಂದು ಹಿಡಿ ಹೊನ್ನು ಕೊಟ್ಟು, ಮಣ್ಣು ತಂದು ಇವರಿಗೆಲ್ಲಾ ಮುಟ್ಟಿಸಿದಾಗ ಸತ್ತವರೆಲ್ಲಾ ಬದುಕುತ್ತಾರೆ. ಈಗ ಉಕ್ಕಿನ ಪಾಳಿನಿಂದ ಗರುಡಗಂಬ ಮಾಡಿಸುವುದು ಬಬ್ಬೂರು ಗೌಡನಿಗೆ ಸವಾಲಾಗುತ್ತದೆ. ಹತ್ತಾರು ಕಡೆ ಪ್ರಯತ್ನ ಮಾಡುತ್ತಾನೆ, ಕೊನೆಗೆ ಕಮ್ಮಾರ ಹನುಮಂತ ಗರುಡಗಂಬ ಮಾಡಲು ಒಪ್ಪಿಕೊಳ್ಳುತ್ತಾನೆ.

ಬಬ್ಬೂರು ಗೌಡ ಬಂದಾಗೆಲ್ಲಾ ಮಾಡಿಲ್ಲ. ಆಗ ಬನ್ನಿ, ಈಗ ಬನ್ನಿ ಎಂದು ಕಮ್ಮಾರ ಸತಾಯಿಸುತ್ತಿರುತ್ತಾನೆ. ಈ ಕಾರಣಕ್ಕೆ ದೇವರು ಅವನಿಗೆ ಹಲವು ವಿದದ ಶಿಕ್ಷೆ ಕೊಟ್ಟಿರುತ್ತದೆ, ಕಡೆಗೆ ಕಮ್ಮಾರ ಹನುಮಂತನ ಹೆಂಡತಿ ಮಕ್ಕಳು ಸಾಯುತ್ತಾರೆ ಸ್ವಾಮಿ ದೊಡ್ಡ ಕಪ್ಪೆಯ ರೂಪದಲ್ಲಿ ಬಂದು ಕಮ್ಮಾರ ಹನುಮಂತನ ಹೆಂಡತಿ, ಮಕ್ಕಳ ಸಾವಿಗೆ ಕಾರಣವನ್ನು ಹೇಳುತ್ತದೆ. ಜೊತೆಗೆ ಪರಿಶುದ್ದವಾದ ಬೆರಗು ಹಾಕಿಕೊಂಡು, ಬ್ಯಾಟೇಮರದ ಇದ್ದಲಿನಿಂದ ಕೆಂಪಗೆ ಮಾಡಿ ಅದರಲ್ಲೆ ಗರುಡಗಂಬ ಮಾಡಿ, ಅದರಲ್ಲಿ ನೀನು ಕಲಿತಿರುವ ವಿದ್ಯೆಗಳನ್ನು ಬರೆಯಬೇಕು ಎಂದು ಹೇಳುತ್ತದೆ. ಆಗ ಕಮ್ಮಾರ ಹನುಮಂತ ಭಯಬೀತನಾಗಿ ಹಾಗೆಯೇ ಮಾಡುತ್ತಾನೆ ಹೊಸದಾಗಿ ತಯಾರಾದ ಗರುಡ ಗಂಬಕ್ಕೆ ಮೊದಲು ಜಲದಿ (ಪುಣ್ಯವಂದನೆ) ಯಾಗಬೇಕೆಂದು ಕೊರವಂಜಿ ಗೌಡನಿಗೆ ಹೇಳುತ್ತಾಳೆ. ಆಗ ಕೆರೆಯ ಮುಂದೆ ಗುಡಾರ ಹೊಡೆಸಿ, ಮೊದಲು ಕಮ್ಮಾರ ಹನುಮಂತನಿಂದ ಪೂಜೆ ಮಾಡಿಸು ಎಂದಾಗ ಬಬ್ಬೂರ ಗೌಡ ಸಡಗರದಿಂದ ಜಲದಿ ಪೂಜೆ ಮಾಡಿಸುತ್ತಾನೆ ಪೂಜೆ ಮುಗಿದ ತಕ್ಷಣ ಕಮ್ಮಾರ ಹನುಮಂತನಿಗೆ ಕಂಬದ ರಾಯ ಉಕ್ಕಿನ ಉರಿಯ ಬಾಣವನ್ನು ಬಿಟ್ಟು ಮೊದಲ ಬಲಿ ತೆಗೆದುಕೊಳ್ಳುತ್ತಾನೆ.

ಜಲದಿಶಾಸ್ತ್ರ ಮುಗಿದ ಮೇಲೆ ಬಬ್ಬೂರೆಗೌಡ ದೇವರನ್ನು ಎತ್ತಕೊಂಡು ಬಬ್ಬೂರು ಕೆರೆಯ ಏರಿಯ ಮೇಲಿನ "ಜಲದೃಷ್ಟಿ" ಮರದ ಬುಡದಲ್ಲಿ ಕರಿಯ ಕಂಬಳಿ ಹಾಸಿಗದ್ದಿಗೆ ಮಾಡುತ್ತಾನೆ. ನಂತರ ದೇವರು ಆ ಮರದಲ್ಲಿ ಲೀನವಾಯಿತೆಂದು ಕಾವ್ಯ ಹೇಳುತ್ತದೆ, ಮಾಗೋಡು ರಂಗನಾಥನ ಕಾವ್ಯದಲ್ಲಿ ಪ್ರಕಟವಾಗುವ ಪ್ರಮುಖ ಪಾತ್ರವೇ "ದಾಸರ ಚೆನ್ನ" ದಾಸರ ಚೆನ್ನಪ್ಪ ಕರೆಡೇರ ಗೊಲ್ಲರ ಹುಡುಗ ಏಳು ಜನ ಅಣ್ಣ ತಮ್ಮಂದಿರಲ್ಲಿ ಮೊದಲನೇಯವನೇ ಈತ ಮನೆಯಲ್ಲಿನ ಕುಟುಂಬ ಕಲಹದಿಂದ ಹೊರ

ಬಂದು ಈತ ಅಲೆಮಾರಿಯಾಗಿ ದಾರಿಯಲ್ಲಿ ಬರುವಾಗ್ಗೆ ದೇವರೇ ಈತನನ್ನು ಮಾತನಾಡಿಸುತ್ತಾನೆ. ಮೊದಲಿಗೆ ಹೋಗಲು ಹೆದರುತ್ತಾನೆ. ದೆವ್ವ ಭೂತ ಚೇಷ್ಟೆ ಇರಬೇಕೆಂದು ಬಾವಿಸುತ್ತಾ ಮುಂದೆ ಹೋಗುತ್ತಾನೆ. ಕೊನೆಗೆ ಕಂಬದರಾಯನನ್ನು ಮಾತನಾಡಿಸಿ, ತನಗೆ ಕೇಡು ಬಗೆಯುವುದಿಲ್ಲ ಎಂದು ಬರವಸೆ ನೀಡಿದಾಗ, ಕಂಬದರಾಯನ ದಾಸನಾಗಿ, ಸಖನಾಗಿ, ಮಗನಾಗಿ ರೂಪಗೊಳ್ಳುತ್ತಾನೆ. ಕೊನೆಗೆ ಮೇದರ ಹಟ್ಟಿಯ ಗುರುಪಾತಮ್ಮ ಎಂಬ ಹೆಳವ ಹುಡುಗಿಯೊಂದಿಗೆ ಮದುವೆಯೂ ಆಗುತ್ತದೆ ದಾಸರ ಚೆನ್ನಪ್ಪ ಮದುವೆಯಾದ ಮೇಲೆ ಕಂಬದರಾಯನ ಅಪ್ಪಣೆಯಂತೆ ದೇವರನ್ನು ಹೊತ್ತುಕೊಂಡು ಇಂದಿನ ಶಿರಾದ ಮೇಲು ಕುಂಟೆ ಏಣಿಗೆ ಬಂದು ನೆಲಸುತ್ತಾನೆ.

ಕೊನೆಗೆ ಸಿರಾ ಪಟ್ಟಣದ ಮೇಲು ಕುಂಟೆ ಏಣಿನಲ್ಲಿ ಪವಾಡ ಸೃಷ್ಟಿಸಿದ ಮೇಲೆ ಕಂಬದರಾಯ ಇಲ್ಲಿ ಇರಲಾರೆ ಮುಂದಕ್ಕೆ ಹೋಗಬೇಕೆಂದು ಸೂಚಿಸುತ್ತದೆ ಅಲ್ಲಿಂದ ಹೊರಟು ಇಂದಿನ ಮಾಗೋಡು ಸಮೀಪ ಶಿಳ್ಳೆಕ್ಯಾತರ ಬಂಡೆ ಬಳಿ ಬಂದು, ಅಲ್ಲಿಂದ ಶಿಳ್ಳೆಕ್ಯಾತರನ್ನು ಜಾಗ ಬಿಟ್ಟು ಹೋಗುವಂತೆ ಮಾಡಿ, ಗಿಡ ಮರಗಳ ಪೊದರೆಯಲ್ಲಿ ಕಂಬದರಾಯ ನೆಲಸುತ್ತಾನೆ. ಕೊನೆಗೆ ದಾಸರ ಚನ್ನಪ್ಪ ಮೊದಲಾದ ಪರಿವಾರದವರು ಕಂಬದರಾಯನಿಗೆ ಸ್ವಾಮಿ ನಿಮ್ಮ ಜೊತೆ ತಿರುಗಿ ತಿರುಗಿ ಸಾಕಾಯಿತು ಎಲ್ಲಿಯಾದರೂ ಸ್ಥಿರವಾಗಿ ನೆಲಸು, ನಿನ್ನ ಸೇವೆ ಮಾಡಲು ಸದಾ ಸಿದ್ದರಿದ್ದೇವೆ ಎಂದು ತಿಳಿಸಿದರು, ಆಗ **"ಕಂಬದ ರಂಗ"** ಮೂಡಲ ಮುಖವಾಗಿ ಮಾಗೊಡಿನ ಹೊರವಲಯದಲ್ಲಿ ನೆಲಗೊಂಡನು ಎಂದು ಕಾವ್ಯದಲ್ಲಿ ತಿಳಿಸಲಾಗುತ್ತದೆ.

ಪ್ರಕೃತಿಯ ಆರಾಧನೆಯಲ್ಲಿ ಮರಗಿಡ, ಕಲ್ಲು, ಆಯುದ, ನೀರು, ಬೆಂಕಿಗಳೇ ಆರಾದನೆಯೇ, ರೂಪವಾಗಿ ಶ್ರೀ ಹರಿಯು (ವಿಷ್ಣು)ಕಂಬದ ರೂಪದಲ್ಲಿ ಭೂ ಲೋಕದಲ್ಲಿ ಅವತರಿಸಿದ್ದಾನೆ ಎನ್ನುವುದೇ ಜನಪದರ ಬಲವಾದ ನಂಬಿಕೆ. ಕಾಡುಗೊಲ್ಲರ ಇತರೆ ಕಾವ್ಯಗಳಂತೆ ಕಂಬದ ರಂಗನಕಥೆಯು ಕಾವ್ಯದ ರೂಪದಲ್ಲಿದ್ದು, ಗೊಲ್ಲ ಜನಾಂಗದ, ನಂಬಿಕೆ ಹಾಗೂ ಸಂಸ್ಕೃತಿಗಳನ್ನು ಅಚ್ಚುಕಟ್ಟಾಗಿ ಬಿಂಬಿಸುವ ನಡಾವಳಿಗಳು ಶೈವ ಧರ್ಮದ ಹಿನ್ನೆಲೆಯನ್ನು, ಈ ಹಿನ್ನೆಲೆಯಲ್ಲಿ ಕಂಬದ ರಂಗನಾಥನ ಸನ್ನಿದಿಯು ಕಾಡುಗೊಲ್ಲರ ಆರಾದ್ಯ ದೈವವಾಗಿ ಪುಣ್ಯ ಕ್ಷೇತ್ರವಾಗಿ ಪರಿಣಮಿಸಿದೆ, ಈಗ ಸ್ವಾಮಿಯ ಸನ್ನಿದಿಯಲ್ಲಿ ಭವ್ಯವಾದ ದೇವಸ್ಥಾನ ಕಟ್ಟಿಸಿ, ಪ್ರತಿ ವರ್ಷ ಜಾತ್ರೆಯ ಸಮಯದಲ್ಲಿ ನಡೆಯುವ ಕಲ್ಲುಗಾಲಿ ಹೂವಿನ ಜಾತ್ರಾ ಮಹೋತ್ಸವವು ಭಕ್ತಿ ಬಾವದ ಸಂಕೇತವಾಗಿ ಈ ಪುಣ್ಯ ಕ್ಷೇತ್ರ ಧಾರ್ಮಿಕ ಬಾವನೆಗಳಿಂದ ವಿಶ್ವ ಪ್ರಸಿದ್ದಿಯಾಗಿದೆ.

**ಜಾತ್ರಾ ಮಹೋತ್ಸವ:**

ಪ್ರತಿವರ್ಷ ಮಾಗೋಡು ಕಂಬದ ರಂಗನಾಥಸ್ವಾಮಿ ಜಾತ್ರಾ ಮಹೋತ್ಸವವು ಮಾರ್ಗಶಿರ ಮಾಸದ ಶುದ್ದ ಪೂರ್ಣಿಮ ಮೊದಲ ಅಮಾವಾಸ್ಯೆಯ ದಿನದಿಂದ ಮೊದಲಗೊಂಡು ಸ್ವಾಮಿಗೆ ಜಲದಿ, ಗಂಗಾಸ್ನಾನಮಡಿತೇರು, ಗರುಡೋತ್ಸವ, ಹೂವಿನ ರಥೋತ್ಸವ, ಮಕ್ಕಳ ಹೂವಿನ ತುಲಾಬಾರ, ಆಂಜನೇಯನ ಉತ್ಸವ, ಹರಕೆಯ ಉಂಡೆ-ಮಂಡೆ ಸೇವೆ, ಜಾಡಿ ಲೆಕ್ಕಾಚಾರ, ಮರುಪೂಜೆ, ಜಾಡಿ ಇಳಿಸುವುದು ಇನ್ನೂ ಮುಂತಾದ ಧಾರ್ಮಿಕ ಕಾರ್ಯಕ್ರಮಗಳು 8 ದಿವಸಗಳ ಕಾಲ ಅತಿ ವೈಭವದಿಂದ ನಡೆಯುತ್ತವೆ, ಇದು ನಮ್ಮ ರಾಜ್ಯದ ಅತಿ ದೊಡ್ಡ ಹೂವಿನ ರಥೋತ್ಸವ ಎಂಬ ಹೆಗ್ಗಳಿಕೆಯಿಂದ ಲಕ್ಷಾಂತರ ಜನ ಭಕ್ತರು ನಮ್ಮ ರಾಜ್ಯವಲ್ಲದೆ ಆಂದ್ರ, ತಮಿಳುನಾಡು ರಾಜ್ಯಗಳಿಂದಲೂ ಆಗಮಿಸಿ, ಈ ರಂಗನಾಥ ಸ್ವಾಮಿಯ ಬೃಹದಾಕಾರದ ರಥಕ್ಕೆ ತಮ್ಮ ಶಕ್ತಾನುಸಾರ ಹೂವನ್ನು ಸಮರ್ಪಿಸಿ ಹರಕೆಯನ್ನು ತೀರಿಸಿ ಸಂರ್ಪಿತರಾಗುತ್ತಾರೆ.

ಈ ಜಾತ್ರೆಯಲ್ಲಿ ಕಂಬದ ರಂಗನಾಥಸ್ವಾಮಿ ಭಕ್ತರಾದ ಕಾಡುಗೊಲ್ಲರು, ಒಕ್ಕಲಿಗರು, ಬ್ರಾಹ್ಮಣರು, ಸಾದರು, ಲಿಂಗಾಯುತರು, ಆದಿಕರ್ನಾಟಕ, ಆದಿ ದ್ರಾವಿಡ, ಕುರುಬರು, ಮೇದರು, ದರ್ಜಿಗರು, ಬೇಡರು ಎಲ್ಲಾ ಜಾತಿಯ ಜನರು ಯಾವುದೇ ಬೇದವಿಲ್ಲದೆ ಒಂದೇ ಕುಟುಂಬದವರಂತೆ ಹರಕೆ, ಪೂಜೆ, ವ್ರತಗಳನ್ನು ಪೂರೈಸುತ್ತಾರೆ ಮಗೋಡಪ್ಪ, ಕಂಬದಪ್ಪ, ಕಂಬದರಂಗ, ಬಬ್ಬೂರರಂಗ, ಕಂದರಾಯ, ರಂಗನಾಥ ಹೀಗೆ ಭಕ್ತರು ಭಾವಾತಿರೇಖಗಳಿಂದ ಕರೆಯಲ್ಪಡುವ ರಂಗನಾಥನಿಗೆ ತುಮಕೂರು, ಬೆಂಗಳೂರು, ಕೋಲಾರ, ಚಿತ್ರದುರ್ಗ ಜಿಲ್ಲೆಗಳಲ್ಲದೆ ಆಂದ್ರದ ಅನಂತಪುರ, ಅಗಳಿ, ರತ್ನಗಿರಿ, ತಮಿಳುನಾಡಿನ ಕೊಯಂಬತ್ತೂರು, ಸೇಲಂ, ಹೊಸೂರು ಹಾಗೂ ಹೊರ ರಾಜ್ಯಗಳ ಕಂಬದ ರಂಗನ ಭಕ್ತರು ಪ್ರತಿವರ್ಷ ಜಾತ್ರೆ ಸಮಯದಲ್ಲಿ ತಪ್ಪದೆ ಬಂದು ಸ್ವಾಮಿಯ ಸನ್ನಿದಿಯಲ್ಲಿ ಕೊಪ್ಪಲುಗಳನ್ನು ಹಾಕಿ, ಜಾತ್ರೆಗೆ ಪರ ಊರುಗಳಿಂದ ಬಂದ ಭಕ್ತರಿಗೆ ಅನ್ನ ಸಂತರ್ಪಣೆ ಮಾಡಿ ಹರಕೆಯನ್ನು ತೀರಿಸುತ್ತಾರೆ.

ಅದೇ ರೀತಿ ಹರಕೆ ಮಾಡಿಕೊಂಡಿರುವ ಭಕ್ತರು ಹೊಸಮನೆ ಗೃಹಪ್ರವೇಶ, ಮದುವೆ ಮುಂಜಿ ಮುಂತಾದ ಶುಭ ಕಾರ್ಯಗಳಿಗೆ ಶ್ರೀ ಕಂಬದ ರಂಗನಾಥಸ್ವಾಮಿಯ ಉತ್ಸವ ಮೂರ್ತಿಯನ್ನು ತಮ್ಮ ಊರುಗಳಿಗೆ ಕರೆಸಿಕೊಂಡು ಮೆರವಣಿಗೆ ಮಾಡಿಸಿ, ರಾತ್ರಿಯೆಲ್ಲಾ ಕಂಬದ ರಂಗನಾಥಮ ಮಹಿಮೆಯನ್ನು ಕಾವ್ಯದ ರೂಪದಲ್ಲಿ ವಾಚಿಸುವುದು ವಾಡಿಕೆಯಾಗಿದೆ. ಈ ರೀತಿ ಕಂಬದ ರಂಗನ ಮಹಿಮೆಯ ಕಥಾ ಶ್ರವಣವು ಪರಮ ಪುಣ್ಯವೆಂದು ಭಯ-ಭಕ್ತಿಯಿಂದ, ಜಾತಿ-ಸೂತಕವಿಲ್ಲದೆ ಎಲ್ಲಾ ಜನಾಂಗದವರೂ ಬಾಗವಹಿಸಿ ಕಂಬದ ರಂಗನಾಥಸ್ವಾಮಿಯ ಕೃಪೆಗೆ ಪಾತ್ರರಾಗುತ್ತಾರೆ.



॥ ಶ್ರೀ ಬಂಡೀರಂಗನಾಥಸ್ವಾಮಿ ಪ್ರಸನ್ನ ॥

[illegible]

# ಶ್ರೀ ಬಂಡೀರಂಗನಾಥಸ್ವಾಮಿಯವರ ಬ್ರಹ್ಮರಥೋತ್ಸವ ಆಹ್ವಾನ ಪತ್ರಿಕೆ

## ತಾವರೇಕೆರೆ, ಶಿರಾ ತಾಲ್ಲೂಕು.

[illegible] ತಾಲ್ಲೂಕು ತಾವರೇಕೆರೆ ಕ್ಷೇತ್ರದಲ್ಲಿ ನೆಲೆಸಿರುವ ಶ್ರೀ ಬಂಡೀರಂಗನಾಥಸ್ವಾಮಿಯವರಿಗೆ ಶ್ರೀ ದುರ್ಮುಖಿನಾಮ ಸಂವತ್ಸರದ ಮಾಘ ಶುದ್ಧ [illegible] ಅಂಕುರಾರ್ಪಣೆ ಮೊದಲುಗೊಂಡು ಧ್ವಜಾರೋಹಣೋತ್ಸವ, ಕಲ್ಯಾಣೋತ್ಸವ, ಬ್ರಹ್ಮರಥೋತ್ಸವ, ವಸಂತೋತ್ಸವ ಮತ್ತು ಶಯನೋತ್ಸವ ಇತ್ಯಾದಿ ಸೇವಾ ಕಾರ್ಯಕ್ರಮಗಳು ಜಗತ್ಕಲ್ಯಾಣಾರ್ಥವಾಗಿ ದಿನಾಂಕ 28-01-2017 ರಿಂದ 9-02-2017ರ ವರೆಗೆ ನಡೆಯುತ್ತವೆ.

### ಸೇವಾಕಾರ್ಯಕ್ರಮದ ವಿವರಗಳು

| | | | | |
|---|---|---|---|---|
| [illegible] | [illegible] | [illegible] | ಅಂಕುರಾರ್ಪಣೋತ್ಸವ | ಒಡ್ಡಿನಕೊಪ್ಪದ ಶ್ರೀ ರಂಗಪ್ಪನವರ ಮಕ್ಕಳು, ಶ್ರೀ ರುದ್ರಪ್ಪನವರಿಂದ ಸೇವೆ. |
| [illegible] | [illegible] | ಬೆಳಿಗ್ಗೆ<br>ಸಂಜೆ | ಧ್ವಜಾರೋಹಣೋತ್ಸವ<br>ಕಳಶ ಸ್ಥಾಪನೆ ಹೋಮ ಉತ್ಸವ | ಬಿ. ಹರಿಪ್ರಸಾದ್ ಮತ್ತು ಬಿ. ವಿಷ್ಣು ಪ್ರಸಾದ್ ಭಾರದ್ವಾಜ್‌ರವರ ಸೇವೆ.<br>ತಾವರೇಕೆರೆ ಜಿ. ರಂಗಯ್ಯನವರ ಮಕ್ಕಳು ಬಾಲಕೃಷ್ಣರವರ ಸೇವೆ. |
| [illegible] | [illegible] | ಬೆಳಿಗ್ಗೆ<br>ಸಂಜೆ | ಬಲಿಹರಣ, ನಿತ್ಯಹೋಮ, ಉತ್ಸವ<br>ಬಲಿಹರಣ, ನಿತ್ಯಹೋಮ, ಉತ್ಸವ | ಒಡ್ಡಿನಕೊಪ್ಪದ [illegible] ರಂಗಪ್ಪನವರ ಮಕ್ಕಳು, ಶಿವಮೊಗ್ಗ ಇವರ ಸೇವೆ.<br>ದಿವಂಗತ [illegible] ಶ್ರೀಮತಿ [illegible] ಮಕ್ಕಳು, [illegible] ಮತ್ತು ಕುಟುಂಬದವರಿಂದ ಸೇವೆ |
| [illegible] | ಮಂಗಳವಾರ | ಸಂಜೆ<br>ಬೆಳಿಗ್ಗೆ | ಬಲಿಹರಣ, ನಿತ್ಯಹೋಮ, ಉತ್ಸವ<br>ಬಲಿಹರಣ, ನಿತ್ಯಹೋಮ, ಉತ್ಸವ | [illegible] ಮಕ್ಕಳಿಂದ ಸೇವೆ, ಒಡ್ಡಿನಕೊಪ್ಪದ [illegible]<br>ಶ್ರೀ [illegible] ಮತ್ತು ಮಕ್ಕಳು, [illegible] ಮತ್ತು ಮಕ್ಕಳು. ಗೌಡನಹಳ್ಳಿ. ಇವರಿಂದ ಸೇವೆ. |
| [illegible]-2017 | [illegible] | ಬೆಳಿಗ್ಗೆ<br>ಸಂಜೆ<br>ರಾತ್ರಿ | ಅನ್ನಸಂತರ್ಪಣೆ<br>ಕಲ್ಯಾಣೋತ್ಸವ<br>ಗರುಡೋತ್ಸವ | ತಾವರೇಕೆರೆ [illegible] ಶ್ರೀ ರಾಮಕೃಷ್ಣೇಗೌಡರವರ ಮಕ್ಕಳು ಎಸ್.ಆರ್. ಗೌಡ ಮತ್ತು ಆರ್. ರಂಗನಾಥ್‌ರವರ ಕುಟುಂಬದವರಿಂದ ಸೇವೆ.<br>ಬೆಂಗಳೂರು ವಿಜಯನಗರ [illegible] ಶ್ರೀ ಟಿ. ಭೂತಯ್ಯನವರಿಂದ ಸೇವೆ. |
| [illegible] | [illegible] | ಬೆಳಿಗ್ಗೆ<br>[illegible] | ನಿತ್ಯಹೋಮ, ಉತ್ಸವ<br>ಗಜೇಂದ್ರಮೋಕ್ಷ | ತಾವರೇಕೆರೆ ಶ್ರೀ [illegible] ರಂಗಪ್ಪನವರ ಮಕ್ಕಳು. [illegible] ಮತ್ತು ಮಕ್ಕಳಿಂದ ಸೇವೆ.<br>[illegible] ದೇವಾಂಗದ [illegible] ವಂಶಸ್ಥರು. ಶ್ರೀ ಟಿ.ಆರ್. [illegible]<br>ದೇವಾಂಗದ [illegible] ರಂಗಪ್ಪನವರ ಮಕ್ಕಳು. |
| 03-02-2017 | ಶುಕ್ರವಾರ | ಬೆಳಿಗ್ಗೆ<br><br>ಮಧ್ಯಾಹ್ನ | ರಥಾಂಗಹೋಮ<br>**ಬ್ರಹ್ಮರಥೋತ್ಸವ**<br>ಅನ್ನಸಂತರ್ಪಣೆ<br>ಪ್ರಸಾದ ವಿನಿಯೋಗ | [illegible] |
| [illegible] | ರವಿವಾರ | [illegible]<br>ಸಂಜೆ | ಪೂಜೆ ಪ್ರಸಾದವಿನಿಯೋಗ ಸಂತರ್ಪಣೆ<br>[illegible] | [illegible] ಮಕ್ಕಳಿಂದ [illegible] ಸಂತರ್ಪಣೆ. [illegible]<br>[illegible] ಶ್ರೀ ಮುತ್ತಪ್ಪನವರ ಮಕ್ಕಳಿಂದ ಸೇವೆ. |
| [illegible]-2017 | ಭಾನುವಾರ | ಬೆಳಿಗ್ಗೆ<br><br>ಮಧ್ಯಾಹ್ನ<br>ಸಂಜೆ | ಪೂಜೆ,ಪ್ರಸಾದವಿನಿಯೋಗ ಸಂತರ್ಪಣೆ<br>ಅವಭೃತಸ್ನಾನೋತ್ಸವ,<br>ವಸಂತಸೇವೆ<br>ಧ್ವಜಾವರೋಹಣೋತ್ಸವ | [illegible]<br>ಮಕ್ಕಳು ರಾಘವೇಂದ್ರ, [illegible] ರವರಿಂದ ಸೇವೆ, ತುಮಕೂರು. ಇವರಿಂದ ಸೇವೆ.<br>ದಿವಂಗತ ಟಿ.ಸಿ. ರಂಗನಾಥ್‌ರವರ ತೋಟದಲ್ಲಿ ಟಿ.ಸಿ. ದೇವರಾಜ್‌ರವರಿಂದ ವಸಂತಸೇವೆ.<br>ಒಡ್ಡಿನಕೊಪ್ಪದ ಶ್ರೀಮತಿ ಗೌರಮ್ಮ ಶ್ರೀ ಮೂರ್ತಪ್ಪನವರ ಮಕ್ಕಳು, ಕಲ್ಲಿಹಾಳ್, ಭದ್ರಾವತಿ. ಇವರಿಂದ ಸೇವೆ. |
| [illegible] | ಸೋಮವಾರ | ಬೆಳಿಗ್ಗೆ<br>ಸಂಜೆ | ಪೂಜೆ<br>ಶಯನೋತ್ಸವ | [illegible] ಮತ್ತು ಕುಟುಂಬದವರ ಸೇವೆ. [illegible]<br>[illegible] ಮತ್ತು [illegible]. ಶ್ರೀ ಕೆ.ಎಸ್. [illegible]<br>[illegible] ಮತ್ತು ಶ್ರೀ ಕೆ.ಆರ್. ರಾಜು ಮತ್ತು ಮಕ್ಕಳಿಂದ ಸೇವೆ. |
| [illegible]-2017 | ಮಂಗಳವಾರ | ಬೆಳಿಗ್ಗೆ | ಪೂಜೆ, ಪ್ರಸಾದ ವಿನಿಯೋಗ | [illegible] ಗಿರಿಯಪ್ಪನವರ ಸೇವೆ.<br>[illegible] ಆರ್. ತಿಮ್ಮಪ್ಪನವರು ಮತ್ತು ಮಕ್ಕಳಿಂದ ಸೇವೆ. |
| [illegible] | ಬುಧವಾರ | ಸಂಜೆ | ಹೂವಿನ ಮಂಟಪೋತ್ಸವ | [illegible] ಮತ್ತು<br>ಇಂಜಿನಿಯರ್ ಶಂಕರಾಚಾರ್‌ರವರ ಸೇವೆ. |
| [illegible] | [illegible] | ಬೆಳಿಗ್ಗೆ | ಪೂಜೆ, ಪ್ರಸಾದ ವಿನಿಯೋಗ | ಶ್ರೀ [illegible] ಮತ್ತು [illegible] ಮಕ್ಕಳು.<br>[illegible] ಸೇವೆ |

## 7. ತಾವರೆಕೆರೆ ಶ್ರೀ ಬಂಡಿರಂಗನಾಥಸ್ವಾಮಿ ಜಾತ್ರಾ ಮಹೋತ್ಸವ

**ಪೀಠಿಕೆ:**

ತಾವರೆಕೆರೆ ಗ್ರಾಮವು ಸಿರಾ ಹಿರಿಯೂರು 4ನೇ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಿರಾದಿಂದ 12 ಕಿ.ಮೀ ನಮ್ಮೂರು ಚಿಕ್ಕನಹಳ್ಳಿಯಿಂದ 22 ಕಿ.ಮೀ ಅಂತರದಲ್ಲಿದೆ. ಇದು ಕಂದಾಯ ಗ್ರಾಮವಾಗಿರುತ್ತದೆ, ಇಲ್ಲಿನ ಕೆರೆಯಲ್ಲಿ ತಾವರೆ ಹೂವು ಬೆಳೆಯುತ್ತಿದ್ದರಿಂದ ಗ್ರಾಮಕ್ಕೆ **"ತಾವರೆಕೆರೆ"** ಎಂದು ಹೆಸರು ಬಂದಿತೆಂದು ಗ್ರಾಮದ ಮುಖಂಡರಾದ ಕೃಷ್ಣಪ್ಪನವರು ತಿಳಿಸಿರುತ್ತಾರೆ. ಅಲ್ಲದೆ ಕರ್ನಾಟಕ ಎಫಿಗ್ರಾಪಿಯ ಬುಕ್ಕಾಪಟ್ಟಣ ಶಾಸನದಲ್ಲಿ ತಾವರೆಕೆರೆಯ ಕರೆಯ ಅಂಗಳದಲ್ಲಿ ಈ ಬಾಗದ ಹಳ್ಳಿಗಳ ದನಕರುಗಳು ಚೆನ್ನಾಗಿ ಮೇಯುತ್ತಿದ್ದರಿಂದ **'ತುರುಗೆರೆ'** ಎಂಬ ಹೆಸರಿನಿಂದ ಕರೆಯಲ್ಪಟ್ಟಿತ್ತು. ಎಂಬ ಐತಿಹ್ಯವಿದೆ. ಎಂದು ಗ್ರಾಮದ ರಿ॥ ಸ್ಕೂಲ್ ಮಾಸ್ಟರ್ ಶ್ರೀ ರಂಗಪ್ಪ ತಿಳಿಸಿರುತ್ತಾರೆ.

ಈ ಗ್ರಾಮದಲ್ಲಿ 900 ಮನೆಗಳಿದ್ದು ಸುಮಾರು 4000 ಜನಸಂಖ್ಯೆ ಹೊಂದಿದ್ದು, ಸರ್ಕಾರದವರು ಈ ತಾವರೆಕೆರೆಯನ್ನು ಗ್ರಾಮಪಂಚಾಯ್ತಿ, ತಾಲ್ಲೂಕು ಪಂಚಾಯಿತಿ, ಹಾಗೂ ಜಿಲ್ಲಾ ಪಂಚಾಯಿತಿ ಕ್ಷೇತ್ರವನ್ನಾಗಿ ಮಾರ್ಪಡಿಸಿದ್ದಾರೆ ಈ ಗ್ರಾಮದಲ್ಲಿ ನಾಯಕರು , ಕುಂಚಿಟಿಗರು, ಆದಿ ಕರ್ನಾಟಕ, ಬೆಸ್ತರು, ಮಡಿವಾಳ, ವೈಶ್ಯ, ಮುಸ್ಲಿಂ, ವೀರಶೈವ, ದರ್ಜಿಗರು, ಭಜಂತ್ರಿ, ಕುರುಬ, ಬ್ರಾಹ್ಮಣರು, ತಿಗಳುರು ಹಾಗೂ ಕೊರಚರ ಮನೆಗಳಿವೆ. ಇಲ್ಲಿನ ರೈತರು ಭತ್ತ, ರಾಗಿ, ತೆಂಗು, ಅಡಿಕೆ ಬೆಳೆಯುತ್ತಿದ್ದರು ಹಾಗೂ ಇಲ್ಲಿನ ಪ್ರಗತಿಪರ ರೈತರುಗಳು ಕರಬೂಜ, ಕಲ್ಲಂಗಡಿ, ತರಕಾರಿ ಬೆಳೆಗಳ ಬೀಜೋತ್ಪಾದನೆ ಮಾಡುತ್ತಾ ಆರ್ಥಿಕವಾಗಿ ಮುಂದುವರಿದಿದ್ದಾರೆ.

ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಪ್ರೌಡಶಾಲೆ, ಅಂಬಾಭವಾನಿ, ಪದವಿ ಪೂರ್ವ ಕಾಲೇಜುಗಳು ಜ್ಞಾನಾಂಬಿಕ ಕಾನ್ವೆಂಟ್, ಅಂಚೆಕಛೇರಿ, ಅಂಗನವಾಡಿ ಕೇಂದ್ರ, ಗ್ರಾಮಪಂಚಾಯ್ತಿ ಕಛೇರಿ, ಕೆನರಾ ಬ್ಯಾಂಕ್, ಪೊಲೀಸ್ ಠಾಣೆ, ದೂರವಾಣಿ ವಿನಿಮಯ ಕೇಂದ್ರ, ಪಶುವೈದ್ಯ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಹಾಲು ಉತ್ಪಾದಕರ ಸಹಕಾರಿ ಸಂಘ, ವ್ಯವಸಾಯ ಸೇವಾ ಸಹಕಾರ ಸಂಘ, ಗ್ರಂಥಾಲಯ, ರೈತಸಂಪರ್ಕ

ಕೇಂದ್ರಗಳು ಇರುತ್ತವೆ, ಈಗ ಇಲ್ಲಿನ ವಾಣಿಜ್ಯೋದ್ಯಮಿಗಳು ಆಧುನಿಕ ರೀತಿಯಲ್ಲಿ ಊದುಬತ್ತಿ, ತಯಾರಿಕಾ ಕೇಂದ್ರಗಳನ್ನು ಸ್ಥಾಪಿಸಿ, ಸಾವಿರಾರು ಮಂದಿ ಹೆಣ್ಣು ಮಕ್ಕಳಿಗೆ ಉದ್ಯೋಗ ಒದಗಿಸಿದ್ದಾರೆ ಹಾಗೂ ಇಲ್ಲಿ ತಯಾರಿಸಿದ ಊದುಬತ್ತಿಗೆ ದೇಶ ವಿದೇಶಗಳಲ್ಲಿ ಹೆಚ್ಚಿನ ಬೇಡಿಕೆ ಇದೆ.

ಸಾತಂತ್ರ್ಯ ಹೋರಾಟಗಾರರಾಗಿ ಹಲವಾರು ಬಾರಿ ಸೆರೆವಾಸ ಅನುಭವಿಸಿದ್ದ ದಿವಂಗತ ಟಿ. ತಾರೇಗೌಡರು ಕಾನೂನುಪದವಿ ಕಲಿತು, 1940 ರಿಂದ 1949 ರವರೆವಿಗೆ ಪ್ರಜಾಪ್ರತಿನಿಧಿ ಸಬೆಯ ಸದಸ್ಯರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿ, ಎರಡು ಬಾರಿ ವಿದಾನ ಸಬೆ ಸದಸ್ಯರಾಗಿ, ಈ ಭಾಗದ ಸರ್ವತೋಮುಖ ಅಭಿವೃದ್ದಿಗೆ ನಾಂದಿಹಾಡಿ ಈಗ ಅಮರರಾಗಿದ್ದಾರೆ. ಸಾಹಿತಿ ಹಾಗೂ ಶಿಕ್ಷಕಿಯಾದ ಸಾ.ಸ. ಪುಷ್ಪರವರು ಹಾಗೂ ದನಕರುಗಳಿಗೆ ಔಷದಿ ನೀಡಿ ಜನಪ್ರಿಯರಾಗಿರುವ ಡಾ॥ ಶಿವಣ್ಣನವರು ಇದೇ ಗ್ರಾಮದವರು .

ಈ ಗ್ರಾಮದ ಪ್ರಸಿದ್ದವಾದ ಬಂಡಿರಂಗನಾಥಸ್ವಾಮಿ ಹಾಗೂ ಆಂಜನೇಯ ಸ್ವಾಮಿ ದೇವಸ್ಥಾನಗಳು ಮುಜರಾಯಿ ಇಲಾಖೆಗೆ ಸೇರಿದ್ದು, ಅಲ್ಲದೆ ಈಶ್ವರ, ಮಹಾಕಾಳಿ, ಕೊಲ್ಲಾಪುರದಮ್ಮ, ಲಕ್ಷ್ಮೀ, ಯಲ್ಲಮ್ಮ, ಬಸವಣ್ಣ, ಅಹೋಬಲನರಸಿಂಹಸ್ವಾಮಿ, ಸೊಮೇಶ್ವರ, ಗಿಡ್ಡಸಂದ್ರದ ಬುಡ್ಡಮ್ಮ, ಮಾರಮ್ಮನವರುಗಳ ದೇವಸ್ಥಾನಗಳು ಹಾಗೂ ಮಸೀದಿಗಳು ಇವೆ ಇಲ್ಲಿ ಎಲ್ಲಾ ಜನಾಂಗದವರ ಸಾಂಸ್ಕೃತಿಕ, ಧಾರ್ಮಿಕ ವಿಚಾರಗಳಲ್ಲಿ ಪರಸ್ಪರ ಸಹಕಾರದಿಂದ ಎಲ್ಲರೂ ಸಮಾನವಾಗಿ ಕೂಡಿ ಬದುಕುತ್ತಿದ್ದಾರೆ.

**ಇತಿಹಾಸ**

500 ವರ್ಷಗಳ ಹಿಂದೆ ಯಾಗಟಿ ಮಲ್ಲಯ್ಯ ಎಂಬ ವ್ಯಾಪಾರಿಯು ದಿನಸಿ ಸಾಮಾನುಗಳನ್ನು ಎತ್ತಿನ ಗಾಡಿಗಳಲ್ಲಿ ತುಂಬಿಕೊಂಡು ತಾವರೆಕೆರೆ ಸಮೀಪ ಮೊರಡಿ ಗುಡ್ಡದ ಮೇಲೆ ಕಲ್ಲು ಮಂಟಪಗಳಿದ್ದ ಒಂದು ಹುತ್ತದ ಜಾಗದಲ್ಲಿ ರಾತ್ರಿಯಾದ ಕಾರಣ ಬೀಡು ಬಿಟ್ಟಿದ್ದನು, ಮಾರನೇ ದಿನ ಬೆಳಿಗ್ಗೆ ಎದ್ದು ಮುಂದಿನ ಊರಿಗೆ ಹೋಗಲು

ಎತ್ತುಗಳನ್ನು ಗಾಡಿಗೆ ಹೂಡಿ ಮುಂದಕ್ಕೆ ಹೊರಟನು ಆದರೆ ಎತ್ತುಗಳು ಮುಂದೆ ಹೆಜ್ಜೆ ಇಡದೆ ತಟಸ್ಥವಾಗಿ ನಿಂತು ಬಿಟ್ಟವು. ಆಗ ಆ ಜನರು ಭಯ ಬೀತರಾಗಿ ನಿಂತಿರುವಾಗಿ ಒಂದು ಆಶ್ಚರ್ಯದ ಘಟನೆ ಅವರ ಕಣ್ಣಿಗೆ ಕಾಣಿಸಿತು ಅವರು ಬೀಡು ಬಿಟ್ಟದ್ದ ಸ್ವಲ್ಪ ದೂರದಲ್ಲೆ ಒಂದು ಹಸು ಹುತ್ತದಲ್ಲಿ ಹಾಲು ಕರೆಯುತ್ತಿತ್ತು, ಇದನ್ನು ಕಂಡ ಆ ಜನರು ಹುತ್ತವನ್ನು ಅಗೆದು ನೊಡಿದರು. ಅದರಲ್ಲಿ ಸಾಲಿಗ್ರಾಮ ಸಿಕ್ಕಿತು, ಅದರಿಂದ ಅವರ ಆನಂದ ಭರಿತರಾಗಿ ಮುಂದೆ ಈ ಸಾಲಿಗ್ರಾಮವನ್ನು ಯಾವ ರೀತಿಯಲ್ಲಿ ಪ್ರತಿಸ್ಥಾಪನೆ ಮಾಡಬೇಕೆಂದು ಯೋಚನೆ ಮಾಡುತ್ತಾ ಇದ್ದು ರಾತ್ರಿ ಅದೇ ಜಾಗದಲ್ಲಿ ತಂಗಿದ್ದರು.

ಅದೇ ರಾತ್ರಿ ಆ ವ್ಯಾಪಾರಿಯು ಕನಸಿನಲ್ಲಿ ದೇವರು ಕಾಣಿಸಿಕೊಂಡು, ನಾನು ಬೇರೆಯಲ್ಲ ತಿರುಪತಿ ತಿಮ್ಮಪ್ಪನ ಸಾಲಿಗ್ರಾಮ, ಇಲ್ಲಿ ನನ್ನನ್ನು ಗುಡ್ಡದ ರಂಗನಾಥನೆಂದು ಕರೆಯುತ್ತಾರೆ, ಇಲ್ಲಿಯೇ ಒಂದು ದೇವಸ್ಥಾನವನ್ನು ಕಟ್ಟಿಸಿ ಪೂಜಾದಿ ಸೇವಾಕಾರ್ಯಗಳನ್ನು ಮಾಡಿದರೆ ನಿಮಗೆ ಮಂಗಳವಾಗುವುದು ಎಂದು ಹೇಳಿತಂತೆ ಆದರಂತೆ ಆ ವ್ಯಾಪಾರಿಗಳು ಮತ್ತು ಗ್ರಾಮಸ್ಥರು ಸೇರಿ ಮೊರಡಿ ಗುಡ್ಡದ ಮೇಲೆ ರಂಗನಾಥಸ್ವಾಮಿ ಸಾಲಿಗ್ರಾಮವನ್ನು ಪ್ರತಿಷ್ಠಾಪಿಸಿದರು

ಮುಂದೆ ಮೊರಡಿ ಗುಡ್ಡದ ಮೇಲೆ ಕೆಲವು ಭಕ್ತರು ಪಟೇಲರ ನೆರವಿನಿಮದ ಮೂರು–ನಾಲ್ಕು ಕಲ್ಲು ಮಂಟಪವನ್ನು ಕಟ್ಟಿಸಿದರು ಸ್ವಾಮಿ ಭಕ್ತಳಾದ ತಾವರೆಕೆರೆ ಗ್ರಾಮದ ದಾಸಿ ರಂಗಮ್ಮ ಒಂದು ಸಿಹಿ ನೀರಿನ ಕಲ್ಯಾಣಿಯನ್ನು ಕಟ್ಟಿಸಿದಳು ಇತ್ತೀಚಿನ ದಿನಗಳಲ್ಲಿ ಈ ದೇವಸ್ಥಾನವು ಶಿಥಿಲಗೊಂಡಾಗ ಹಿಂದಿನಪಟೇಲರ ವಂಶಸ್ಥರಾದ ದೊಡ್ಡೆರಂಗೇಗೌಡರು ದೇವಸ್ಥಾನವನ್ನು ಜೀರ್ಣೋದ್ಧಾರಗೊಳಿಸಿ ಕಳಸ ಪ್ರತಿಸ್ಥಾಪನೆ ಮಾಡಿದ್ದರು. ಎಂದು ಊರಿನ ಪಾಟೇಲರಾದ ಚಿಕ್ಕೇಗೌಡರು ತಿಳಿಸಿರುತ್ತಾರೆ. ಹೀಗೆ ಸಣ್ಣ ಗುಡ್ಡದ ಮೇಲೆ ಇರುವ ದೇವರನ್ನು ಗುಡ್ಡದ ರಂಗನಾಥ ಸ್ವಾಮಿ ಅಥವಾ ಮೊರಡಿ ರಂಗನಾಥಸ್ವಾಮಿ ಎಂದು ಹೆಸರಾಗಿ ಪೂಜೆ–ಪುನಸ್ಕಾರಗಳು ನಡೆಯುತ್ತವೆ.

ತಾವರೆಕೆರೆ ಗ್ರಾಮದಲ್ಲಿ ಹಬ್ಬಹರಿದಿನಗಳಲ್ಲಿ ದೇವತಾ ಕಾರ್ಯಗಳನ್ನು ಮಾಡಲು ರಂಗನಾಥ ಸ್ವಾಮಿ ಉತ್ಸವ ಮೂರ್ತಿ, ಇಲ್ಲವಾದ್ದರಿಂದ ಈ ಗ್ರಾಮದ ಪಟೇಲರು, ಊರಿನ ಪ್ರಮುಖರು ಚಿಂತಾಕ್ರಾಂತರಾಗಿ ಸಾಮೂಹಿಕ ಬಜನೆ, ರಾಮೋತ್ಸವ, ಅನ್ನ

ಸಂತರ್ಪಣೆ ಇತ್ಯಾದಿ ಪುಣ್ಯ ಕಾರ್ಯಗಳನ್ನು ಮಾಡತೊಡಗಿದರು. ಹೀಗಿರುವಾಗ ಪಟೇಲ ಚಿಕ್ಕೇಗೌಡರ ಮುತ್ತಾಂತದಿರ ಕನಸಿನಲ್ಲಿ ದೇವರು ಕಾಣಿಸಿಕೊಂಡು ಚಿಂತೆಮಾಡಬೇಡಿ, ನಾನು ಭಕ್ತ ಪರಾಧೀನ, ನಾನು ಭಕ್ತರ ಜೊತೆಯಲ್ಲೇ ಇರುತ್ತೇನೆ, ಆದುದರಿಂದ ನೀವು ತಿರುಪತಿಗೆ ಹೋಗಿ ಗೋವಿಂದರಾಯ ಪಟ್ಟಣದಲ್ಲಿ ಉತ್ತರದಕ್ಷಿಣಾಬಿಮುಖವಾಗಿರುವ ಬೀದಿಯಲ್ಲಿ ಪೂವದಿಕ್ಕಿಗೆ ಬಾಗಿಲಿರುವ ಮೊದನಲೇ ಅಂಗಡಿಯವರ ಕಣಜದಲ್ಲಿ ನನ್ನ ವಿಗ್ರಹವಿದೆ. ನೀವು ಅಂಗಡಿ ಮಾಲಿಕನಿಗೆ ಮೂರು ಹಿಡಿ ಹೊನ್ನು ಕೊಟ್ಟು ನನ್ನನ್ನು ತಂದು ಪೂಜಿಸಿದರೆ ನಿಮಗೆ ಶುಭವಾಗುವುದೆಂದು ಹೇಳಿತಂತೆ, ಅದರಂತೆ ಗೌಡನು ಕುಟುಂಬ ಸಮೇತ ಯಾತ್ರೆ ಹೊರಟು ಗೋವಿಂದರಾಯ ಪಟ್ಟಣದಿಂದ ಈ ಉತ್ಸವ ಮೂರ್ತಿಯನ್ನು ತಂದು ಪೂಜಿಸತೊಡಗಿದರು ಗೌಡರು ತಾವರೆಕೆರೆ ಗ್ರಾಮದೊಳಗೆ ಭಕ್ತಾದಿಗಳ ಸಹಕಾರದಿಂದ ಹಾಗೂ ವೈಶ್ಯ ಜನಾಂಗದವರು ದಾನ ಮಾಡಿದ ಪುಣ್ಯಸ್ಥಳದಲ್ಲಿ ಹೊಸದಾಗಿ ದೇವಸ್ಥಾನವನ್ನು ಕಟ್ಟಿಸಿ ಆ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿದರು.

ತಿರುಪತಿಯ ಗೋವಿಂದರಾಯಪಟ್ಟಣದಿಂದ ತಂದಂತಹ ಮೂರ್ತಿಯ ರಥದ ಗಾಲಿಯ ಸ್ವರೂಪವಾದ್ದರಿಂದ "ಬಂಡಿರಂಗನಾಥ ಸ್ವಾಮಿ" ಅಥವಾ ಗಾಲಿ-ರಂಗನಾಥಸ್ವಾಮಿ" ಎಂತಲೂ ಭಕ್ತರು ಕರೆಯುತ್ತಾರೆ. ಈ ಬಂಡಿರಂಗನಾಥಸ್ವಾಮಿ ಪ್ರತಿಸ್ಥಾಪನಾ ಸಮಾರಂಭಕ್ಕೂ ಹಾಗೂ ಜಾತ್ರೆಗೂ ಅಪಾರ ದೈವ ಭಕ್ತರಾದ ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ಶ್ರೀಶ್ರೀಶ್ರೀ ಜಯ ಚಾಮರಾಜೇಂದ್ರ ಒಡೆಯರ್‌ರವರು ಆಗಮಿಸಿದ್ದುದೇ ವಿಷೇಶ, ಜಾತ್ರಾ ಸಮಯದಲ್ಲಿ ಬ್ರಾಹ್ಮಣ ಜನಾಂಗದವರು ನಡೆಸುವ ಅನ್ನಸಂತರ್ಪಣೆಗೆ ಭಕ್ತಾದಿಗಳಿಗೆ ಅನುಕೂಲವಾಗುವಂತೆ ಶಿರಾ ಪಟ್ಟಣದ ಮರಾಠ ಜನಾಂಗದ ಶ್ರೀ ಬಾಬೂರಾವ್ ವಂಶಸ್ಥರುಗಳು ಧರ್ಮ ಛತ್ರವನ್ನು ನಿರ್ಮಿಸಿದ್ದಾರೆ.

**ದೇವಸ್ಥಾನದ ರಚನೆ:**

ಜಾತ್ರಾ ಸಮಯದಲ್ಲಿ ದೇವರ ಉತ್ಸವಗಳಿಗೆ ಹಾಗೂ ಪೂಜಾ ಕೈಂಕರ್ಯಗಳಿಗೆ ಅನುಕೂಲವಾಗುವಂತೆ ಈ ಗ್ರಾಮದ ಮಧ್ಯಬಾಗದಲ್ಲಿ ಎಲ್ಲಾ ಭಕ್ತಾದಿಗಳ ಸಹಕಾರದಿಂದ ಭವ್ಯವಾದ ದೇವಸ್ಥಾನವನ್ನು ಮದ್ದಕ್ಕನಹಳ್ಳಿ ಗ್ರಾನೈಟ್ ಶಿಲೆಯಲ್ಲಿ ನಿರ್ಮಾಣ

ಮಾಡಿದ್ದಾರೆ ಈ ಬಂಡಿರಂಗನಾಥ ಸ್ವಾಮಿಯ ದೇವಸ್ಥಾನದ ರಚನೆಯು ಮುವತ್ತು ಅಡಿ ಅಗಲ, ಇಪ್ಪತ್ತು ಅಡಿ ಉದ್ದ, ಹದಿನೈದು ಅಡಿ ಎತ್ತರವನ್ನು ಹೊಂದಿದ್ದು, ಅದರಲ್ಲಿ ಹತ್ತು ಅಡಿ ವಿಸ್ತಾರದ ಗರ್ಭಗುಡಿಯನ್ನು ಹೊಂದಿದೆ. ಇಲ್ಲಿ ಬಂಡಿರಂಗನಾಥ ಮೂಲ ವಿಗ್ರಹ, ಅದರ ಎಡಬಾಗದ ಗರ್ಭಗುಡಿಯಲ್ಲಿ ಮಹಾಲಕ್ಷ್ಮಿಯ ವಿಗ್ರಹ, ಬಲ ಭಾಗದಲ್ಲಿ ಗರ್ಭಗುಡಿಯಲ್ಲಿ ಗೋವಿಂದರಾಯ ಪಟ್ಟಣದಿಂದ ತಂದಿದ ಉತ್ಸವ ಮೂರ್ತಿಯನ್ನು ಇಡಲಾಗಿದೆ,ಗರ್ಬಗುಡಿಯ ಮುಂಬಾಗದಲ್ಲಿ ಕಂಬಗಳಿದ್ದು, ತೆರೆದ ನವರಂಗಮಂಟಪವಿದೆ ಪ್ರಸ್ತುತ ಕಬ್ಬಿಣದ ಗ್ರಿಲ್ಸ್‌ಗಳನ್ನು ಮಾಡಿಸಿ ಹಾಕಿರುತ್ತಾರೆ, ಗರ್ಭಗುಡಿಯ ಮೇಲ್ಬಾಗದಲ್ಲಿ ಸೀಮೆಂಟಿನಿಂದ ಮಾಡಲ್ಪಟ್ಟ ಒಂಭತ್ತು ಸೋಪಾನಗಳುಳ್ಳ ವಿಮಾನ ಗೋಪುರವಿದೆ ದೇವಸ್ಥಾನದ ಸುತ್ತಲೂ ಪ್ರಾಕಾರವಿದ್ದು, ದಕ್ಷಿಣ ಮತ್ತು ಪಶ್ಚಿಮ ದಿಗ್ಬಾಗಗಳಲ್ಲಿ ಯಜ್ಞ ಶಾಲೆಯಿದೆ ದೇವರ ಗಂಗಾಪೂಜೆಗಳಿಗೆ ಅನುಕೂಲವಾಗುವಂತೆ ಗರ್ಭಗುಡಿಯ ಅಗ್ನಿ ದಿಕ್ಕಿನಲ್ಲಿ ಪ್ರಾಕಾರದ ಗೋಡೆಗಳನ್ನು ನಿರ್ಮಿಸಲಾಗಿದೆ.

ಮಹಾದ್ವಾರದ ಪೂರ್ವ ಮತ್ತು ಉತ್ತರ ದಿಕ್ಕಿನ ರಸ್ತೆಯ ಬಾಗಗಳಲ್ಲಿ ಪ್ರವೇಶದ್ವಾರವಿದ್ದು, ಉತ್ಸವಾದಿಗಳಿಗೆ ಪ್ರದಕ್ಷಿಣಾ ಫಥವಿದೆ, ದೇವಸ್ಥಾನದ ಮುಂದೆ 18 ಅಡಿ ಎತ್ತರದ ಧ್ವಜ ಸ್ಥಂಬವಿದೆ ನವರಂಗ ಮಂಟಪದ ಮುಂದೆ ಎರಡು ದೀಪ ಸ್ಥಂಬಗಳಿವೆ ಹಾಗೂ ದೇವಸ್ಥಾನ ವಾಯುವ್ಯ ದಿಕ್ಕಿನಲ್ಲಿ ನವಗ್ರಹಗಳನ್ನು ಪ್ರತಿಸ್ಥಾಪಿಸಿದ್ದಾರೆ ಈ ದೇವಸ್ಥಾನದ ಪೂರ್ಣ ರಚನೆಯ ವಿನ್ಯಾಸವನ್ನು ಅರ್ಚಕರಾದ ಶ್ರೀ ರಂಗನಾಥ ಶಾಸ್ತ್ರಿಯವರು ಬಹಳ ಸೂಕ್ಷ್ಮವಾಗಿ ತಿಳಿಸಿರುತ್ತಾರೆ.



**ಜಾತ್ರಾಮಹೋತ್ಸವ:**

ತಾವರೆಕೆರೆಯ ಆದಿದೈವ ಶ್ರೀ ರಂಗನಾಥ, ಬಂಡಿರಂಗನಾಥ, ಬಂಡಿರಂಗಧಾಮ, ಗಾಲಿರಂಗನಾಥ, ಎಂದು ನಮ್ಮ ವಕ್ಕಲು ಮಕ್ಕಳು ಅಕ್ಕರೆಯಿಂದ ಕರೆಯುವ ದನಗಳ ಜಾತ್ರೆಗೆ ಇನ್ನೊಂದು ಹೆಸರೇ **"ರಂಗದಾಮನ ಪರಿಸೆ"** ಸುಗ್ಗಿಮುಗಿದ ನಂತರ ದವಸ, ಧಾನ್ಯಗಳನ್ನು ಒಕ್ಕಣಿ ಮಾಡಿ, ಕಣಜಗಳಲ್ಲಿ ಭದ್ರಪಡಿಸಿ, ಹುಲ್ಲನ್ನು ಬಣವೆ ಮಾಡಿ, ಸುಮಾರು ಎರಡು ತಿಂಗಳುಗಳ ಕಾಲ ಈ ಬಾಗದ ರೈತಾಪಿ ಜನರು, ತಮ್ಮ

ದನಕರುಗಳನ್ನು ಪ್ರತಿದಿನ ಮೈತೊಳೆದು, ಹುಲ್ಲು, ಹುರುಳಿ ಹಾಕಿ, ಅದರಲ್ಲೂ ಕೋಳಿ ಕೂಗುವ ಮುನ್ನವೇ ಎದ್ದು ತಮ್ಮೂರಿನ ಜಗುಲಿಯ ಮೇಲೆ ರೈತರು ಪೈಪೋಟಿಯ ಮೇಲೆ ಜೋಳಸ ಸೆಪ್ಪೆಯನ್ನು ಎತ್ತುಗಳ ಬಾಯಿಗೆ ಕೊಟ್ಟು ದಪ್ಪಪುಷ್ಟವಾಗಿ ಮೇಯಿಸುವುದೇ ಒಂದು ಸಂಭ್ರಮ! ಇನ್ನು ದಪ್ಪ-ಪುಷ್ಟವಾಗಿ ಮೇಯ್ದ ಎತ್ತುಗಳ ಕೊಂಬನ್ನು ನುಣುಪು ಮಾಡಿ, ಕೊಂಬಿಗೆ ಕಳಸ, ಬಣ್ಣದ ಟೇಪು ಸುತ್ತಿ, ಕೊರಳಿಗೆ ಶಂಖ, ಗಂಟೆಕಟ್ಟಿ, ಮೈಯನ್ನು ಎಣ್ಣೆಯಿಂದ ಮಾಲೀಷುಮಾಡಿ, ಮಿರಿ ಮಿರಿ ಮಿಚುವ ಎತ್ತುಗಳನ್ನು "ಬಂಡಿ ರಂಗನಾಥನ ಜಾತ್ರೆಗೆ" ಗಾಡಿಗಳಲ್ಲಿ 15 ದಿವಸಗಳಿಗೆ ಆಗುವ ಹುಲ್ಲನ್ನು ಮತ್ತು ಭತ್ಯೆಯನ್ನು ತುಂಬಿಕೊಂಡು ಹೋಗುವುದೇ ಮತ್ತೊಂದು ಸಂಭ್ರಮ !! ಇನ್ನು ಈ ಜಾತ್ರೆಗೆ ಹಿರಿಯೂರು, ಚಿತ್ರದುರ್ಗ, ದಾವಣಗೆರೆ, ಹರಿಹರ ಇನ್ನು ಮುಂತಾದ ದೂರದ ಊರುಗಳಿಂದ ಜಾನುವಾರುಗಳನ್ನು ಕೊಳ್ಳಲು ಒಂದು ಸೇರುತ್ತಾರೆ ಎಂದು ಗ್ರಾಮದ ಕಂಬದ ರಂಗಣ್ಣ ತಿಳಿಸಿರುತ್ತಾರೆ.

ಇನ್ನು ಕೊನೆಯ ದಿನದ ಮುಕ್ತಾಯ ಸಮಾರಂಭದಲ್ಲಿ ಜಾತ್ರಾ ಸಮಿತಿಯವರ ಮೊದಲ ಬಹುಮಾನ ಪಡೆದ ದಪ್ಪ ಪುಷ್ಟವಾದ ಹೋರಿಗಳನ್ನು ಕೊಂಡುಕೊಂಡವರು, ಅವುಗಳಿಗೆ ಬಣ್ಣದ ಗೌನು ತೊಡಿಸಿ, ಕೊರಳಿಗೆ ಶಂಖ, ಗಂಟೆ, ಕುರುಬದಾರ, ಗೆಜ್ಜೆಗಳನ್ನು ಕಟ್ಟಿ, ಹೂವಿನ ಹಾರಹಾಕಿ ಸಿಂಗರಿಸಿ, ದೇವಸ್ಥಾನದ ಮುಂದೆ ಪೂಜೆ ಮಾಡಿಸಿ, ಜಾತ್ರೆಯ ರಾಜಬೀದಿಗಳಲ್ಲಿ ಬ್ಯಾಡ್ ಸೆಟ್‌ನೊಂದಿಗೆ ಮೆರವಣಿಗೆ ಹೋಗುವಾಗ, ರಸ್ತೆಯ ಬದಿಯಲ್ಲಿ ನಿಂತ ಜಾತ್ರೆಗೆ ಬಂದ ಜನ **"ಯಾವ ಪುಣ್ಯಾತ್ಮ ಇಷ್ಟು ಚೆನ್ನಾಗಿ ಹೋರಿಗಳನ್ನು ಮೇಯಿಸಿದ್ದಾನೋ, ಮೈ ಮೇಲೆ ನೊಣ ಕುಂತರೂ, ಜಾರಿ ಹೋಗುತ್ತೇ"** ಎಂದು ಉದ್ಗಾರದ ಮಾತುಗಳನ್ನಾಡುತ್ತಾ, ಬಾಯಿಯ ಮೇಲೆ ಬೆರಳಿಟ್ಟುಕೊಂಡು ಆಶ್ಚರ್ಯ ಪಡುತ್ತಾರೆ!!!

ಇನ್ನು ದನಗಳ ಜಾತ್ರೆಯ ಜೊತೆಯಲ್ಲೆ ಜನಗಳ ಜಾತ್ರೆಯು ಪ್ರಾರಂಭವಾಗಿ ಶ್ರೀ ಬಂಡಿರಂಗನಾಥ ಸ್ವಾಮಿಗೆ ಪ್ರತಿನಿತ್ಯ ಒಂದೊಂದು ವಿಶಿಷ್ಟವಾದ ಕಾರ್ಯಕ್ರಮಗಳು ಜರುಗುತ್ತವೆ, ಜಾತ್ರೆಯ ಮೊದಲ ದಿನ ಧ್ವಜಾರೋಹಣದಿಂದ ಪ್ರಾರಂಭಗೊಂಡು, ಕಳಸ ಸ್ಥಾಪನೆ, ಹೋಮ, ಬಲಿಹರಣ, ಸ್ವಾಮಿಯ ಹೂವಿನ ಉತ್ಸವ ಗರುಡೋತ್ಸವ, ಹೂವಿನ

ಮಂಟಪೋತ್ಸವ ಇನ್ನು ಮುಂತಾದ ಕಾರ್ಯಕ್ರಮಗಳು ಜಾತ್ರೆಯ 15 ದಿನಗಳ ಕಾಲ ವೈಭವದಿಂದ ನಡೆಯುತ್ತದೆ, ಪ್ರತಿ ವರ್ಷ ರಥಸಪ್ತಮಿಯಂದು ನಾಲ್ಕು ಬೃಹತ್ ಕಲ್ಲಿನ ಗಾಲಿಗಳಿರುವ ದೊಡ್ಡ ತೇರನ್ನು ಹೂವು ಮತ್ತು ಬಣ್ಣದ ಬಟ್ಟೆ –ಬಾವುಟಗಳಿಂದ ಸಿಂಗಾರ ಮಾಡಿ, ಸ್ವಾಮಿಯ ಉತ್ಸವ ಮೂರ್ತಿಯನ್ನು ರಥದಲ್ಲಿ ಕೂರಿಸಲಾಗುವುದು, ಮದ್ಯಾಹ್ನ 1 ಗಂಟೆ ಸಮಯದಲ್ಲಿ ಸ್ವಾಮಿಯ ಮಹಿಮೆಯಿಂದ ಆಕಾಶ ಮಾರ್ಗವಾಗಿ ಗರುಡ ಹಾರಿ ಬಂದು, ಈ ರಥವನ್ನು ಮೂರು ಸುತ್ತು ಪ್ರದಕ್ಷಿಣೆ ಹಾಕಿ ಹೋಗುವುದು ಈ ವಿಧವಾಗಿ ಶ್ರೀ ರಂಗನಾಥ ಸ್ವಾಮಿ ಪವಾಡವು ಪ್ರತಿ ವರ್ಷ ತಪ್ಪದೆ ನಡೆಯುವುದು ಗರುಡ ಬಂದು ಮೂರು ಸುತ್ತು ಪ್ರದಕ್ಷಿಣೆ ಹಾಕುತ್ತಿದ್ದಂತೆ ಭಕ್ತಾದಿಗಳು ಬಾವ ಪರವಶರಾಗಿ, ಹರ್ಷೋದ್ಗಾರಗಳಿಂದ ಬ್ರಹ್ಮರಥೋತ್ಸವವನ್ನು ಎಳೆಯುತ್ತಾ, ದವನ–ಬಾಳೆ ಹಣ್ಣುಗಳನ್ನು ರಥಕ್ಕೆ ಎಸೆಯುತ್ತಾ ಭಕ್ತಿ ಸಮರ್ಪಿಸುತ್ತಾರೆ ನಂತರ ಬ್ರಾಹ್ಮಣರು, ವೈಶ ಜನಾಂಗದವರು ಹಾಗೂ ಭಕ್ತಾದಿಗಳಿಂದ ಜಾತ್ರೆಗೆ ಬಂದ ಜನರೆಲ್ಲರಿಗೂ ಪಾನಕ, ಕೋಸಂಬರಿ ನೀರು ಮಜ್ಜಿಗೆ ಮತ್ತು ಅನ್ನಸಂತರ್ಪಣೆ ನಡೆಸುತ್ತಾರೆ ಹೀಗೆ 15 ದಿನಗಳ ಕಾಲ ನಡೆಯುವ ಬಾರಿ ದನಗಳ ಜಾತ್ರೆಗೂ, ರಥಸಪ್ತಮಿಯ ದಿನ ಪವಾಡದ ರೀತಿಯಲ್ಲಿ "ಗರುಡ ದರ್ಶನ"ದ ಬ್ರಹ್ಮರಥೋತ್ಸವಕ್ಕೂ, ನಮ್ಮ ರಾಜ್ಯದ ಎಲ್ಲಾ ಕಡೆಯಿಂದ ಬರುವ ಲಕ್ಷಾಂತರ ಮಂದಿ ರೈತಾಪಿ ಜನಗಳಿಗೂ ಹಾಗೂ ಭಕ್ತರೆಲ್ಲರಿಗೂ ಜಾತ್ರಾ ಸಮಿತಿಯವರು ನೀರು, ಬೆಳಕು ಹಾಗೂ ಅನ್ನಸಂತರ್ಪಣೆ ವ್ಯವಸ್ಥೆಯನ್ನು ಬಹಳ ಅಚ್ಚುಕಟ್ಟಾಗಿ ನಡೆಸಿ ಶ್ರೀ ಬಂಡಿರಂಗನಾಥ ಸ್ವಾಮಿಯ ಅದ್ದೂರಿ ಜಾತ್ರಾ ಮಹೋತ್ಸವವನ್ನು ಸಂಪನ್ನಗೊಳಿಸುತ್ತಾರೆ.

॥ ಶ್ರೀ ಲಕ್ಷ್ಮೀರಂಗನಾಥಸ್ವಾಮಿ ಪ್ರಸನ್ನ ॥

[illegible]

[illegible] ಪುನರ್ಜನ್ಮಂನ ವಿದ್ಯತೆ ॥



## ಶ್ರೀ ಲಕ್ಷ್ಮೀ ರಂಗನಾಥಸ್ವಾಮಿಯ

# ಬ್ರಹ್ಮ ರಥೋತ್ಸವದ

# ಆಹ್ವಾನ ಪತ್ರಿಕೆ

ಕಾಳಾಪುರ, ಕಳ್ಳಂಬೆಳ್ಳ ಹೋ, ಶಿರಾ ತಾಲ್ಲೂಕು.

**ದಿವ್ಯ ಸಾನಿಧ್ಯ : ಪರಮಪೂಜ್ಯ ಶ್ರೀ ಶ್ರೀ ಶ್ರೀ ನಂಜಾವಧೂತ ಮಹಾಸ್ವಾಮಿಗಳು**

ಶ್ರೀ ಕ್ಷೇತ್ರ ಸ್ಫಟಿಕಪುರಿ. ಪಟ್ಟನಾಯಕನಹಳ್ಳಿ.

ಸ್ವಸ್ತಿಶ್ರೀ ಹೇವಿಳಂಬಿನಾಮ ಸಂವತ್ಸರದ ಉತ್ತರಾಯಣ ಶಶಿರಋತು ಫಾಲ್ಗುಣ ಶುಕ್ಲ ಹುಣ್ಣಿಮೆ.
ತಾ. 27-02-2018ನೇ ಮಂಗಳವಾರದಿಂದ ತಾ. 3-3-2018ರವರೆಗೆ ಅಂಕುರಾರ್ಪಣೆ, ಮೊದಲುಗೊಂಡು ಧ್ವಜಾರೋಹಣ, ಕಲ್ಯಾಣೋತ್ಸವ, ಬ್ರಹ್ಮ ರಥೋತ್ಸವ ಹಾಗೂ ಶಯನೋತ್ಸವ ಇತ್ಯಾದಿ ಕಾರ್ಯಕ್ರಮಗಳು ನಡೆಯಲಿವೆ.

**ಕಾರ್ಯಕ್ರಮಗಳು ಮತ್ತು ಸೇವಾಕರ್ತರು**

| | |
|---|---|
| ತಾ. 27-2-2018 ನೇ ಮಂಗಳವಾರ | ಫಾಲ್ಗುಣ ಶುದ್ಧ ದ್ವಾದಶಿ ತ್ರಯೋದಶಿ ಬೆಳಿಗ್ಗೆ ಪಂಚಾಮೃತ ಅಭಿಷೇಕ ಮತ್ತು ಅನ್ನಸಂತರ್ಪಣೆ ಹಾಗೂ ಸಂಜೆ ಅಂಕುರಾರ್ಪಣ ಮತ್ತು ಧ್ವಜಾರೋಹಣ. ಶ್ರೀಮತಿ ವಿನೋದಮ್ಮ ಮತ್ತು ಮಕ್ಕಳು. ಪುಟ್ಟಲಕ್ಷ್ಮಮ್ಮ ಮತ್ತು ಸುಬ್ಬರಾವ್‌ರವರಿಂದ ಅನ್ನಸಂತರ್ಪಣೆ. |
| ತಾ. 28-2-2018 ನೇ ಬುಧವಾರ | ಫಾಲ್ಗುಣ ಶುದ್ಧ ಚತುರ್ದಶಿ ಬೆಳಿಗ್ಗೆ ಪಂಚಾಮೃತ ಅಭಿಷೇಕ ಮತ್ತು ಅನ್ನಸಂತರ್ಪಣೆ ಅಲ್ಲೇನವರ ಬಳಗದಿಂದ. ಗಜೇಂದ್ರ ಮೋಕ್ಷ , ಶ್ರೀ ಹೆಚ್.ಕೆ. ಶ್ರೀರಂಗಾಚಾರ್ಯರು, ಶ್ರೀ ಲಕ್ಷ್ಮೀನಾರಾಯಣಪ್ಪ & ಮಕ್ಕಳು, ಅರ್ಚಕರು. ಶ್ರೀಮತಿ ರಾಜಲಕ್ಷ್ಮಮ್ಮ ಮತ್ತು ಮಕ್ಕಳಿಂದ "ಶ್ರೀ ಲಕ್ಷ್ಮೀ ಕಲ್ಯಾಣೋತ್ಸವ". ವಿದ್ಯುತ್ ದೀಪಾಲಂಕಾರ ಹಾಗೂ ಧ್ವನಿವರ್ಧಕ ಸೇವೆ: ಶ್ರೀ ತಿಮ್ಮರಾಜು ಕೆ. & ಸಹೋದರರು ಶ್ರೀ ನಾಗರಾಜಶೆಟ್ಟಿ ಮತ್ತು ಮಕ್ಕಳು. ಶ್ರೀ ಪುಟ್ಟರಾಜು ಮತ್ತು ಸಹೋದರರು, ಶ್ರೀಮತಿ ಶಾರದಮ್ಮ ಮತ್ತು ಮಕ್ಕಳು. ಮಾಟನಹಳ್ಳಿ ಶ್ರೀಮತಿ ಶಾರದಮ್ಮ & ಮಕ್ಕಳು. ತೆಂಗಿನಕಾಯಿ & ಕರ್ಪೂರದ ಸೇವೆ : ರಾಮಮ್ಮ ಮತ್ತು ಮಕ್ಕಳು, ಕಾಳಾಪುರ. ಸಂಜೆ ಕಳಶ ಪ್ರತಿಷ್ಠಾಪನೆ, ಚಿಕ್ಕಣ್ಣನವರಿಂದ ಮಾಟನಹಳ್ಳಿ |
| ತಾ. 1-3-2018ನೇ ಗುರುವಾರ  ಬ್ರಹ್ಮ ರಥೋತ್ಸವ | ಫಾಲ್ಗುಣ ಶುದ್ಧ ಹುಣ್ಣಿಮೆ ಅಭಿಷೇಕ ಸೇವೆಗಳು. ರಥೋತ್ಸವದ **ಹೂವಿನ ಅಲಂಕಾರ ಸೇವೆ** : ಪಟೇಲ್ ಕೆ.ಹೆಚ್. ಶ್ರೀರಂಗಯ್ಯ ಮತ್ತು ಮಕ್ಕಳು. ಮಧ್ಯಾಹ್ನ **"ಬ್ರಹ್ಮ ರಥೋತ್ಸವ"** ಸೇವೆ ಹಾಗೂ ಪೂಜಾ ಕಾರ್ಯಕ್ರಮಗಳು : ಶ್ರೀಮತಿ ಕಮಲಮ್ಮ ಮತ್ತು ಮಕ್ಕಳಿಂದ. **ಅನ್ನಸಂತರ್ಪಣೆ ಸೇವೆ** : ಶ್ರೀಮತಿ ನಾಮಾಕ್ಷಮ್ಮ ಮತ್ತು ಶ್ರೀಮತಿ ರಂಗತಾಯಮ್ಮನವರಿಂದ. **ಪಾನಕ ಸೇವೆ** : ಶ್ರೀ ಪಿ.ಬಿ. ಅಶ್ವತ್ಥನಾರಾಯಣಶೆಟ್ಟಿ ಮತ್ತು ಮಕ್ಕಳು. ತುಮಕೂರು. ಶ್ರೀ ರಂಗಶೆಟ್ಟಿ ಮತ್ತು ಶ್ರೀ ರಾಮಾಶೆಟ್ಟಿ ಮಕ್ಕಳು, ಚೇಳೂರು. ಮಾರೀಪಾಳ್ಯದ ಅಣ್ಣ-ತಮ್ಮಂದಿರು. ಶ್ರೀ ಹೆಚ್.ರಂಗನಾಥ್ ಮತ್ತು ಸಹೋದರರು. ಬೆಂಚೆ ಗ್ರಾಮದ ಒಕ್ಕಲುಗಳಿಂದ, ಶ್ರೀ ಸಿದ್ಧಲಿಂಗಪ್ಪ ಮತ್ತು ಸಹೋದರರು, ಮಾಯಸಂದ್ರ. **ತೇರಿಗೆ ವಸ್ತ್ರಾಲಂಕಾರ** : ಕೆ.ಆರ್.ಹನುಮಂತರಾಯಪ್ಪ & ಸಹೋದರರು. **ರಾತ್ರಿ 8.30ಕ್ಕೆ ಕುರುಕ್ಷೇತ್ರ ನಾಟಕ ಪ್ರದರ್ಶನ,** ಕಾಳಾಪುರ ಗ್ರಾಮಸ್ಥರಿಂದ |
| ತಾ. 2-3-2018 ನೇ ಶುಕ್ರವಾರ | ಫಾಲ್ಗುಣ ಬಹುಳ ಪಾಡ್ಯ ಬೆಳಿಗ್ಗೆ ಪಂಚಾಮೃತ ಅಭಿಷೇಕ ಮತ್ತು **ಅನ್ನ ಸಂತರ್ಪಣೆ ಸೇವೆ** : ಶ್ರೀಮತಿ ಸರಸ್ವತಮ್ಮ ಮತ್ತು ಮಕ್ಕಳು, ಶ್ರೀಮತಿ ಯಶೋಧಮ್ಮ ಮತ್ತು ಮಕ್ಕಳು. ಮಧ್ಯಾಹ್ನ ಓಕಳಿ-ಮಂಟಪ ಕಾರ್ಯಕ್ರಮ. ಸಂಜೆ ಶಯನೋತ್ಸವ ಸೇವೆ : ಶ್ರೀಮತಿ ಪಾರ್ವತಮ್ಮ ಮತ್ತು ಮಕ್ಕಳು. ಪಾನ ಪುಷ್ಪಾಲಂಕಾರ ಮತ್ತು ಉತ್ಸವ ಸೇವೆ : ಶ್ರೀಮತಿ ಕೆಂಪಚೌಡಮ್ಮ ಮತ್ತು ಮಕ್ಕಳು, ಶ್ರೀಮತಿ ಪಿ.ಲಕ್ಷ್ಮಮ್ಮ ಮತ್ತು ಮಕ್ಕಳು. |
| ತಾ. 3-3-2018 ನೇ ಶನಿವಾರ | ಫಾಲ್ಗುಣ ಬಿದಿಗೆ ಬೆಳಿಗ್ಗೆ **ಪಂಚಾಮೃತ ಅಭಿಷೇಕ ಸೇವೆ** : ಪಟೇಲ್ ಶ್ರೀ ಕೆ.ಹೆಚ್. ಶ್ರೀರಂಗಯ್ಯನವರು ಮತ್ತು ಮಕ್ಕಳಿಂದ. ಪಾನಕಸೇವೆ : ಶ್ರೀಮತಿ ರಾಮಮ್ಮ ಮತ್ತು ಮಕ್ಕಳು. ಶ್ರೀ ಕೋದಂಡರಾಮಯ್ಯ ಮತ್ತು ಮಕ್ಕಳು, ಕಾಳಾಪುರ. **ಆಗಮಿಕರಿಗೆ** ಸಂಭಾವನೆ : ಯಜಮಾನ್ ಶ್ರೀರಂಗಸ್ವಾಮಯ್ಯನವರು ಮತ್ತು ಸಹೋದರರು, ಮಂಚಲದೊರೆ. **ಆಗಮಿಕರಿಗೆ ವಸ್ತ್ರದಾನ** : ಒಂಟಿ ಮನೆಅಣ್ಣ-ತಮ್ಮಂದಿರಿಂದ. ವಾದ್ಯದ ಸೇವೆ : ಶ್ರೀ ಸೋಮಲಿಂಗಯ್ಯ ಮತ್ತು ಶ್ರೀ ಶಿವಲಿಂಗಯ್ಯನವರಿಂದ ಕಾಳಾಪುರ. ಅರ್ಚಕರಿಗೆ **ಸಂಕಠಕೆ ಮತ್ತು ವಸ್ತ್ರದಾನ** : ಚೇಳೂರು ರಾಮಶೆಟ್ಟರು ಮತ್ತು ಸಹೋದರರು. ದೇವಸ್ಥಾನದ ಮತ್ತು ರಥದ ಬಣ್ಣದ ಸೇವೆ : ಕಾಳಾಪುರ ಗ್ರಾಮದ ಸರ್ಕಾರಿ ನೌಕರರಿಂದ. |

**ಪಂಚರಾಗಾತ್ರಮ ಆಗಮಿಕರು: ವೇ॥ ಬ್ರ॥ ಶ್ರೀ॥ ದೇವರಾಜ ಭಟ್ಟರು,** ಚಿತ್ರದುರ್ಗ.

ಪತ್ರಿಕಾ ಸೇವಾಕರ್ತರು : ಲಿಂಗಪ್ಪ ಮತ್ತು ಚಲುವಯ್ಯ ಮಾಜಿ ಗ್ರಾ.ಪಂ. ಅಧ್ಯಕ್ಷರು, ಕಾಳಾಪುರ.

ಮೇಲ್ಕಂಡ ಎಲ್ಲಾ ಕಾರ್ಯಕ್ರಮಗಳು [illegible] ಶ್ರೀಯಾಗಿ ಭಕ್ತವೃಂದದವರಿಂದ ನಡೆಯಲ್ಪಡುತ್ತವೆ.
ಭಕ್ತ ಮಹಾಶಯರು ಈ ಕಾರ್ಯಕ್ರಮಕ್ಕೆ [illegible] ಶ್ರೀ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

ಸೇವಾಕರ್ತರುಗಳು : ಕಾಳಾಪುರ ಗ್ರಾಮದ ಧರ್ಮದರ್ಶಿಗಳು, ಗೌಡರು, ಯಜಮಾನರು, ಪಣೆಗಾರರು, ರೈತರು, ಅರ್ಚಕರು ಒಕ್ಕಲುಗಳು, ಕೈವಾಡದವರು ಮತ್ತು ಗ್ರಾಮಸ್ಥರುಗಳು ಹಾಗೂ ಅಕ್ಕ-ಪಕ್ಕದ ಗ್ರಾಮಸ್ಥರುಗಳು

ಶ್ರೀನಿವಾಸ, ಶಿರಾ.

# 8. ಕಾಳಾಪುರದ ಶ್ರೀ ಲಕ್ಷ್ಮೀ ರಂಗನಾಥಸ್ವಾಮಿ ಜಾತ್ರಾ ಮಹೋತ್ಸವ

## ಪೀಠಿಕೆ

ಕಾಳಾಪುರ ಗ್ರಾಮವು ಕಳ್ಳಂಬೆಳ್ಳದಿಂದ 8 ಕಿ.ಮಿ ಸಿರಾ ಪಟ್ಟಣದಿಂದ 20 ಕಿ.ಮೀ ಹಾಗೂ ನಮ್ಮೂರು ಚಿಕ್ಕನಹಳ್ಳಿಯಿಂದ 10 ಕಿ.ಮೀ ದೂರದಲ್ಲಿದ್ದು ಕಂದಾಯ ಗ್ರಾಮವಾಗಿದೆ ಹಿಂದೆ ಈ ಗ್ರಾಮವನ್ನು ಕಾಳಿನಪುರ ಎಂದು ಕರೆಯಲಾಗುತ್ತಿತ್ತು. ಈಗ 'ಕಾಳಾಪುರ' ಎಂದು ಪರಿವರ್ತನೆಯಾಗಿದೆ ಎಂಬ ಐತಿಹ್ಯವಿದೆ ಈ ಪ್ರದೇಶದವು ಫಲವತ್ತಾಗಿದ್ದು ನೀರಾವರಿ ಸೌಕರ್ಯವಿಲ್ಲದೆ ಖುಷ್ಕಿ ಜಮೀನಿನಿಂದ ಕೂಡಿದ್ದು, ಇಲ್ಲಿನ ಜಮೀನಿನ ಮಣ್ಣು ಬಹಳ ಫಲವತ್ತಾಗಿದ್ದು , ಇಲ್ಲಿನ ರೈತರು ಈ ಜಮೀನಿನಲ್ಲಿ ಮಳೆ ನೀರಿನ ಆಸರೆಯಲ್ಲಿ ಹೆಚ್ಚಾಗಿ ರಾಗಿ, ಜೋಳ, ಶೇಂಗಾ ಹಾಗೂ ಅವರೆ, ಅಲಸಂದೆ, ಹೆಸರು, ಉದ್ದು, ಆರ್ಕಾ,ಸ್ಯಾವೆ, ಕೊರಲೆ, ಹುಚ್ಚೆಳ್ಳು, ಸಜ್ಜೆ ಮುಂತಾದ ಬೆಳೆಗಳನ್ನು ಬಿತ್ತನೆ ಸಲುವಾಗಿ ಸದೃಡವಾಗಿ ಬೆಳೆಯುತ್ತಿದ್ದರು ಸುಗ್ಗಿಯಕಾಲದಲ್ಲಿ ರೈತರು ಮೇಲ್ಕಂಡ ಬಿತ್ತನೆ ಬೀಜಗಳನ್ನು ಕಣಜ, ವಾಡೆಗಳಲ್ಲಿ ಸಂರಕ್ಷಿಸಿಡುತ್ತಿದ್ದರು, ಮುಂಗಾರಿನಲ್ಲಿ ಸಿರಾ ತಾಲ್ಲೂಕಿನಲ್ಲಿ ಅನೇಕ ರೈತರು ಬಿತ್ತನೆಯ ಅಕ್ಕಡಿ ಕಾಳುಗಳಾದ ಅವರೆ, ತೊಗರಿ, ಹೆಸರು, ಉದ್ದು, ಎಳ್ಳು ಇನ್ನು ಮುಂತಾದ ಬಿತ್ತನೆ ಬೀಜಗಳನ್ನು ಕೊಂಡುಕೊಂಡು ತಮ್ಮ ಹೊಲಗಳಲ್ಲಿ ಬಿತ್ತನೆ ಮಾಡುತ್ತಿದ್ದಾರೆ, ಆದ್ದರಿಂದ ಈ ಬಿತ್ತನೆ ಕಾಳಿಗೆ ಹಿಂದಿನಿಂದಲೂ ಹೆಸರುವಾಸಿಯಾಗಿರುವ ಈ ಕಾಳಿನ-ಪುರವು "ಕಾಳಾಪುರ" ಅಯಿಂತೆಂದು ಈ ಗ್ರಾಮದ ಹಿರಿಯರಾದ ಶಂಕರನಾರಾಯಣರಾವ್ ತಿಳಿಸಿರುತ್ತಾರೆ.

ಈ ಊರಿನ ಬಿತ್ತನೆ ಕಾಳಿನ ಬೇಡಿಕೆಗೆ ಶ್ರೀ ಲಕ್ಷ್ಮೀ ರಂಗನಾಥನ ಮಹಿಮೆಯೂ ಇನ್ನೊಂದು ಕಾರಣವೇನೆಂದರೆ ಸ್ವಾಮಿ ಜಾತ್ರಾ ಮಹೋತ್ಸವದ ಮೊದಲನೇ ದಿನ ನಡೆಯುವ "ಅಂಕುರಾರ್ಪಣೆ" ಸೇವೆಯಲ್ಲಿ ಎಲ್ಲಾ ನವದಾನ್ಯಗಳನ್ನು ಗೊಬ್ಬರ ಮತ್ತು ಹುತ್ತದ ಮಣ್ಣಿನಿಂದ ಮಿಶ್ರಮಾಡಿ 7 ದಿನಗಳ ಕಾಲ ಸ್ವಾಮಿಗಳ ಸನ್ನಿಸಿಯಲ್ಲಿ ಯಾಗ ಶಾಲೆಯಲ್ಲಿ ಇರಿಸಿ, ಜಾತ್ರೆಯ ಕೊನೆಯ ದಿವಸ ಯಾವ ಧಾನ್ಯಗಳು ಹೆಚ್ಚಾಗಿ ಮೊಳಕೆ ಅಂದರೆ 'ಅಂಕುರ' ಬಂದಿರುವುದನ್ನು ಖಚಿತಪಡಿಸಿಕೊಂಡು ಆ ವರ್ಷ ಈ ಧಾನ್ಯಗಳ ಬೆಳೆಯು ಹುಲುಸಾಗಿ ಬೆಳೆದು ಫಸಲು ಸಂಬ್ರಂದ್ಧಿಯಾಗಿ ಬರುತ್ತದೆ ಎಂಬ

ನಂಬಿಕೆಯಿಂದ ಶಿರಾ ತಾಲ್ಲೂಕಿನ ರೈತರುಗಳು ಕಾಳಾಪುರ ಗ್ರಾಮದ ರೈತರುಗಳು ಶೇಖರಿಸಿಟ್ಟಿರುವ ಬಿತ್ತನೆ ಬೀಜಗಳನ್ನು ಸ್ವಾಮಿಯ ಆರ್ಶೀವಾದ ಎಂದು ಮುಂಗಾರು ಬಿತ್ತನೆಗೆ ತೆಗೆದುಕೊಂಡು ಹೋಗಿ ತಮ್ಮ ಹೊಲಗಳಲ್ಲಿ ಬಿತ್ತನೆ ಮಾಡುವುದನ್ನು ಇಂದಿಗೂ ರೂಡಿಸಿಕೊಂಡಿದ್ದಾರೆ.

ಗ್ರಾಮದಲ್ಲಿ ಸರ್ಕಾರಿ ಹಿರಿಯ ಮಾದ್ಯಮಿಕ ಶಾಲೆ, ಪ್ರೌಡಶಾಲೆ, ಗ್ರಾಮ ಲೆಕ್ಕಾದಿಕಾರಿಗಳ ಕಛೇರಿ, ಅಂಗನವಾಡಿ ಕೇಂದ್ರಗಳು ಕೆಲಸ ನಿರ್ವಹಿಸುತ್ತಿವೆ. ಈ ಗ್ರಾಮದ ಶಿವಲಿಂಗಯ್ಯ ಎಂಬುವವರು ಭಾರತೀಯ ವಾಯುದಳದ ಛೀಪ್ ಇಂಜಿನಿಯರಂಗ್ ಆಗಿ ಸೇವೆ ಸಲ್ಲಿಸಿ ಈಗ ನಿವೃತ್ತಿಯಾಗಿದ್ದಾರೆ ಕ್ರಿ.ಶ. 1750 ರಲ್ಲಿ ಈ ಗ್ರಾಮದ ಸರಸ ಭಾರತಿ ಕೋನಯ್ಯ ಎಂಬ ವಿದ್ವಾಂಸರು "ಕೃಷ್ಣಾರ್ಜುನರ ಸಂಗರ" ಎಂಬ ಭಾಮಿನಿ ಷಟ್ಪದಿಯ ಗ್ರಂಥವನ್ನು ರಚಿಸಿ ಪ್ರಸಿದ್ದಿಯಾಗಿದ್ದರು ಈಗಲೂ ಇವರ ವಂಶಸ್ಥರು ಕಾಳಾಪುರ ಗ್ರಾಮದಲ್ಲಿ ವಾಸವಾಗಿದ್ದಾರೆ.

ಈ ಗ್ರಾಮದಲ್ಲಿ ಲಕ್ಷ್ಮೀ ರಂಗನಾಥಸ್ವಾಮಿ ದೇವಸ್ಥಾನ ಹಾಗೂ ಮಾರಮ್ಮನ ಪೌಳಿ ಇರುತ್ತದೆ. ಗ್ರಾಮದ ಹೊರಗೆ ಕೊಲ್ಲಾಪುರದಮ್ಮನ ಪೌಳಿ ಇರುತ್ತದೆ. ವರ್ಷಕೊಮ್ಮೆ ಶಿವರಾತ್ರಿ ಹಬ್ಬವಾದ 15 ದಿನಗಳ ನಂತರ ಕಾಮನ ಹುಣ್ಣಿಮೆಲ್ಲಿ ಸ್ವಾಮಿಗೆ ಬ್ರಹ್ಮರಥೋತ್ಸವ ನಡೆಯುತ್ತದೆ. ಕೊಲ್ಲಾಪುರದಮ್ಮನಿಗೆ ಯುಗಾದಿ ಮಾರನೆ ದಿನ ಬೆಳಗ್ಗೆ ಆರತಿ ಮಾಡಿ ಬಲಿ ಕೊಡುತ್ತಾರೆ.

ಲಕ್ಷ್ಮಿ ರಂಗನಾಥ ಸ್ವಾಮಿಯ ದೇವಸ್ತಾನದ ಹಿಂದಿರುವ ವೀರಗಲ್ಲು ವಿಜಯನಗರದ ಕಾಲದ್ದಾಗಿದೆ. ಈ ವೀರಗಲ್ಲಿನಲ್ಲಿ ವೀರನು ಕುದುರೆಯ ಮೇಲೆ ಎಡಗೈಯಲ್ಲಿ ಲಗಾಮು ಹಿಡಿದು, ಬಲಗೈಯಲ್ಲಿ ಕಠಾರಿಯನ್ನು ಮೇಲೆತ್ತಿ ಹಿಡಿದಿರುತ್ತಾನೆ, ವೀರನ ತಲೆಯ ಮುಡಿಯನ್ನು ಕುಚ್ಚಾಗಿ ಕಟ್ಟಲಾಗಿದೆ ಕೈಕಾಲುಗಳಿಗೆ ಕಡಗ, ಕೊರಳಿಗೆ ವಿವಿದ ರೀತಿಯ ಆಭರಣಗಳನ್ನು ಧರಿಸಿರುತ್ತಾನೆ. ಕುದುರೆಗೂ ವಿವಿದ ಆಭರಣಗಳನ್ನು ಹಾಕಿರುತ್ತಾರೆ ವೀರನ ಹಿಂಬಾಗದಲ್ಲಿ ಬೆಳ್ಳಿಯ ಕೊಡೆ ಹಿಡಿದು ನಿಂತ ವೀರನಾಗಿ

ಇರುವುದರಿಂದ, ಇದು ಒಂದುರಾಜಪ್ರಮುಖ ವೀರಗಲ್ಲು ಎಂದು ತಿಳಿಯಬಹುದು ವೀರಗಲ್ಲಿನ ಮೇಲ್ಭಾಗದಲ್ಲಿ ಸೂರ್ಯ-ಚಂದ್ರರನ್ನು ಬಿಡಿಸಲಾಗಿದೆ.

**ಇತಿಹಾಸ :**

ಈ ಗ್ರಾಮದಲ್ಲಿ ಶ್ರೀ ಲಕ್ಷ್ಮಿ ರಂಗನಾಥಸ್ವಾಮಿಯು ನೆಲಸಿರುವ ಹಿನ್ನೆಲೆ ಏನೆಂದರೆ, ನೂರು ವರ್ಷಗಳ ಹಿಂದೆ ಗುಬ್ಬಿ ತಾಲ್ಲೂಕಿನ ಮಂಚಲದೊರೆ ಭಕ್ತಾದಿಗಳು ಈ ಮಾರ್ಗವಾಗಿ ತಿರುಪತಿಗೆ ಗರ್ಭಿಣಿಯೊಂದಿಗೆ ಹೋಗುವಾಗ, ಸಂಜೆಯಾದ್ದರಿಂದ ಕಾಳಾಪುರ ಗ್ರಾಮದ ಒಂದು ಕಲ್ಲು ಮಂಟಪದಲ್ಲಿ ರಾತ್ರಿ ತಂಗಿದ್ದಾಗ, ಗರ್ಭಿಣಿಗೆ ಪ್ರಸವವೇದನೆಯಾಗಿ ತಿರುಪತಿಗೆ ಹೋಗಲು ಸಾಧ್ಯವಿಲ್ಲವಾದಾಗ, ಆಕೆಯ ಕನಸಿನಲ್ಲಿ ದೇವರು ಪ್ರತ್ಯಕ್ಷಳಾಗಿ, ನೀನು ತಲೆ ಇಟ್ಟು ಮಲಗಿರುವ ಸ್ಥಳದಲ್ಲಿ"ಕೂರ್ಮ" (ಆಮೆ) ರರೂಪದಲ್ಲಿ ಉದ್ಭವ ಮೂರ್ತಿಯಾಗಿ ನಾನಿದ್ದೇನೆ, ಇದೇ ಸ್ಥಳದಲ್ಲಿ ಸೇವಾದಿಗಳನ್ನು ನಡೆಸು, ನಿನಗೆ ತಿರುಪತಿಗೆ ಹೋದ ಪುಣ್ಯ ಫಲ ಪ್ರಾಪ್ತಿಯಾಗುತ್ತದೆ ಎಂದು ಕನಸ್ಸಿನಲ್ಲಿ ಹೇಳಿತು ಆಗ ಯಾತ್ರಾತ್ರಿಗಳು ಈ ಗ್ರಾಮದ ಗೌಡರು ಮತ್ತು ಗ್ರಾಮಸ್ಥರಿಗೆ ಈ ವಿಷಯವನ್ನು ತಿಳಿಸಿ ಪೂಜಾ ಕೈಂಕರ್ಯಗಳನ್ನು ಮಾಡಿ ತಮ್ಮ ಊರಿಗೆ ವಾಪಸ್ ಹೋದರು ಗ್ರಾಮಸ್ಥರು ಈ ಕೂರ್ಮವತಾರದ ಉದ್ಭವ ಮೂರ್ತಿಗೆ ಕಲ್ಲು ಮಂಟಪವನ್ನು ನಿರ್ಮಿಸಿ ಪೂಜಾ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು, ಇತ್ತೀಚಿಗೆ ಗ್ರಾಮಸ್ಥರು ಹಾಗೂ ಭಕ್ತರ ಸಹಕಾರದಿಂದ ಹೊಸದಾಗಿ ಭವ್ಯವಾದ ದೇವಸ್ಥಾನವನ್ನು ಕಟ್ಟಿಸಿ, ಈ ಗ್ರಾಮದ ತಿಮ್ಮಮ್ಮಳೆಂಬ ಬ್ರಾಹ್ಮಣ ಕುಟುಂಬದವರ ಕಾಲಾನಂತರ ಬಾಗೀರಥಮ್ಮನವರ ಮಕ್ಕಳು ತೇರುಮಲ್ಲಪ್ಪನವರ ವಂಶಸ್ಥರು ಧರ್ಮದರ್ಶಿಗಳಾಗಿ ನಿಂತು ಪ್ರತಿದಿನಸ್ವಾಮಿಗೆ ಪೂಜಾದಿಗಳನ್ನು ನಡೆಸುತ್ತಿದ್ದಾರೆ.

**ಜಾತ್ರಾ ಮಹೋತ್ಸವ:**

ಕಾಳಾಪುರದ ಶ್ರೀ ಲಕ್ಷ್ಮಿ ರಂಗನಾಥಸ್ವಾಮಿಯ ಜಾತ್ರಾ ಮಹೋತ್ಸವವು ಪ್ರತಿ ವರ್ಷ ಸುಗ್ಗಿಯ ಕಾಲದ ಚೈತ್ರ ಮಾಸದ ಹೋಳಿ ಹುಣ್ಣಿಮೆಯ ಶುಭ ದಿನದಿಂದ 5 ದಿವಸಗಳ ಕಾಲ ಜಾತ್ರೆ ನಡೆಯುತ್ತದೆ, ಮೊದಲನೇ ದಿನದಂದು ಬೆಳಿಗ್ಗೆ ಸ್ವಾಮಿಗೆ ಪಂಚಾಮೃತ ಅಭಿಷೇಕ ಹಾಗೂ ಅನ್ನಸಂತರ್ಪಣೆ ನಡೆಯುತ್ತದೆ ಸಾಯಕಾಲ ಸ್ವಾಮಿಯ

ಉತ್ಸವ ಮೂರ್ತಿಯನ್ನು ಮಂಗಳ ವಾದ್ಯಗಳೊಂದಿಗೆ ಮೆರವಣಿಗೆಯಲ್ಲಿ ಊರಿನ ಅರಳಿಕಟ್ಟೆಯ ಹತ್ತಿರ ಇರುವ ಹುತ್ತಕ್ಕೆ ಪೂಜೆ ಸಲ್ಲಿಸಿ, "ಹುತ್ತದ ಮಣ್ಣನ್ನು"ಶೇಖರಣೆ ಮಾಡಿಕೊಂಡು, ಕುಂಬಾರನ ಮನೆಯಲ್ಲಿ ಹರಣಿಗೆ ಪೂಜೆ ಮಾಡಿ, ಅವರ ಮನೆಯಿಂದ "ದೀಪ, ಮಡಿಕೆ ಹಾಗೂ ಮುಚ್ಚಳವನ್ನು" ಪಡೆದುಕೊಂಡು, ಕೊನೆಯದಾಗಿ ಅಕ್ಕಸಾಲಿಗರ ಮನೆಗೆ ಹೋಗಿ ಗರುಡ ದ್ವಜ ಪಟಕ್ಕೆ ಪೂಜೆ ಮಾಡಿ " ಗರುಡ ದ್ವಜ"ವನ್ನು ಪಡೆದುಕೊಂಡು ದೇವಸ್ಥಾನಕ್ಕೆ ಮೆರವಣಿಗೆಯಲ್ಲಿ ಬಂದು "ಗರುಡ ದ್ವಜ ಆರೋಹಣ" ಕಾರ್ಯಕ್ರಮವನ್ನು ನೇರವೇರಿಸುವರು ನಂತರ ಯಾಗ ಶಾಲಾ ಪ್ರವೇಶಮಾಡಿ ಹುತ್ತದ ಮಣ್ಣಿಗೆ ಗೊಬ್ಬರವವನ್ನು ಮಿಶ್ರಣ ಮಾಡಿ 9 ಮುಚ್ಚಳಗಳಲ್ಲಿ ನವದಾನ್ಯಗಳನ್ನು ಹಾಕಿ ಮೊಳಕೆ ಬರುವವರೆವಿಗೂ ನೀರು ಹಾಕುವರು, ಈ ಸೇವೆಗೆ "ಅಂಕುರಾರ್ಪಣೆ" ಸೇವೆ ಎನ್ನುತ್ತಾರೆ.

2 ನೇ ದಿನ ಬೆಳಿಗ್ಗೆ ಸ್ವಾಮಿಗೆ ಪಂಚಾಮೃತ ಅಭಿಷೇಕ ಹಾಗೂ ಅನ್ನಸಂತರ್ಪಣೆ ಮಾಡುತ್ತಾರೆ ಸಾಯಂಕಾಲ ಶ್ರೀ ಲಕ್ಷ್ಮಿ ರಂಗನಾಥಸ್ವಾಮಿ ಉತ್ಸವವನ್ನು ಸೇವೆಕರ್ತರುಗಳಾದ ವೇಶ್ಯರ ಮನೆಯಲ್ಲಿ ಪೂಜೆ, ಅಕ್ಕಸಾಲಿಗರ ಮನೆಯಲ್ಲಿ, ಪೂಜೆ, ಗೌಡರ ಮನೆಯಲ್ಲಿ ಪೂಜೆ ಹಾಗೂ ಈ ಜಾತ್ರೆಯ ಉಸ್ತುವಾರಿ ಪಣ್ಣಿಗಾರರ ಮನೆಯಲ್ಲಿ ಪೂಜೆ ಮಾಡಿಕೊಂಡು ದೇವಸ್ಥಾನಕ್ಕೆ ಬಂದು ಶಾಸ್ತ್ರೋಕ್ತವಾಗಿ " ಶ್ರೀ ದೇವಿ–ಭೂದೇವಿ ಸಮೇತ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿಯ ಕಲ್ಯಾಣೊತ್ಸವ"ವನ್ನು ನೆರವೇರಿಸುತ್ತಾರೆ. 3ನೇ ದಿನ ಬ್ರಹ್ಮ ರಥೋತ್ಸವದ ದಿನ ಬೆಳಿಗ್ಗೆಯಿಂದಲೇ ಎಲ್ಲಾ ಭಕ್ತರು ಜಾತ್ರೆಗೆ ಆಗಮಿಸಿ, ಭಕ್ತರು ತಾವು ಬ್ರಹ್ಮರಥಕ್ಕೆ ತಾವು ಹರಕೆ ಮಾಡಿಕೊಂಡ ರೀತಿಯಲ್ಲೆ ರಥದ ಎತ್ತರದಷ್ಟು ಹೂವಿನ ಹಾರಗಳನ್ನು ಹಾಕಿ ರಥವನ್ನು

ಸಿಂಗಾರಗೊಳಿಸುತ್ತಾರೆ ಮದ್ಯಾನ್ಹ 12 ಗಂಟೆಗೆ ಪಟೇಲ್ ರಂಗೇಗೌಡರ ಮನೆಯಿಂದ ಪೂರ್ಣ ಕುಂಬ ಕಳಸ ಹಾಗೂ ಗ್ರಾಮದ ಹೆಣ್ಣು ಮಕ್ಕಳಿಂದ ಆರತಿ ಉತ್ಸವದೊಂದಿಗೆ ದೇವಸ್ಥಾನಕ್ಕೆ ಆಗಮಿಸುತ್ತಾರೆ. ಆಗ ಚಿನ್ನದ ಒಡವೆಗಳಿಂದ ಸಿಂಗಾರಗೊಂಡ ಶ್ರೀ

ಲಕ್ಷ್ಮಿರಂಗನಾಥಸ್ವಾಮಿ ಉತ್ಸವ ಮೂರ್ತಿಯನ್ನು ಗರುಡ, ಆನೆ, ಕುದುರೆಗಳ ಕಂಚಿನ ಮೂರ್ತಿಗಳನ್ನು ಮೆರವಣಿಗೆಯಲ್ಲಿ ತಂದು ರಥದಲ್ಲಿ ಪ್ರತಿಸ್ತಾಪಿಸುತ್ತಾರೆ.


ಈ ಶುಭ ಸಮಯಲ್ಲಿ ನೀಲಾಕಾಶದಲ್ಲಿ ಬ್ರಹ್ಮರಥಕ್ಕೆ ಗರುಡ ಮೂರು ಸುತ್ತು ಪ್ರದಕ್ಷಿಣೆ ಹಾಕಿದ ಮೇಲೆ ಭಕ್ತರು ಬಾವ ಪರವಶರಾಗಿ ಹರ್ಷೋದ್ಗಾರಗಳಿಂದ ರಥವನ್ನು ಎಳೆಯುತ್ತಾ ದವನ, ಬಾಳೆಹಣ್ಣುಗಳನ್ನು ತೇರಿಗೆ ಎಸೆಯುತ್ತಾ ತಮ್ಮ ಹರಕೆಯನ್ನು ತೀರಿಸುತ್ತಾರೆ ಈ ಜಾತ್ರೆಗೆ ಬಂದ ಭಕ್ತಾದಿಗಳಲ್ಲಿ ಸ್ಥಿತಿವಂತರು ಹಾಗೂ ದಾನಿಗಳು ಪಾನಕ, ಕೋಸಂಬರಿ ಮತ್ತು ಅನ್ನಸಂತರ್ಪಣೆ ಮಾಡುತ್ತಾರೆ ಅಂದು ರಾತ್ರಿ ಹೋಳಿಹುಣ್ಣಿಮೆಯ ಬೆಳದಿಂಗಳಲ್ಲಿ ವಿದ್ಯುತ್ ದೀಪಗಳಿಂದ ಅಲಂಕೃತವಾದ "ಹೂವಿನ ಪಲ್ಲಕ್ಕಿ" ಉತ್ಸವ ಮಾಡುತ್ತಾರೆ ರಾತ್ರಿಯೆಲ್ಲಾ ಭಕ್ತಾದಿಗಳ ಮನರಂಜನೆಗೆ ಗ್ರಾಮಸ್ಥರಿಂದ "ಪೌರಾಣಿಕ ನಾಟಕ" ಪ್ರದರ್ಶನವನ್ನು ಏರ್ಪಡಿಸುತ್ತಾರೆ.

4 ನೇ ದಿನ ಭಕ್ತಾದಿಗಳಿಂದ ಪಂಚಾಮೃತ ಅಭಿಷೇಕ ಹಾಗೂ ಅನ್ನಸಂತರ್ಪಣೆ ಮದ್ಯಾಹ್ನ :ಉಂಡೆ–ಮಂಡೆ" ಮುಡಿ ತೆಗೆಯುವ ಕಾರ್ಯಕ್ರಮ ಅಂದರೆ ಹರಕೆ ಮಾಡಿಕೊಂಡು ವಕ್ಕಲುಗಳು, ನೆಂಟರಿಷ್ಟರುಗಳು ಬಾಗವಹಿಸುತ್ತಾರೆ ಸಂಜೆ ಸ್ವಾಮಿಗೆ "ಶಯನೋತ್ಸವ ಸೇವೆ"ಯನ್ನು ಮಾಡುತ್ತಾರೆ ರಾತ್ರಿ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿಗೆ ಪುಷ್ಪಾಲಂಕಾರ ಮಾಡಿ ಊರಿನ ರಾಜ ಬೀದಿಗಳಲ್ಲಿ ಮೆರವಣಿಗೆ ಮಾಡುತ್ತಾರೆ.

5ನೇ ದಿನ ಕೊನೆಯ ದಿನ ಉತ್ಸವ ಮೂರ್ತಿಗೆ "ಅಭವೃತ ಸ್ನಾನ" ಎಂದರೆ ತೀರ್ಥಸ್ನಾನ ಹಾಗೂ ಸ್ವಾಮಿಯ ಮೂಲ ವಿಗ್ರಹಕ್ಕೆ ಪಂಚಾಮೃತ ಅಭಿಷೇಕ ಮಾಡಿಸಿ ಭವ್ಯವಾಗಿ ಚಿನ್ನದ ಆಭರಣಗಳಿಂದ, ಹೂವುಗಳಿಂದ ಅಲಂಕಾರಮಾಡಿ ಮಹಾಮಂಗಳಾರತಿ ಮಾಡುತ್ತಾರೆ ನಂತರ ಭಕ್ತಾದಿಗಳಿಂದ ಅನ್ನಸಂತರ್ಪಣೆ ನಡೆಯುತ್ತದೆ, 5 ದಿವಸಗಳ ಕಾಲ ಪಂಚರಾಗಾತ್ರಮ ಆಗಮಿಕರು, ಪಂಡಿತರು ಆಗಮಿಸಿ ಹಗಲು ರಾತ್ರಿ, ಪೂಜೆ–ಪುನಸ್ಕಾರ, ಹೋಮಹವನ ಮಾಡಿದವರಿಗೆ ಸಂಬಾವಣೆ ಮತ್ತು ವಸ್ತ್ರದಾನ ಮಾಡಿ ಕಳಿಸಿಕೊಡುತ್ತಾರೆ, ಮೊದಲನೆಯ ದಿನ ಯಾಗಶಾಲೆಯ "ಅಂಕುರಾರ್ಪಣ" ಸೇವೆಯಲ್ಲಿ ಬಿತ್ತನೆ ಮಾಡಿದ ನವದಾನ್ಯಗಳಲ್ಲಿ ಹೆಚ್ಚು ಮೊಳಕೆ ಬಂದಿರುವುದನ್ನು ಖಾತ್ರಿಮಾಡಿಕೊಂಡು ದೇವಸ್ಥಾನದ ಅರ್ಚಕರು ಸ್ವಾಮಿಯ

ಸನ್ನಿದಿಯಲ್ಲಿ ಘೋಷಣೆ ಮಾಡುವರು ಇಲ್ಲಿ ನೆರದಿರುವ ರೈತ ಬಾಂದವರುಗಳು ಹೆಚ್ಚು ಮೊಳಕೆ ಬಂದಿರುವ ದಾನ್ಯಗಳ ಬಿತ್ತನೆ ಬೀಜಗಳನ್ನು ಕಾಳಾಪುರ ಗ್ರಾಮದ ಪ್ರಗತಿ ಪರ ರೈತರಿಯದ ಕೊಂಡುಕೊಂಡು ತಮ್ಮ ಹೊಲಗಳಲ್ಲಿ ಬಿತ್ತನೆ ಮಾಡಲು ಆಣಿಯಾಗುತ್ತಾರೆ

ಈ ಶುಭ ಕಾರ್ಯವನ್ನು ಕಾಳಪುರದ ಗ್ರಾಮದ ಧರ್ಮದರ್ಶಿಗಳು, ಗೌಡರು ಯಜಮಾನರು, ಪಣ್ಣಿಗಾರರು, ರೈತರು, ಅರ್ಚಕರು, ವಕ್ಕಲುಗಳು, ಕೈವಾಡದವರು, ಗ್ರಾಮಸ್ಥರ ಹಾಗೂ ಅಕ್ಕಪಕ್ಕದ ಗ್ರಾಮಗಳ ಸಕಲ ಭಕ್ತಾದಿಗಳು ಎಲ್ಲರೂ ಸೇರಿ ಶ್ರೀ ಲಕ್ಷ್ಮಿರಂಗನಾಥಸ್ವಾಮಿಯ ಬ್ರಹ್ಮರಥೋತ್ಸವಕ್ಕೆ ತಮ್ಮ ತನು,ಮನ, ಧನವನ್ನು ಅರ್ಪಿಸಿ, ಸಂತೋಷದಿಂದ ಬಾಗವಹಿಸಿ ಜಾತ್ರೆಯನ್ನು ಯಶಸ್ವಿಗೊಳಿಸುತ್ತಾರೆ .



# ಶ್ರೀ ಮರಡಿರಂಗನಾಥಸ್ವಾಮಿ ಧಾರ್ಮಿಕ ದತ್ತಿ ಸಂಸ್ಥೆ (ರಿ)

## ಶ್ರೀ ಮರಡಿ ರಂಗನಾಥಸ್ವಾಮಿಯವರ ಜಾತ್ರಾ ಮಹೋತ್ಸವದ ಆಹ್ವಾನ ಪತ್ರಿಕೆ.

**ಶ್ರೀಕ್ಷೇತ್ರ ಮರಡಿಗುಡ್ಡ, ಹುಯಿಲ್‌ದೊರೆ, ರಂಗನಾಥಪುರ, [illegible] ಹೋ॥ ಶಿರಾ ತಾ॥ ತುಮಕೂರು ಜಿಲ್ಲೆ, ಕರ್ನಾಟಕ ರಾಜ್ಯ**

[illegible] ವಿನಂತಿ.

ಶ್ರೀಮತ್ ಮರಡಿಕ್ಷೇತ್ರವು ಪುರಾಣ ಪ್ರಸಿದ್ಧವಾದ ಶ್ರೀ ಮರಡಿರಂಗನಾಥಸ್ವಾಮಿಯವರ ಕಲ್ಯಾಣೋತ್ಸವವು ಪ್ರತಿವರ್ಷದ ಪದ್ಧತಿಯಂತೆ, ಸ್ವಸ್ತಿಶ್ರೀ ವಿಳಂಬಿನಾಮ ಸಂವತ್ಸರದ ಚೈತ್ರ ಮಾಸ ಕೃಷ್ಣಪಕ್ಷ ಪಾಡ್ಯಮಿ ಚಿತ್ತಾ ನಕ್ಷತ್ರ **ದಿನಾಂಕ 1-4-2018 ರ ಭಾನುವಾರದಿಂದ ದಿನಾಂಕ 7-4-2018 ರ ಶನಿವಾರದವರೆಗೆ** ಶ್ರೀಮತ್ ಪಾಂಚರಾತ್ರ ಆಗಮೋಕ್ತಪ್ರಕಾರ ಈ ಕೆಳಗೆ ನಮೂದಿಸಿರುವ ಉತ್ಸವಗಳು ನಡೆಯುವುದರಿಂದ ಭಗವದ್ಭಕ್ತರು ಸಕುಟುಂಬ ಪರಿವಾರದೊಡನೆ ಶ್ರೀ ಕ್ಷೇತ್ರಕ್ಕೆ ದಯಮಾಡಿಸಿ, ಸಾಲಿಗ್ರಾಮ ರೂಪದಲ್ಲಿ ಸ್ವಯಂ ಉದ್ಭವವಾಗಿರುವ ಹಾಗೂ ಪಂಚಾಯುಧಗಳಲ್ಲಿ ಒಂದಾದ ಧನಸ್ಸಿನ ರೂಪದಲ್ಲಿ ಸ್ವಯಂ ನೆಲೆಸಿರುವ ಶ್ರೀ ಸ್ವಾಮಿಯವರ ದರ್ಶನದಿಂದ ನೇತ್ರಾನಂದಹೊಂದಿ, ತೀರ್ಥಪ್ರಸಾದ ಸ್ವೀಕರಿಸಿ ಕೃತಾರ್ಥರಾಗಬೇಕಾಗಿ ಕೋರಿದೆ.

### ಕಾರ್ಯಕ್ರಮಗಳು

| | |
|---|---|
| 01-04-2018<br>ಭಾನುವಾರ | ಬೆಳಗ್ಗೆ 10-55 ರಿಂದ 11-55 ಗಂಟೆಯೊಳಗೆ ಸಲ್ಲುವ ಶುಭ ಮಿಥುನ ಲಗ್ನ ಪುಷ್ಕರಾಂಶದಲ್ಲಿ<br>**ಶ್ರೀ ಮರಡಿ ರಂಗನಾಥಸ್ವಾಮಿಯವರ ಕಲ್ಯಾಣೋತ್ಸವ ಕಳಸ ಸ್ಥಾಪನೆ, ಪಾನಕಪೂಜೆ, ಅನ್ನಸಂತರ್ಪಣೆ : ದೇವಸ್ಥಾನದ ವತಿಯಿಂದ.**<br>ಉತ್ಸವ : ರಾತ್ರಿ ಬುಲಿಯೂರು ಗ್ರಾಮದ ಗೌಡರುಗಳು |
| 02-04-2018<br>ಸೋಮವಾರ | ಬೆಳಗ್ಗೆ 12-15 ರಿಂದ 1-05 ಗಂಟೆಯೊಳಗೆ ಸಲ್ಲುವ ಶುಭ ಮಿಥುನ ಲಗ್ನ ಪುಷ್ಕರಾಂಶದಲ್ಲಿ<br>**ಶ್ರೀ ಸ್ವಾಮಿಯವರ ಬ್ರಹ್ಮರಥೋತ್ಸವ, ಪಾನಕಪೂಜೆ ಹಾಗೂ ಅನ್ನಸಂತರ್ಪಣೆ :**<br>ಕಳ್ಳಂಬೆಳ್ಳ ಲಕ್ಕಜ್ಜಯವರು, [illegible] ಅಣ್ಣ ತಮ್ಮಂದಿರು, (ಬೆಂಗಳೂರು) ಹಾಗೂ ದಿವಂಗತ ವೈ.ಸಿ. ರಾಜಣ್ಣ, ವೈ.ಸಿ. ಪುಟ್ಟರಾಜು, ವೈ.ಸಿ. ರಂಗಸ್ವಾಮಿ ಮತ್ತು ಮಕ್ಕಳು ಹಾಗೂ ಕಳ್ಳಂಬೆಳ್ಳದ ಡಾ॥ ರಾಮಣ್ಣನವರ ಮಕ್ಕಳು. |
| 03-04-2018<br>[illegible] | **ಉತ್ಸವ :** ಕಳ್ಳಂಬೆಳ್ಳದ ಮಹಡಿಮನೆ ಮಲ್ಲೇಗೌಡರ ಮಗ ಚಿಕ್ಕಮಲ್ಲೇಗೌಡರು ಮತ್ತು ಅಣ್ಣ ತಮ್ಮಂದಿರು, ರಂಗನಾಥಪುರದ ಗೌಡರ ವಂಶಸ್ಥರು, ರಂಗಜ್ಜನ ವಂಶಸ್ಥರು, ಸಣ್ಣರಂಗಜ್ಜನವರ ವಂಶಸ್ಥರು, ಮಲ್ಲಶೆಟ್ಟಿಹಳ್ಳಿ ಅಣ್ಣ ತಮ್ಮಂದಿರು. ಹಾಗೂ ಶಿವನಗೆರೆ ಅಣ್ಣ ತಮ್ಮಂದಿರಿಂದ ಮತ್ತು ಗ್ರಾಮಸ್ಥರಿಂದ **ಅನ್ನಸಂತರ್ಪಣೆ** |
| 04-04-2018<br>ಬುಧವಾರ | **ಉತ್ಸವ, ಅನ್ನಸಂತರ್ಪಣೆ :** ಹುಯಿಲ್‌ದೊರೆ ಮತ್ತು ಕಂಬದಹಳ್ಳಿ ಅಣ್ಣ ತಮ್ಮಂದಿರು ಮತ್ತು ಗ್ರಾಮಸ್ಥರು. ಕಲ್ಲಾರದಹಳ್ಳಿ ಅಣ್ಣ ತಮ್ಮಂದಿರು ಮತ್ತು ಗ್ರಾಮಸ್ಥರು. |
| 05-04-2018<br>ಗುರುವಾರ | **ಗರುಡೋತ್ಸವ :** ಕಳ್ಳಂಬೆಳ್ಳದ ಶ್ರೀಮತಿ ದ್ಯಾವಮ್ಮನವರ ಮೊಮ್ಮಕ್ಕಳು, **ಪಾನಕಪೂಜೆ** ಬೆಂಗಳೂರಿನ (ಹೆಜ್ಜಾಲದ) ಹಾಲಪ್ಪನವರ ಮಕ್ಕಳು |
| 06-04-2018<br>ಶುಕ್ರವಾರ | **ಮುಡಿ ತೆಗೆಯುವುದು (ಉಂಡೆ - ಮಂಡೆ)** |
| 07-04-2018<br>ಶನಿವಾರ | **ವಸಂತೋತ್ಸವ :** ಬಾಣಗೆರೆ, (ಮೊದಲಿನ ಚಿಕ್ಕಬಾಣಗೆರೆ) ಕುರುಬರರಾಮನಹಳ್ಳಿ ಮತ್ತು ಬಸವನಹಳ್ಳಿ ಗ್ರಾಮದ ಅಣ್ಣ ತಮ್ಮಂದಿರಿಂದ **ಅನ್ನಸಂತರ್ಪಣೆ :** |

ಸೂಚನೆ : ಮುಂದಿನ ದಿನಗಳಲ್ಲಿ ದೇವಸ್ಥಾನಕ್ಕೆ ಪ್ರಾಕಾರ ಹಾಗೂ ರಾಜಗೋಪುರದ ನಕ್ಷೆ ತಯಾರಿಸಿದ್ದು, ಇದಕ್ಕಾಗಿ ನಿಮ್ಮ ಸಹಕಾರ-ಸಲಹೆ ಅಗತ್ಯವಿರುತ್ತದೆ. ಅಭಿವೃದ್ಧಿ ಕಾರ್ಯಕ್ಕೆ ತಮ್ಮ ತನು, ಮನ, ಧನ ಸಹಾಯ ನೀಡಬೇಕೆಂದು ವಿನಂತಿಸಿಕೊಳ್ಳುತ್ತೇವೆ.

ಅಂಕೌಂಟ್ ನಂ. : ಕೆನರಾ ಬ್ಯಾಂಕ್, ಕಳ್ಳಂಬೆಳ್ಳ ಶಾಖೆ, **0587101035486, 0678101032618**

> ವಿಶೇಷ ಸೂಚನೆ : ಜಾತ್ರಾ ದಿನಗಳಲ್ಲಿ ಅನ್ನದಾನ ವ್ಯವಸ್ಥೆಯನ್ನು ದೇವಸ್ಥಾನದ ವತಿಯಿಂದ ಏರ್ಪಡಿಸಲು ತೀರ್ಮಾನಿಸಲಾಗಿದ್ದು, ಭಕ್ತಾದಿಗಳು ಸಹಕರಿಸಬೇಕಾಗಿ ಕೋರಲಾಗಿದೆ.

ಎಲ್ಲಾ ಅಣ್ಣ ತಮ್ಮಂದಿರು ಮತ್ತು ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಶ್ರೀ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

**ಜಾತ್ರೆಗೆ ಬಸ್ಸುಗಳ ಸೌಕರ್ಯ ಇರುತ್ತದೆ.**

**ಸರ್ವರಿಗೂ ಆದರದ ಸುಸ್ವಾಗತ**

**ಧರ್ಮದರ್ಶಿಗಳು ಮತ್ತು ಆಡಳಿತ ಮಂಡಳಿ**
ಶ್ರೀ ಮರಡಿರಂಗನಾಥಸ್ವಾಮಿ ಧಾರ್ಮಿಕ ದತ್ತಿ ಸಂಸ್ಥೆ (ರಿ.),
ಹುಯಿಲ್‌ದೊರೆ, ರಂಗನಾಥಪುರ, ಶಿರಾ ತಾ॥

ಮಾಹಿತಿಗಾಗಿ : 9980759282, 8722608939, 8549093864, 9900203918, 8453258255, 9448722502, 9141387011, 9945611117

# 9. ಮರಡಿಗುಡ್ಡದ ಶ್ರೀ ರಂಗನಾಥಸ್ವಾಮಿ ಜಾತ್ರಾ ಮಹೋತ್ಸವ

## ಪೀಠಿಕೆ

ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನ ಶಿರಾ ಬುಕ್ಕಾಪಟ್ಟಣ ರಸ್ತೆಯಲ್ಲಿ ಶಿರಾ ಪಟ್ಟಣದಿಂದ 18 ಕಿ.ಮೀ ದೂರದಲ್ಲೂ, ಹಾಗೆಯೇ ನಮ್ಮೂರು ಚಿಕ್ಕನಹಳ್ಳಿಯ 4 ನೇ ರಾಷ್ಟ್ರೀಯ ಹೆದ್ದಾರಿಯ  ಪುನಾ–ಬೆಂಗಳೂರು ರಸತೆಯ ಪಶ್ಚಿಮ ದಿಕ್ಕಿನಲ್ಲಿ 15 ಕಿ.ಮೀ ದೂರದ ರಂಗನಾಥಪುರದ ಮರಡ್ಡಿಗುಡ್ಡದ ಮೇಲೆ ಶ್ರೀರಂಗನಾಥಸ್ವಾಮಿ ದೇವಾಲಯವು ನೆಲೆಗೊಂಡಿದೆ. ಶ್ರೀ ಕ್ಷೇತ್ರವು ಅತ್ಯಂತಂತ ರಮಣೀಯ ಸ್ಥಳದಲ್ಲಿದ್ದು, ನಮ್ಮ ರಾಜ್ಯದ, ಹಾಗೂ ಹೊರ ರಾಜ್ಯಗಳ ಎಲ್ಲಾ ಭಕ್ತ ವರ್ಗದವರನ್ನು ಗೌರವಗಳಿಂದ, ಆಧ್ಯಾತ್ಮಿಕ ನೆಲೆಯಲ್ಲಿ ಭಕ್ತರಿಗೆ ಶಾಂತಿ, ನೆಮ್ಮದಿ ನೀಡುವ ತಾಣವಾಗಿ, ಐತಿಹಾಸಿಕ ಹಿನ್ನಲೆಯನ್ನು ಹೊಂದಿರುವ ಈ ದೇವಾಯಲಯವು ಅತ್ಯಂತ ಪ್ರಾವಿತ್ಯತೆಯನ್ನು ಮತು ಪ್ರಾಚೀನತೆಯನ್ನು ಕಾಪಾಡಿಕೊಂಡು ಇಂದಿಗೂ ಇದರ ಬಗ್ಗೆ ಐತಿಹಾಸವನ್ನು ಶ್ರೀ ಸಾಮಾನ್ಯರಿಗೂ ತಲುಪಿಸುತ್ತಿರುವುದು ಅತ್ಯಂತ ಶ್ಲಾಘನೀಯ! ಈ ಗುಡ್ಡದ ಮೇಲೆ ಯತ್ತೇಚ್ಛವಾಗಿ ಮರಡಿ ಮರಗಳು ಬೆಳೆದಿದ್ದರಿಂದ "ಮರಡಿಗುಡ್ಡ" ಎಂಬ ಹೆಸರು ಇಂದಿಗೂ ಪ್ರಚಲಿತವಾಗಿದೆ ಎಂದು ಈ ಗ್ರಾಮದ ಮುಂಖಡರಾದ ರಾಮಣ್ಣನವರು ತಿಳಿಸಿರುತ್ತಾರೆ. ಈ ಗುಡ್ಡದ ಸುತ್ತಲೂ ಅನೇಕ ವಿಧವಾದ ಔಷದಿ ಸಸ್ಯಗಳು ಬೆಳೆದಿದ್ದು ಅನೇಕ ಕೆರೆಕುಂಟೆಗಳಿಂದ ಕೂಡಿವ, ಗದ್ದೆ ತೋಟಗಳಿಂದ ಆವೃತವಾದ ಈ ಪ್ರದೇಶ ನೋಡುಗರ ಮನಸ್ಸಿಗೆ ಅತ್ಯಂತ ರಮಣೀಯವಾಗಿ ಗೋಚರಿಸುತ್ತಾ, ಬೇಸಿಗೆ ಕಾಲದಲ್ಲಿ ತಂಪಾದ ವಾತಾವರಣದಿಂದ ಕೂಡಿರುವುದರಿಂದ ಮರಡ್ಡಿಗುಡ್ಡವು ಸಹ ನಂದಿ ಬೆಟ್ಟದ ರೀತಿಯಲ್ಲಿಯೇ ಬೇಸಿಗೆ ಕಾಲದ ಪ್ರವಾಸಿತಾಣವಾಗಿ ಪರಿಣಮಿಸಿದೆ.

ಪಂಚಕಳಸದ ರೀತಿಯಲ್ಲಿ ಹೋಲುವ ಮತ್ತು ಅನೇಕ ಖನಿಜ ಸಂಪತ್ತನ್ನು ಹೊಂದಿರುವ ಈ ಗುಡ್ಡವು ಔಷದಿ ಸಸ್ಯಗಳ ಗಿಡ, ಮೂಲಿಕೆಗಳ ಕೇಂದ್ರವೂ ಆಗಿದೆ. ದೂರದ ಊರುಗಳಿಂದ ಆಯುರ್ವೇದ ಪಂಡಿತರುಗಳು ಇಲ್ಲಿಗೆ ಬಂದು, ಇಲ್ಲಿ

ಬೆಳೆದಿರುವ ಅನೇಕ ಗಿಡ ಮೂಲಿಕೆಗಳಿಂದ ಔಷದಿಗಳನ್ನು ತಯಾರಿಸಿ ಜನಸಾಮಾನ್ಯರ ಹಾಗೂ ಮೂಕಪ್ರಾಣಿಗಳ ವಿವದ ರೋಗಗಳನ್ನು ಗುಣಪಡಿಸುತ್ತಿದ್ದಾರೆ.

**ಶ್ರೀ ರಂಗನಾಥ ಸ್ವಾಮಿ ನೆಲೆಗೊಂಡ ಹಿನ್ನೆಲೆ**

13 ನೇ ಶತಮಾನದಲ್ಲಿ ಹರಳಪ್ಪ ಶೆಟ್ಟಿ, ಮತ್ತು ಶಿವಪ್ಪ ಶೆಟ್ಟಿ ಎಂಬ ಚಿನ್ನ, ಬೆಳ್ಳಿ ವ್ಯಾಪಾರಿಗಳು ವಿಜಯನಗರದ ಹಂಪಿ ಕ್ಷೇತ್ರದ ಪಂಪಾನದಿ ತೀರದಿಂದ ಒಂದು ಕಲ್ಲು ಅಥವಾ ಸಾಲಿಗ್ರಾಮವು ಅವರ ಚೀಲದಲ್ಲಿ ಬಂದಿತ್ತು. ಇವರು ಮಾರ್ಗ ಮಧ್ಯೆ ರಾತ್ರಿಯಾಗುತ್ತದಂತೆ ತಂಗುವಸ್ಥಳದಲ್ಲಿ ತಮ್ಮ ಚೀಲದಲ್ಲಿ ಬಂದಿದ್ದ ಆ ಕಲ್ಲನ್ನು ಖಾರಾ ಅರೆಯುವುದಕ್ಕೆ ಮತ್ತು

ಕೆಲವು ವಸ್ತುಗಳನ್ನು ಪುಡಿ ಮಾಡುವುದಕ್ಕೆ ಬಳಸುತ್ತಿದ್ದರು. ಬಳಸಿದ ನಂತರ ಆ ಕಲ್ಲನ್ನು ಅಲ್ಲೇ ಎಸೆದು ಮುಂದಿನ ಊರಿಗೆ ವ್ಯಾಪಾರ ಮಾಡಲು ಹೋಗುತ್ತಿದ್ದರು. ಅಂದು ವ್ಯಾಪಾರ ಮಾಡಿಕೊಂಡು ಮತ್ತೊಂದು ಊರಿನಲ್ಲಿ ರಾತ್ರಿ ತಂಗಿದ್ದಾಗ, ಅಡುಗೆ ಮಾಡಿಕೊಳ್ಳಲು ತಾವು ತಂದಿದ್ದ ಚೀಲಗಳಲ್ಲಿನ ಪಾತ್ರೆಗಳನ್ನು ನೋಡಿದಾಗ ಆ ಕಲ್ಲು ಮಾಮೂಲಿ ಚೀಲದಲ್ಲೇ ಇರುತ್ತಿತ್ತು. ಇದನ್ನು ನೋಡಿದ ವ್ಯಾಪಾರಿಗಳು, ಆಶ್ಚರ್ಯಗೊಂಡು ಕಲ್ಲನ್ನು ತಮ್ಮ ಜೊತೆಯಲ್ಲಿಯೇ ಮುಂದಿನ ಊರಿಗೆ ತೆಗೆದುಕೊಂಡು ಹೋಗುತ್ತಿದ್ದರು. ಹೀಗೆ ವ್ಯಾಪಾರಿಗಳು ಊರಿಂದ ಊರಿಗೆ ಹೊಗುವಾಗ ಈ ವ್ಯಾಪಾರಿಗಳು ಶಿರಾ ತಾಲ್ಲೂಕಿನ ರಂಗನಾಥಪುರದಲ್ಲಿ ಆ ರಾತ್ರಿ ತಂಗಿ, ಮಾರನೇ ದಿನ ಬೇರೊಂದು ಊರಿಗೆ ಪ್ರಯಾಣ ಬೆಳೆಸಿದರು. ಆದರೆ ಆಕಲ್ಲು ಇದೇ ಊರಿನಲ್ಲಿ ಉಳಿಯಿತು. ಈ ದೈವಸ್ವರೂಪಿಯಾದ ಸಾಲಿಗ್ರಾಮವೇ ರಂಗನಾಥ ಸ್ವಾಮಿಯಾಗಿ ಪ್ರತ್ಯಕ್ಷನಾಗಿ ನಿಜರೂಪ ತೋರಿ ಇಲ್ಲಿಯೇ ನೆಲಗೊಂಡನು ಎಂಬ ವಿಚಾರವನ್ನು ಲಕ್ಕಜ್ಜಿಯವರ ಕಾಮಣ್ಣನವರ ಹತ್ತಿರ ಇರುವ ಮೂಲ ದಾಖಲೆಗಳಿಂದ ತಿಳಿದು ಬರುತ್ತದೆ.

ಶ್ರೀ ರಂಗನಾಥಸ್ವಾಮಿಯ ಆದೇಶದಂತೆ ಈ ಪಂಚ ಕಳಸದ ಗುಡ್ಡದ ಮೇಲೆ ಸ್ವಾಮಿಯೇ ನೀಡಿದ ಹೂವು, ಅರಿಸಿನ ಕುಂಕುಮ ತೋರಿಸಿದ ಜಾಗದಲ್ಲಿಯೇ,

ದೇವಧಾರೆ ಮರದಡಿಯಲ್ಲಿ ಗುಡ್ಡದ ಉತ್ತರ ದಿಕ್ಕಿನಲ್ಲಿ ಪೂರ್ವ ಪಶ್ಚಿಮವಾಗಿ ಶ್ರೀ ಮರಡಿ ರಂಗನಾಥಸ್ವಾಮಿಯನ್ನು ಲಕ್ಷ್ಮೀ ಸಮೇತರಾಗಿ ಪ್ರತಿಷ್ಠಾಪಿಸಲಾಗಿದೆ. ಈ ದೇವಸ್ಥಾನದ ಮುಂಬಾಗದಲ್ಲಿ 18 ಅಡಿಗಳ ಎತ್ತರದ ಧ್ವಜ ಸ್ಥಂಭ ಪಕ್ಕದಲ್ಲಿ ಹಾಲೇಗೌಡನು ಕೈ ಮುಗಿದು ನಿಂತಿರುವ ವಿಗ್ರಹವಿದೆ. ಇನ್ನೊಂದು ಪಕ್ಕದಲ್ಲಿ ದಾಸಯ್ಯನ ಸಮಾದಿ ಇದೆ. ಈ ದೇವಸ್ಥಾನದ ವೈಶಿಷ್ಯವೇನೆಂದರೆ ಸೂರ್ಯೋದಯದ ಸಮಯದಲ್ಲಿ ಸೂರ್ಯನ ಹೊಂಬೆಳಕು ಶ್ರೀ ರಂಗನಾಥ ಸ್ವಾಮಿಯ ಪಾದ ಕಮಲಗಳ ಮೇಲೆ ಬೀಳುವಂತೆ ಶಿಲ್ಪಿಯೂ ಜಾಣ್ಮೆಯನ್ನು ತೋರಿದ್ದಾನೆ. ಅದೇ ರೀತಿ ಧ್ವಜಸ್ಥಂಬದ ಕೆಳಗೆ ಮಹಾದ್ವಾರದ ಕಡೆಗೆ ಭಕ್ತ ಆಂಜನೇಯನ ಚಿಕ್ಕ ಗುಡಿ ಇದ್ದು, ಇದರಲ್ಲಿ ವಾಲಿ-ಸುಗ್ರೀವರ ಚಿಕ್ಕ ವಿಗ್ರಹಗಳನ್ನು ಪ್ರತಿಸ್ಥಾಪಿಸಲಾಗಿದೆ ಧ್ವಜ ಸ್ಥಂಬದ ಹಿಂಬಾದಲ್ಲಿ ಎಂಟು ಅಡಿ ಎತ್ತರದ ದೀಪ ಸ್ಥಂಬವಿದೆ. ಹಾಗೂ ಪೂರ್ವ ಬಾಗದಲ್ಲಿ ಭಕ್ತರು ನೀಡಿರುವ ದೊಡ್ಡ ಕಂಚಿನ ಗಂಟೆ ಇದೆ ಗರ್ಭಗುಡಿ, ಸುಖನಾಸಿ, ನವರಂಗ, ಮುಖಮಂಟಪ ಹಾಗೂ ಗೋಪುರ ಎಂದು ಐದು ಬಾಗಗಳಾಗಿ ವಿಂಗಡಿಸಿ ಈ ದೇವಾಲಯವನ್ನು ಬಹಳ ಆಕರ್ಷಕವಾಗಿ ದ್ರಾವಿಡ ಶೈಲಿಯಲ್ಲಿ ನಿರ್ಮಿಸಲಾಗಿದೆ.

**ಪುರುಷವ್ವನ ಕೆರೆ:**

ಇನ್ನು ಮರಡಿಗುಡ್ಡದ ಪಶ್ಚಿಮ ದಿಕ್ಕಿಗೆ ಎಂತಹ ಬರಗಾಲ ಬಂದರೂ ಒಣಗದ -ಬತ್ತದ ಕೆರೆಯೇ "ಪುರುಷವ್ವನ ಕೆರೆ". ಸಾದ್ವೀಮಣೀಯೂ, ನ್ಯಾಯಪರಳೂ, ಸತ್ಯವಂತಳೂ, ವಿಶಾಲ ಹೃದಯದವಳಾಗಿ., ದಾನ ಗುಣಗಳನ್ನು ಹೊಂದಿ, ಅವಿವಾಹಿತೆಯಾಗಿ, ಬ್ರಹ್ಮ ಸೃಷ್ಟಿಯಲ್ಲಿ ಹೆಣ್ಣು ಆಕಾರದಲ್ಲಿ ಗಂಡು ರೂಪ ಹೊಂದಿರುವ "ಪುರುಷವ್ವ" ಎಂಬವಳು ಈ ಕೆರೆಯನ್ನು ಕಟ್ಟಿಸಿದ್ದಳು ಈಕೆಗೆ ಬಡಬಗ್ಗರೆಂದರೆ ಬಹಳ ಉದಾರಿಯಾಗಿ "ಚಿನ್ನದ ಅಮ್ಮ" ಎಂದೇ ಕರೆಯಲಾಗುತ್ತಿತ್ತು. ಇಂತಹ ಸಾಧ್ವಿಮಣಿಯನ್ನು ಒಮ್ಮೆ ಒಬ್ಬ ನೀಚ ಕುಡಿದು ಅವಾಚ್ಯ ಶಬ್ದಗಳಿಂದಹಿನಾಮಾನವಾಗಿ ನಿಂದಿಸಿದ ಪರಿಣಾಮ ಮನನೊಂದ ಈ ಪುಣ್ಯಪುರುಷೆ ತಾನು ಕಟ್ಟಿಸಿದ್ದ ಕೆರೆಯ ಅಂಗಳದಲ್ಲೇ ಶ್ರೀಗಂಧದ ಅಗ್ನಿ ಕುಂಡವನ್ನೇ ಸೃಷ್ಟಿಮಾಡಿಕೊಂಡು ಅದರಲ್ಲಿ ಹಾರಿ ಪ್ರಾಣತ್ಯಾಗ ಮಾಡಿಕೊಂಡು ಅಮರಳಾದಳು ಎಂಬ ಇತಿಹಾಸವನ್ನು ದೇವಸ್ತಾನದ

ಅರ್ಚಕರಾದ ಶ್ರೀ ರಾಮಪ್ಪನವರು ತಿಳಿಸಿರುತ್ತಾರೆ ಇಂತಹ ಪುಣ್ಯಕ್ಷೇತ್ರವಾದ ಈ ಕೆರೆಯು ಇಂದಿಗೂ ಕಾಡುಗೊಲ್ಲರ ಪವಿತ್ರ ಸ್ಥಳವಾಗಿದ್ದು, ಈ ಕೆರೆಯಲ್ಲಿ ಜುಂಜಪ್ಪ ಚಿತ್ರ ದೇವರು ಹಾಗೂ ಆಂದ್ರ-ತಮಿಳುನಾಡಿನ ಅನೇಕ ದೇವರುಗಳನ್ನು ಕರೆತಂದು ವರ್ಷಕೊಮ್ಮೆ ಪುಣ್ಯಸ್ನಾನ ಮಾಡಿಸುವ ಪ್ರವೃತ್ತಿ ಇಂದಿಗೂ ನಡೆಸುತ್ತಿದ್ದಾರೆ.

**ಸ್ವಾಮಿಯ ದನಸ್ಸು:**

ಶ್ರೀ ಮರಡಿರಂಗನಾಥ ಸ್ವಾಮಿಯ ಈ ಧನಸ್ಸನ್ನು ದೇವಸ್ಥಾನ ಉಗಮವಾದ ಕಾಲದಿಂದಲೂ ಗರ್ಭಗುಡಿಯ ಬಲಬಾಗದಲ್ಲೇ ಇರಿಸಲಾಗಿದೆ ಮರಡಿಗುಡ್ಡಕ್ಕೆ ಇನ್ನೊಂದು ಹೆಸರೇ "ಪಂಚಕಳದಗುಡ್ಡ" ಈ ಗುಡ್ಡದಲ್ಲಿ ದೊರೆಯುವ ಪಂಚಲೋಹದ ಅದುರನ್ನು ತೆಗೆದು ಪರಿಣಿತರಿಂದ ಅದಕ್ಕೆ ಲಗತ್ತಾಗಿ 12 ಅಡಿ ಎತ್ತರಕ್ಕೆ ಧನಸ್ಸು ಮತ್ತು ಅದಕ್ಕೆ ಹೊಂದುವಂತೆ ಬಾಣವನ್ನು ತಯಾರಿಸಿದ್ದರು. ಇತ್ತೀಚಿನ ದಿನಗಳಲ್ಲಿ ಭಕ್ತರು ಇದಕ್ಕೆ ಬೆಳ್ಳಿಯ ತಗಡನ್ನು ಹೊದಿಸಿದ್ದಾರೆ ಪಂಚಲೋಹದಿಂದ ಕೂಡಿದ ಈ ದನಸ್ಸನ್ನು ಭಕ್ತಾದಿಗಳು ತಮ್ಮ ಹರಕೆಯಂತೆ ತಮ್ಮ ತಮ್ಮ ಗ್ರಾಮಗಳ ಮನೆಗಳಿಗೆ ಕರೆದುಕೊಂಡು ಹೋಗಿ ಉತ್ಸವವನ್ನು ನೆರವೇರಿಸಿ, ತಮ್ಮ ಹರಕೆಯನ್ನು ತೀರಿಸಿ ಪುನೀತರಾಗಿತ್ತಾರೆ, ಪ್ರತಿವರ್ಷ ಬ್ರಹ್ಮ ರಥೋತ್ಸವದ ಸಮಯದಲ್ಲಿ ಶ್ರೀ ಮರಡಿರಂಗನಾಥ ಸ್ವಾಮಿಯ ಉತ್ಸವ ಮೂರ್ತಿಯ ಬಲಬಾಗದಲ್ಲಿ ಆಗಾದ ಶಕ್ತಿ ಮತ್ತು ಮಹಿಮೆ ಇರುವ ಧನಸ್ಸನ್ನು ಇರಿಸಿ ರಥವನ್ನು ಎಳೆಯುತ್ತಾರೆ.

**ಶ್ರೀ ಮರಡಿರಂಗನಾಥಸ್ವಾಮಿ ಜಾತ್ರೆ:**

ಪುರಾಣಪ್ರಸಿದ್ದವಾದ ಶ್ರೀಮರಡಿರಂಗನಾಥಸ್ವಾಮಿಯ ಜಾತ್ರೆಯ ಪ್ರತಿವರ್ಷ ಚೈತ್ರಮಾಸದ ಕೃಷ್ಣಪಕ್ಷದ ಚಿತ್ತಾ ನಕ್ಷತ್ರದ ಹುಣ್ಣಿಮೆದಿನದಿಂದ ಮೊದಲಗೊಂಡು ಬೆಳಿಗ್ಗೆ ಕಳ್ಳಂಬೆಳ್ಳದ ಮೂಲದೇವಸ್ಥಾನದಿಂದ ಉತ್ಸವ ಮೂರ್ತಿಯನ್ನು ಮೆರವಣಿಗೆಯಲ್ಲಿ ದೇವಸ್ಥಾನಕ್ಕೆ ತಂದು ಕಲ್ಯಾಣೋತ್ಸವ ಮತ್ತು ಕಳಸ ಸ್ಥಾಪನೆ ನೆರವೇರಿಸುತ್ತಾರೆ, ರಾತ್ರಿ ಸ್ವಾಮಿಯ ಉತ್ಸವ ನೆರವೇರುತ್ತದೆ ಮಾರನೆ ದಿನ ಭಕ್ತಾದಿಗಳ ಸಹಕಾರದಿಂದ 2009 ರಲ್ಲಿ 50 ಅಡಿ ಎತ್ತರದ ಸುಮಾರು 35 ಲ;ಕ್ಷ ರೂಪಾಯಿಗಳ ವೆಚ್ಚದಲ್ಲಿ ಬೃಹದಾಕಾರದ 4 ಕಲ್ಲಿಗಾಲಿಗಳ ಮೇಲೆ ತೇಗದ ಮರದಿಂದ ಚೌಕಾಕಾರದಲ್ಲಿ ಬೃಹತ್ ತೊಲೆಗಳನ್ನು

ಜೋಡಿಸಿ, ಹೊರಮೈಯ್ಯಿನ 4 ಬಾಗಗಳಲ್ಲಿ ಪುರಾಣ ಪ್ರಸಿದ್ದ ದಶಾವತಾರದ ದೇವರುಗಳನ್ನು, ಪ್ರಾಣಿ, ಪಕ್ಷಿಗಳನ್ನು ಹಾಗೂ ನಾಲ್ಕು ದಿಕ್ಕುಗಳ ಮೂಲೆಯಲ್ಲೂ ಕುದುರೆ ಆಕೃತಿಯನ್ನು ಬಹಳ ಸುಂದರವಾಗಿ ಕೆತ್ತನೆ ಮಾಡಿರುತ್ತಾರೆ ಇಲ್ಲಿ ರಥ ನಿರ್ಮಾಣ ಮಾಡಿದ ಮರಗೆಲಸದವರ ರಸಿಕತೆ ಮತ್ತು ಕಲಾ ನೈಪುಣ್ಯವನ್ನು ಕಾಣಬಹುದು.


ಈ ರಥವನ್ನು ಗೋಪುರಾಕಾರದಲ್ಲಿ ಚಿತ್ತಾಕರ್ಶವಾದ ಅಂತಸ್ತುಗಳಲ್ಲಿ ಜೋಡಿಸಿ, ಉತ್ಸವ ಮೂರ್ತಿಯನ್ನು ಕೂಡಿಸಲು ಪೀಠವನ್ನು ಮದ್ಯಬಾಗದಲ್ಲಿ ರಚನೆ ಮಾಡಿರುತ್ತಾರೆ ಈ ತೇರಿನ ಮದ್ಯಭಾಗದ ನಾಲ್ಕು ಮೂಲೆಗಳಲ್ಲಿ ದೈತ್ಯ ಸಿಂಹದ ವಿಗ್ರಹಗಳನ್ನು, ದೃಷ್ಟಿದೋಷ ಪರಿಹಾರಕ್ಕಾಗಿ ಜಯ-ವಿಜಯರೆಂಬ ದ್ವಾರಪಾಲಕರನ್ನು ನಾಲ್ಕು ದಿಕ್ಕುಗಳಲ್ಲಿ ಜೋಡಿಸಿದ್ದಾರೆ ಹಾಗೂ ರಥದ ಮುಂಬಾಗದಲ್ಲಿ 2 ಸಾರೊಟಿನ ಕುದುರೆಯನ್ನು ಜೋಡಿಸಿ, ಈರಥವನ್ನು ಸಾಕ್ಷಾತ್ ಕೃಷ್ಣ ಪರಮಾತ್ಮನೇ ದರೆಗಿಳಿದು ಬಂದು ಸಾರಥಿಯಾಗಿ ಮುನ್ನಡೆಸುತ್ತಿದ್ದಾನೆಂಬಂತೆ ಆಕರ್ಷಕವಾಗಿ ನಿರ್ಮಾಣ ಮಾಡಿದ್ದಾರೆ. ಇನ್ನು ತೇರಿನ ಮಧ್ಯಬಾಗದಿಮದ ಮೆಲ್ಬಾಗದವರೆವಿಗೂ ಸೌಂದರ್ಯವರ್ದನೆಗಾಗಿ ಬಣ್ಣದ ಬಟ್ಟೆಗಳನ್ನು ಬಾವುಟಗಳನ್ನು ಕಟ್ಟಿರುತ್ತಾರೆ ತೇರಿನ ಮೇಲ್ಬಾಗದ ತುದಿಯಲ್ಲಿ ಬ್ರಹ್ಮಕಳಷವನ್ನು ಜೋಡಿಸಿರುತ್ತಾರೆ. ತೇರಿನ ಹೊರಬಾಗವನ್ನು ತಳಿರು ತೋರಣಗಳಿಂದ ಹಾಗೂ ಹೂವಿನ ಅಲಂಕಾರ ಮಾಡಿರುವುದು ಹಿಂದಿನ ವಿಜಯನಗರದಿಂದ ಶೈಲಿಯ ದೇವಾಲಯದ ರಥೋತ್ಸವದ ನೆನಪು ಇಲ್ಲಿಯೂ ಮರುಕಳಿಸಿ ಕಣ್ಣಿಗೆ ಆನಂದವುಂಟುಮಾಡುತ್ತದೆ.

ಪ್ರತಿ ವರ್ಷ ಜೇಷ್ಠ ಮಾಸದ ಹುಣ್ಣಿಮೆಯ ಎರಡನೇ ದಿನ ಬೆಟ್ಟದ ಮೇಲಿರುವ ದೇವಸ್ಥಾನದಿಂದ ಶ್ರೀ ರಂಗನಾಥ ಸ್ವಾಮಿಯ ಉತ್ಸವ ಮೂರ್ತಿಯನ್ನು ಚಿನ್ನಾಭರಣಗಳಿಂದ ಅಲಂಕಾರ ಮಾಡಿ, ಸಾವಿರಾರು ಭಕ್ತರ ಸಮ್ಮುಖದಲ್ಲಿ ಹರೆ.ತಮಟೆ, ಕೊಂಬು, ಕಹಳೆ, ವಾದ್ಯದೊಂದಿಗೆ ರಂಗನಾಥಪುರದ ರಥ ಬಿದಿಗೆ ಮೆರವಣಿಗೆಯಲ್ಲಿ ತಂದು, ಸ್ವಾಮಿಯನ್ನು ರಥದಲ್ಲಿ ಆಸೀನಪಡಿಸಿ ಬೆಟ್ಟದ ಮೇಲಿರುವ ಶ್ರೀ ರಂಗನಾಥ ಸ್ವಾಮಿಯ ಗರ್ಭಗುಡಿಯಲ್ಲಿರುವ ಧನಸ್ಸು ಮತ್ತು ಬಾಣವನ್ನು ತಂದು ರಥದ ಉತ್ಸವ ಮೂರ್ತಿಯ ಬಲಬಾಗದಲ್ಲಿ ಜೋಡಿಸುತ್ತಾರೆ ಮದ್ಯಾಹ್ನ 1 ಗಂಟೆಯ ಶುಭಮುಥುನ

ಲಗ್ನದಲ್ಲಿ ಭವ್ಯವಾಗಿ ಅಲಂಕೃತವಾದ ಬ್ರಹ್ಮರಥೋತ್ಸವವನ್ನು ನೂರಾರು ಊರುಗಳಿಂದ ಆಗಮಿಸಿರುವ ಭಕ್ತಾದಿಗಳು ಭಕ್ತಿಬಾವದಿಂದ ರಥವನ್ನು ಎಳೆಯುತ್ತಾ, ಹರ್ಷೋದ್ಗಾರದಿಂದ ರಥಕ್ಕೆ ದವನ, ಬಾಳೆ ಹಣ್ಣುಗಳನ್ನು, ಎಸೆಯುತ್ತಾ ತಾವು ಹೊತ್ತ ಹರಕೆಯನ್ನು ತೀರಿಸುವುದು ಇಂದಿಗೂ ರೂಡಿಯಲ್ಲಿದೆ ನಾನು ಸಹ 25 ವರ್ಷಗಳಿಂದಲೂ ಅನೇಕ ಬಾರಿ ರಥೋತ್ಸವದಲ್ಲಿ ಬಾಗಿಯಾಗಿದ್ದೇನೆ. ಇಲ್ಲಿಗೆ ಬಂದ ಭಕ್ತರೆಲ್ಲರಿಗೂ ಕುಂಚಿಟಿಗರ ಜಾತಿಯ ಅಲ್ಪೆನೋರು ಗೋತ್ರದ ಅಣ್ಣ ತಮ್ಮಂದಿರುಗಳು ಪಾನಕ, ನೀರು ಮಜ್ಜಿಗೆ, ಕೋಸಂಬರಿ ಹಾಗೂ ಅನ್ನಸಂತರ್ಪಣೆ ಮಾಡುತ್ತಾರೆ.

ಹೀಗೆ 5 ದಿನಗಳ ಕಾಲ ಕಲ್ಯಾನೋತ್ಸವದಿಂದ ಮಹಿಡಿದು ಬ್ರಹ್ಮ ರಥೋತ್ಸವ, ಹೂವಿನ ಉತ್ಸವ, ಪಲ್ಲಕ್ಕಿ ಉತ್ಸವಗಳನ್ನು ಮಾಡುತ್ತಾರೆ. 6 ನೇ ದಿವಸ ಅಲ್ಪೆನೋರು ಅಣ್ಣ, ತಮ್ಮಂದಿರುಗಳು ಉಂಡೆ–ಮಂಡೆ ಅಂದರೆ ಮುಡಿ ತೆಗೆಯುವ ಕಾರ್ಯಕ್ರಮವನ್ನು ಏರ್ಪಡಿಸಿ, ಭಕ್ತಾದಿಗಳನ್ನು, ನೆಂಟರಿಷ್ಟರುಗಳನ್ನು ಕರೆಸಿ ಕುರಿ–ಕೋಳಿಗಳನ್ನು ಕಡಿದು ತಮ್ಮ ಕೊಪ್ಪಲುಗಳಲ್ಲಿ ಬರ್ಜರಿ ಬಾಡೂಟವನ್ನು ಏರ್ಪಡಿಸುತ್ತಾರೆ, ಶ್ರೀ ರಂಗನಾಥಸ್ವಾಮಿ ಬ್ರಹ್ಮರಥೋತ್ಸವಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಈ ಬಾಡೂಟ ಸವಿಯನ್ನು ಸವಿದು, ಶ್ರೀ ರಂಗನಾಥಸ್ವಾಮಿಯ ಜಾತ್ರೆಯ ಮಹಿಮೆಯನ್ನು ಸಾರುತ್ತಾ ಮುಂದಿನ ವರ್ಷದ ಜಾತ್ರೆಯು ಹೇಗಿರುತ್ತೊ ಎಂಬ ಗುಂಗಿನಲ್ಲಿ ಮನೆಗಳಿಗೆ ವಾಪಸ್ಸಾಗುತ್ತಾರೆ ಏಳನೆಯ ಹಾಗೂ ಕೊನೆಯ ದಿನ ಸ್ವಾಮಿಗೆ ವಸಂತೋತ್ಸವ ನಡೆಸಿ ಭಕ್ತಾದಿಗಳಿಂದ ಅನ್ನಸಂತರ್ಪನೆಯಾದ ಮೇಲೆ ಶ್ರೀ ರಂಗನಾಥಸ್ವಾಮಿಯ ಉತ್ಸವ ಮೂರ್ತಿಯನ್ನು ಕಳಂಬೆಳ್ಳದ ಮೂಲ ದೇವಸ್ಥಾನಕ್ಕೆ ಮೆರವಣಿಗೆಯಲ್ಲಿ ಕೊಂಡೋಯ್ದು ಗುಡಿದುಂಬಿಸಿ ಜಾತ್ರೆಯನ್ನು ಸಂಪನ್ನಗೊಳಿಸುತ್ತಾರೆ





ಶ್ರೀ ಮಣ್ಣಮ್ಮದೇವಿ ಪ್ರಸನ್ನ ॥

[illegible]

## ಸಾಕ್ಷಿಹಳ್ಳಿ ಶ್ರೀ ಮಣ್ಣಮ್ಮ ದೇವಿ

# ಜಾತ್ರಾ ಮಹೋತ್ಸವ

## ಆಹ್ವಾನ ಪತ್ರಿಕೆ

## ಸಾಕ್ಷಿಹಳ್ಳಿ, ಬುಕ್ಕಾಪಟ್ಟಣ ಹೋ., ಶಿರಾ ತಾ, ತುಮಕೂರು ಜಿಲ್ಲೆ

ಭಕ್ತ ಮಹಾಶಯರಲ್ಲಿ ವಿನಂತಿ,

ಸಾಕ್ಷಿಹಳ್ಳಿ ಬಳಿಯಿರುವ ಮಣ್ಣಮ್ಮದೇವಸ್ಥಾನ ಅನಾದಿ ಕಾಲದಿಂದಲೂ ಮಹಾಲಕ್ಷ್ಮಿ ಸ್ವರೂಪಿಣಿಯಾಗಿ ಆದಿ ಶಾಕ್ತಿನಿಯಾಗಿ, ಭಕ್ತರ ಮನೋಭೀಷ್ಟ ದೇವಿಯಾಗಿ ಕೌಟುಂಬಿಕ ಸಮಸ್ಯೆಗಳಿಂದ ನೊಂದ ಭಕ್ತಾದಿಗಳಿಗೆ ಸದಾಕಾಲವೂ ನಗು ಮುಖದಿಂದ ನರಿಯುತ್ತ ಶಾಂತಿ ನೆಮ್ಮದಿಗಳನ್ನು ಹಾಗೂ ಸಂತೋಷವನ್ನುಂಟು ಮಾಡುತ್ತ ನೆಲೆಸಿರುವ

# ಶ್ರೀಮಣ್ಣಮ್ಮ ದೇವಿ ರಥೋತ್ಸವ

ಪ್ರತಿ ವರ್ಷದಂತೆ ಈ ವರ್ಷವೂ ಸಹ ಸ್ವಸ್ತಿಶ್ರೀ ವಿಳಂಬಿನಾಮ ಸಂವತ್ಸರದ ಚೈತ್ರಮಾಸ

## ದಿನಾಂಕ 10-04-2018ನೇ ಮಂಗಳವಾರದಿಂದ ತಾ॥ 15-04-2018ನೇ ಭಾನುವಾರ

ಈ ಕೆಳಕಂಡಂತೆ ಸಂಬಂಧಿಸಿದ ಗ್ರಾಮಗಳು ಒಮ್ಮತದಿಂದ ಆಚರಿಸುವ ಜಾತ್ರಾ ಮಹೋತ್ಸವದೊಂದಿಗೆ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಕರೇಮಾದೇನಹಳ್ಳಿ, ಚನ್ನಯ್ಯನಪಾಳ್ಯ, ಮಾರಗೊಂಡನಹಳ್ಳಿ, ತುಪ್ಪದಕೋಣ, ತುಪ್ಪದಕೋಣ ಗೊಲ್ಲರಹಟ್ಟಿ, ಕುಂಬಾರಹಳ್ಳಿ, ಸಾಕ್ಷಿಹಳ್ಳಿ, ದುರ್ಗಪ್ಪನಹಟ್ಟಿ, ಕಿಲಾರದಹಳ್ಳಿ, ಮತ್ತು ರಾಮಲಿಂಗಾಪುರ.

### ಜಾತ್ರಾ ಕಾರ್ಯಕ್ರಮಗಳು

| | |
|---|---|
| ತಾ॥ 10-4-2018ನೇ ಮಂಗಳವಾರ | ಬಾನ, ಘಟೆ, ಪಾನ ಇರುತ್ತದೆ |
| ತಾ॥ 11-4-2018ನೇ ಬುಧವಾರ | ಆರತಿ ಮತ್ತು ಅಗ್ನಿಕೊಂಡ |
| ತಾ॥ 12-4-2018ನೇ ಗುರುವಾರ | **ರಥೋತ್ಸವ** |
| ತಾ॥ 13-4-2018ನೇ ಶುಕ್ರವಾರ | ಮುತ್ತಿನ ವಾಹನ (ಶ್ರೀಮತಿ ದೊಡ್ಡೀರಮ್ಮ ಕೋಂ ಸಣ್ಣಹೊನ್ನಪ್ಪ ಮತ್ತು ಮಕ್ಕಳುಸಾಕ್ಷಿಹಳ್ಳಿ) |
| ತಾ॥ 14-4-2018ನೇ ಶನಿವಾರ | ಹೂವಿನ ವಾಹನ (ರಾಮಲಿಂಗಾಪುರ ಗ್ರಾಮಸ್ಥರು) |
| ತಾ॥ 15-4-2018ನೇ ಭಾನುವಾರ | ಓಕಳಿ |

ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಶ್ರೀಮಣ್ಣಮ್ಮದೇವಿ ಜಾತ್ರ ಮಹೋತ್ಸವವನ್ನು ಯಶಸ್ವಿಗೊಳಿಸುವುದರೊಂದಿಗೆ ಶ್ರೀಮಣ್ಣಮ್ಮದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ

ಮುತ್ತಿನವಾಹನ ಸೇವೆ
10-04-2018ನೇ ಮಂಗಳವಾರ
ಶ್ರೀರಂಗನಾಥಪ್ಪನವರು, ತರೂರು

ವೀರಗಾಸೆ ಕುಣಿತ,
ಚಿಕ್ಕಮಂಗಳೂರು
ಮಹಿಳಾ ತಂಡದಿಂದ
ಸಿ.ಬಿ.ಎಸ್. ಅಭಿಮಾನಿ ಬಳಗ, ಬುಕ್ಕಾಪಟ್ಟಣ

ಬೆಳ್ಳಿಪಲ್ಲಕ್ಕಿ ಉತ್ಸವ & ವೀರಗಾಸೆ ಕುಣಿತ
12-04-2018ನೇ ಗುರುವಾರ ರಾತ್ರಿ
ಶಿವರಾಜು ಬೆಂಗಳೂರು ಇವರಿಂದ,
ಸಿಡಿಮದ್ದು ಪ್ರದರ್ಶನ : ತು.ಬಿ. ಮಲ್ಲೇಶ್,
ಎಸ್.ಟಿ. ಘಟಕದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು, ತುಮಕೂರು

ಇಂತಿ : ಸಿದ್ದೇಗೌಡ್ರು, ಗುಡಿಗೌಡರು, ಸಾಕ್ಷಿಹಳ್ಳಿ,ದುರ್ಗಪ್ಪನಹಟ್ಟಿ, ವಿಳುಹಳ್ಳಿಯ ಗೌಡರುಗಳಾದ, ಜಯಲಿಂಗೇಗೌಡ್ರು, ಕರೇಮಾದೇನಹಳ್ಳಿ, ಚನ್ನಯ್ಯನಪಾಳ್ಯ, ಲೋಕೇಶ್‌ಗೌಡ್ರು, ಮಾರಗೊಂಡನಹಳ್ಳಿ, ಪುಟ್ಟಲಿಂಗೇಗೌಡ್ರು, ತುಪ್ಪದಕೋಣ,ಮಹಲಿಂಗೇಗೌಡ್ರು ತುಪ್ಪದಕೋಣ ಗೊಲ್ಲರಹಟ್ಟಿ, ಈರೇಗೌಡ್ರು, ಕಿಲಾರದಹಳ್ಳಿ, ರಾಮೇಗೌಡ್ರು, ರಾಮಲಿಂಗಾಪುರ, ಯಜಮಾನರು ಯ॥ ಸಾಕ್ಷಪ್ಪ, ಯ॥ ಪಾತಯ್ಯ, ಯ॥ ಪಾತಯ್ಯ, ಯ॥ ಮೂಲಿಮಾರಪ್ಪ & ಅರ್ಚಕರು, ಕುಂಬಾರಹಳ್ಳಿ., ಕೈವಾಡದವರು, ವಿಳುಹಳ್ಳಿ ಗ್ರಾಮಸ್ಥರು

: ಭಕ್ತಾದಿಗಳಲ್ಲಿ ಮನವಿ :
ಶ್ರೀ ಮಣ್ಣಮ್ಮದೇವಿ ದೇವಸ್ಥಾನದ
**ರಾಜಗೋಪುರದ**
ಕಟ್ಟಡ ನಿರ್ಮಾಣ ನಡೆಯುತ್ತಿದೆ.
ಭಕ್ತಾದಿಗಳು ಹೆಚ್ಚಿನ ರೀತಿಯಲ್ಲಿ
ಧನ ಸಹಾಯ
ನೀಡಿ ರಸೀದಿ ಪಡೆಯತಕ್ಕದ್ದು.

**ಈ ಮೇಲ್ಕಂಡ ಕಾರ್ಯಕ್ರಮಗಳಿಗೆ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ**



ವನಿತ ಪ್ರಿಂಟರ್ಸ್, ಶಿರಾ

# 10. ಸಾಕ್ಷಿಹಳ್ಳಿ ಮಣ್ಣಮ್ಮದೇವಿ ಜಾತ್ರಾ ಮಹೋತ್ಸವ

**ಪೀಠಿಕೆ:**

ಸಾಕ್ಷಿಹಳ್ಳಿಯ ಸಿರಾ ತಾಲ್ಲೂಕು ಬುಕ್ಕಾಪಟ್ಟಣ ಹೋಬಳಿಯಲ್ಲಿದ್ದು, ಸಿರಾ ಹುಯಿಲ್‌ದೊರೆ ಹೊಸಕೆರೆ ಮಾರ್ಗದಲ್ಲಿ ಸಿರಾ ನಗರದಿಂದ 17 ಕಿ.ಮೀ ನಲ್ಲೂ, ನಮ್ಮೂರು ಚಿಕ್ಕನಹಳ್ಳಿಯಿಂದ 20 ಕಿ.ಮೀ. ದೂರದಲ್ಲಿರುವ ಕಂದಾಯ ಗ್ರಾಮವಾಗಿದೆ. ಹಿಂದೆ ಈ ಗ್ರಾಮವನ್ನು ಸರ್ಪ ವಕ್ಕಲಿಗರ ಜೋಗೇ ಗೌಡರ ವಂಶದವರು ಹುಗಿ ಹೊಯ್ದಿರುತ್ತಾರೆ ಎಂಬ ಐತಿಹ್ಯವಿದೆ.

ಈ ಗ್ರಾಮದಲ್ಲಿ ಸುಮಾರು 150 ಮನೆಗಳಿದ್ದು, 600 ಜನ ಸಂಖ್ಯೆ ಇದೆ. ಗ್ರಾಮದಲ್ಲಿ ಕುಂಚಿಟಿಗರು, ಸರ್ಪ ವಕ್ಕಲಿಗರು, ಆದಿ ಕರ್ನಾಟಕ ,ಆದಿ ದ್ರಾವಿಡ, ಮುಸ್ಲಿಂ, ವಿಶ್ವಕರ್ಮ, ಕಮ್ಮಾರ ಇನ್ನೂ ಮುಂತಾದ ಜನಾಂಗದವರು ವಾಸಮಾಡುತ್ತಿದ್ದಾರೆ, ಇಲ್ಲಿನ ರೈತರು ಭತ್ತ, ರಾಗಿ, ಮುಸಿಕಿನ ಜೋಳ, ಅಡಿಕೆ, ತೆಂಗು, ತೊಗರಿ, ಶೆಂಗಾ ಇನ್ನೂ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ.

ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಪಶು ಚಿಕಿತ್ಸಾಲಯ, ಅಂಗನವಾಡಿ, ಸಮುದಾಯ ಭವನ ಪ್ರೌಡಶಾಲೆ, ಹಾಗೂ ಪ್ರಸಿದ್ದವಾದ ಮಣ್ಣಮ್ಮ ದೇವಿಯ ದೇವಸ್ಥಾನವಿದ್ದು, ಪ್ರತಿವರ್ಷ ಮೇ ತಿಂಗಳಲ್ಲಿ 6 ದಿವಸಗಳ ಕಾಲ ಜಾತ್ರೆ ನಡೆಯುತ್ತದೆ.

**ಇತಿಹಾಸ**

ಸಾಕ್ಷೀಹಳ್ಳಿಯಲ್ಲಿ ನೆಲಸಿರುವ ಶ್ರೀ ಮಣ್ಣಮ್ಮ ದೇವಿಯು ಸಿರಾ ತಾಲ್ಲೂಕು ಪ್ರಮುಖ ಗ್ರಾಮದೇವತೆ ಎನಿಸಿದ್ದಾಳೆ. ಏಳೂರಿನ ಗ್ರಾಮ ದೇವತೆಯಾದ ಮಣ್ಣಮ ಸಾಕ್ಷಿಹಳ್ಳಿಯಲ್ಲಿ ನೆಲಗೊಂಡ ಕಾಲ ಹಾಗೂ ಕಾರಣಗಳ ಬಗ್ಗೆ ಜನಪದರಲ್ಲಿ ಬಿನ್ನ-ಬಿನ್ನ ಕಥೆಗಳು ಆಸ್ತಿತ್ವದಲ್ಲಿವೆ. ಈ ಗ್ರಾಮದ ಪೂಜಾರ ಪಾಪಣ್ಣ ಹೇಳುವ ಪ್ರಕಾರ ಈ ದೇವತೆಯು ಚಿತ್ರದುರ್ಗದ ಪಾಳೇಗಾರರು ನಾಯಕ ಜನಾಂಗದ ಕುಲದೇವತೆಯಾದ್ದರಿಂದ, ಅವರಿಂದಲೇ ದೇವಸ್ಥಾನ ಸ್ಥಾಪಿಸಲ್ಪಟ್ಟಿತು ಎಂಬ ನಂಬಿಕೆ ಇದೆ. ಹಾಗೆಯೇ ಮಣ್ಣಮ್ಮ, ಮಹಾಪುರದಮ್ಮ, ಮಾರಮ್ಮ ಎರದಕಟ್ಟೆಯಮ್ಮ, ಹೀಗೆ ಇವರುಗಳು ಏಳು ಜನ ಅಕ್ಕ ತಂಗಿಯರು ಇವರೆಲ್ಲಾ ಬೆಂಗಳೂರು ಜಿಲ್ಲೆಯ ಮಣ್ಣೆ ಗ್ರಾಮದವರು, ಮೂಲ ವಿಗ್ರಹದಲ್ಲಿ ಏಳು ಬಾಗಗಳಾಗಿ ವಿಂಗಡನೆಯಾಗಿ ಬೇರೆ ಬೇರೆ ಸ್ಥಳಗಳಲ್ಲಿ ರಕ್ಷಣೆಗಾಗಿ ನೆಲಸಿದರು ಎಂಬ ಇನ್ನೊಂದು ನಂಬಿಕೆ ಇದೆ. ಇದರಲ್ಲಿ ಎಣ್ಣೆಕಟ್ಟೆಯಮ್ಮ ಕುಂಟವಲಾಗಿದ್ದುದರಿಂದ ಇವಳ ಅಕ್ಕ ತಂಗಿಯರೊಂದಿಗೆ ಸರಾಗವಾಗಿ ನಡೆಯಲಾಗಲಿಲ್ಲ ಹಾಗಾಗಿ ಇವಳನ್ನು ಎಣ್ಣೆಕಟ್ಟೆಯಲ್ಲಿಯೇ ಬಿಟ್ಟು ಹೋದರು

ಎಣ್ಣೆಕಟ್ಟೆಯಮ್ಮ ಅವರೆಲ್ಲರ ಮೇಲೆ ಮುನಿಸಿಕೊಂಡ ಕಾರಣ, ಅಕ್ಕ ತಂಗಿಯರ ಉತ್ಸವದ ಡೋಳ್ಳಿನ ವಾದ್ಯಗಳ ಸಪ್ಪಳವು ಈಕೆಯ ಕಿವಿಗೆ ಬೀಳುವಂತಿಲ್ಲ ಎಂದು ಶಾಪ ಹಾಕಿದ್ದಳು.

ಮಣ್ಣಮ್ಮ ದೇವತೆಯ ಮಹಿಮೆಯ ವಿಶೇಷವೆಂದರೆ ಗಾಳಿಸೋಂಕು, ಮಾಟ-ಮಂತ್ರ ನಿವಾರಣೆಯಾಗುತ್ತದೆ. ಎಂದು ನಂಬಿಕೆಯಿಂದ, ಈ ದೇವಿಗೆ ನಡೆದುಕೊಳ್ಳುವ ಗ್ರಾಮಗಳೆಂದರೆ ಕರೆಮಾದೇನಹಳ್ಳಿ, ಚನ್ನಯ್ಯನಪಾಳ್ಯ, ಮಾರಗೊಂಡನಹಳ್ಳಿ, ಕುಪ್ಪದಕೋಣ, ರಾಮಲಿಂಗಾಪುರ, ಕುಂಬಾರಹಳ್ಳಿ ಇನ್ನು ಮೊದಲಾದವುಗಳು. 'ಜಂಡೆಗೊಂಡ' ಎಂಬ ಗೊಲ್ಲ ಜನಾಂಗದವರು, ಮಣ್ಣಮ್ಮ ದೇವಿಗೆ ಈ ಬಾಗದಲ್ಲಿ ನೆಲೆಗೊಳ್ಳಲು ಸ್ಥಳಾವಕಾಶ ನೀಡಿದ್ದರಿಂದ ಮಣ್ಣಮ್ಮನಿಗೆ, ಅಣ್ಣ ನೆನಸಿಕೊಂಡು ಖ್ಯಾತಿಯಾದನು. ಮಣ್ಣಮ್ಮನಿಗೆ 'ಪಾತಪ್ಪ' ಎಂಬುವನು ತಮ್ಮನೆಂತಲೂ, ಬೆಂಗಳೂರಿನಲ್ಲಿ ಅಣ್ಣಮ್ಮ ಮಧುಗಿರಿಯ ಕೊಲ್ಲಾಪುರದಮ್ಮ, ಮದ್ದಮ್ಮ ಮೊದಲಾದವುಗಳು ಸಹೋದರಿಯರೆಂತಲೂ ಜನಪದರ ನಂಬಿಕೆಯಾಗಿದೆ.

ಗರ್ಬಗುಡಿಯಲ್ಲಿ ಮಣ್ಣಮ್ಮ ದೇವಿಯ ನೆಲದೇವರು ಇದೆ, ಗರ್ಭಗುಡಿಯ ಮುಂದೆ ಅಂಕರಾಳವಿದೆ ಇದರ ಎಡ ಭಾಗದಲ್ಲಿ ಎರಡು ಕೊಠಡಿಗಳನ್ನು ನಿರ್ಮಿಸಿ, ಒಂದನ್ನು ದೇವರಿಗೆ ತಳಿಗೆ ಅನ್ನ ಮಾಡುವುದಕ್ಕೆ ಉಪಯೋಗಿಸಿದರೆ, ಮತ್ತೊಂದರಲ್ಲಿ ಮಣ್ಣಮ್ಮ ಮೆರವಣಿಗೆ ದೇವರನ್ನು ಇಟ್ಟಿರುತ್ತಾರೆ. ಇದರ ಮುಂದೆ ಮುಖ ಮಂಟಪವಿದ್ದು, ಇದರಲ್ಲಿ ಎಂಟು ಕಂಬಗಳಿದ್ದು, ಇದರ ಮೇಲೆ ಹೂವು, ನಾಗದೇವತೆಗಳ ಚಿತ್ರಗಳನ್ನು ಬಿಡಿಸಿದ್ದಾರೆ. ತೆರೆದ ಮುಖಮಂಟಪದಲ್ಲಿ ಎಡ-ಬಲಗಳಲ್ಲಿ ಎರಡು ಸೋಮಗಳಿವೆ, ಗರ್ಭಗುಡಿಯ ಮೇಲೆ ಶಿಖರವಿದೆ. ದೇವಸ್ಥಾನ ಮುಂದೆ ಚಿಕ್ಕದಾದ "ಪಾತಪ್ಪ"ನ ಗುಡಿ ಇದೆ ಇದರ ಹಿಂದೆ ದೃಷ್ಟಿಕಲ್ಲು ಇರುತ್ತದೆ ಎಡ-ಬಲ ಬಾಗಗಳಲ್ಲಿ ಭಕ್ತಾದಿಗಳು ಉಳಿದುಕೊಳ್ಳಲು ಮಂಟಪಗಳಿವೆ ದೇವಸ್ಥಾನಮುಂಬಾಗದ ಬಲಬಾಗದಲ್ಲಿ ರಥದ ಮಂಟಪವಿದೆ.

**ಜಾತ್ರಾ ಮಹೋತ್ಸವ :**

ಸಾಕ್ಷಿಹಳ್ಳಿಯಲ್ಲಿರುವ ಮಣ್ಣಮ್ಮ ದೇವಸ್ಥಾನ ಅನಾದಿಕಾಲದಿಂದಲೂ ಮಹಾಲಕ್ಷ್ಮೀ ಸ್ವರೂಪಿಯಾಗಿ ಅನೆ ವಾಹಿನಿಯಾಗಿ, ಭಕ್ತರ ಮನೋಬೀಷ್ಟೆ ದೇವಿಯಾಗಿ, ಕೌಟುಂಬಿಕ ಸಮಸ್ಯೆಗಳಿಂದ ನೊಂದ ಭಕ್ತಾದಿಗಳಿಗೆ ಸದಾ ಕಾಲವೂ, ನಗುಮುಖದಿಂದ ನಲಿಯುತ್ತಾ, ಶಾಂತಿ, ನೆಮ್ಮದಿಗಳನ್ನು ಮತ್ತು ಸಂತೋಷವನ್ನು ಉಂಟುಮಾಡುತ್ತಾ ನೆಲೆಸಿರುವ ಶ್ರೀ ಮಣ್ಣಮ್ಮ ದೇವಿಯ ಜಾತ್ರಾ ಮಹೋತ್ಸವವನ್ನು ಕುರೆಹಳ್ಳಿ ಕೆರೆಯಲ್ಲಿ ಗಂಗಾಸ್ನಾನ ಮಾಡಿಸಿ, ನಂತರ ವಿವಿದ ಗ್ರಾಮಗಳಿಗೆ ಮಡಲಕ್ಕಿ ಯಾತ್ರೆಗೆ ಕರೆದುಕೊಂಡು ಹೋಗುತ್ತಾರೆ, ಎರಡನೇ ದಿನ ಬೆಳಿಗ್ಗೆ ಕರೇ ಮಾದನಹಳ್ಳಿ, ಚಿನ್ನಯ್ಯನಪಾಳ್ಯ,

ಮಾರಗೊಂಡನಹಳ್ಳಿ, ತುಪ್ಪದ ಕೋಣ, ಗೊಲ್ಲರಹಟ್ಟಿ, ಕುಂಬಾರಹಟ್ಟಿ, ಸಾಕ್ಷಿಹಳ್ಳಿ, ದುರ್ಗಜ್ಜನಹಟ್ಟಿ, ಕಿಲಾರದಹಳ್ಳಿ ಮತ್ತು ರಾಮಲಿಂಗಾಪುರ ಗ್ರಾಮಗಳ ಸಕಲ ಸದ್ಭಕ್ತರುಗಳು, ಆರತಿ ಮಾಡುವಾಗ ವಿಶೇಷವಾಗಿ ಜಾತ್ರ ಕಲೆಯುತ್ತದೆ, ಕೋಣ, ಕುರಿ, ಕೋಳಿಗಳ ಬಲಿ ನಡೆಯುತ್ತದೆ, ಜಾತ್ರೆಯ ಸಂದರ್ಭದಲ್ಲಿ "ಅಗ್ನಿಕೊಂಡ" ದ ಸೇವಾ ಕಾರ್ಯ ನಡೆಯುತ್ತದೆ. ಮೂರನೇ ದಿವಸ ಶ್ರೀ ಮಣ್ಣಮ್ಮ ದೇವಿಯು "ಹೂವಿನ ರಥೋತ್ಸವಕ್ಕೆ " ಅಕ್ಕಪಕ್ಕದ ನೂರಾರು ಹಳ್ಳಿಗಳಿಂದ ಸಾವಿರಾರು ಜನ ಭಕ್ತಾದಿಗಳು ಬಾವಪರವಶರಾಗಿ, ಹರ್ಷೋದ್ಗಾರಗಳಿಂದ ರಥವನ್ನು ಎಳೆಯುತ್ತಾ, ಧವನ, ಬಾಳೆಹಣ್ಣುಗಳನ್ನು ರಥಕ್ಕೆ ಎಸೆಯುತ್ತಾ ಭಕ್ತಿ ಸಮರ್ಪಿಸುತ್ತಾ, ನಾಲ್ಕನೇ ದಿವಸ ಮುತ್ತಿನ ಪಲ್ಲಕ್ಕಿ" ಉತ್ಸವ ನಡೆಯುತ್ತದೆ, 5ನೇ ದಿನ ಭಕ್ತರು "ಹೂವಿನ ವಾಹನದ ಉತ್ಸವ"ವನ್ನು ಏರ್ಪಡಿಸುತ್ತಾರೆ, 6ನೇ ದಿನ ದೇವಿಗೆ 'ಒಕಳಿ ಸೇವೆ" ನಡೆಸಲಾಗುತ್ತದೆ ಪ್ರತಿದಿನ ಭಕ್ತಾದಿಗಳಿಂದ, ಪಾನಕ, ನೀರು, ಮಜ್ಜಿಗೆ ಹಾಗೂ ಅನ್ನ ಸಂತರ್ಪಣೆ ನಡೆಯುತ್ತದೆ.

ಈ ಎಲ್ಲಾ ಕಾರ್ಯಕ್ರಮಗಳನ್ನು ಏಳುಹಳ್ಳಿ ಗುಡಿ ಗೌಡರುಗಳು, ಯಜಮಾನರುಗಳು, ಸರ್ಪವಕ್ಕಲಿಗರು ಅರ್ಚಕರುಗಳು, ಕೈವಾಡದವರು ಹಾಗೂ ಎಳು ಹಳ್ಳಿ ಗ್ರಾಮಸ್ಥರುಗಳು ಜಾತ್ರೆಯ ಪೂರ್ಣ ಜವಾಬ್ದಾರಿಗಳನ್ನು ವಹಿಸಿಕೊಂಡು ಜಾತ್ರೆಗೆ ಬಂದತಹ ಭಕ್ತಾದಿಗಳಿಗೆ ಸಕಲ ಸೌಕರ್ಯಗಳನ್ನು ಒದಗಿಸುತ್ತಾ, ಅನ್ನ ಸಂತರ್ಪಣೆ ನಡೆಸುತ್ತಾ ದೇವಿಯ ಕೃಪೆಗೆ ಪಾತ್ರರಾಗುತ್ತಾರೆ ಈ ದೇವತೆಗೆ ನಾಯಕ ಜನಾಂಗದ ಹುಡುಗಿಯನ್ನು "ಬಸವಿ" ಬಿಡುತ್ತಾರೆ. ಜಾತ್ರೆಯ ಸಮಯದಲ್ಲಿ ಕಳಸವನ್ನು ಹೊರುತ್ತಾಳೆ. ಮಣ್ಣಮ್ಮ ದೇವಿಯ ಸನ್ನಿದಿಯಲ್ಲಿ ವರ್ಷದ ಎಲ್ಲಾ ಕಾಲದಲ್ಲೂ ಹರಕೆ ಮಾಡಿಕೊಂಡು ಭಕ್ತಾದಿಗಳು ಈ ತಾಯಿಗೆ ಕುರಿ, ಕೋಳಿ, ಬಲಿಕೊಟ್ಟು ಸಂತೃಪ್ತರಾಗುತ್ತಾರೆ, ಬಾಡೂಟ ನಡೆಸಲು ಭಕ್ತಾದಿಗಳು ದೊಡ್ಡದಾದ, ಸಮುದಾಯ ಭವನವನ್ನು ನಿರ್ಮಿಸಿದ್ದಾರೆ.

ಮದುವೆ, ಮುಂಜಿ, ಗೃಹ ಪ್ರವೇಶ ಇನ್ನು ಮುಂತಾದ ಶುಭ ಕಾರ್ಯಗಳಿಗೆ ಹರಕೆ ಮಾಡಿಕೊಂಡ ಭಕ್ತಾದಿಗಳು ನೆಡ-ಮುಡಿಗಳೋಂದಿಗೆ ಶ್ರೀ ಮಣ್ಣಮ್ಮದೇವಿಯ ಉತ್ಸವ ಮೂರ್ತಿಯೊಂದಿಗೆ. ಎರಡು ಸೋಮಗಳನ್ನು ತಮ್ಮ ತಮ್ಮ ಗ್ರಾಮಗಳಿಗೆ ಕರೆಸಿಕೊಂಡು, ಗ್ರಾಮದ ಭಕ್ತಾದಿಗಳನ್ನು, ನೆಂಟರಿಷ್ಟರುಗಳನ್ನು ಆಹ್ವಾನಿಸಿ ಪೂಜಾದಿಗಳನ್ನು ನಡೆಸಿ, ಕುರಿ ಕೊಳಿಗಳನ್ನು ಬಲಿಕೊಟ್ಟು ಶಾಂತಿ ಮಾಡಿಸಿ, ಊರಮುಂದಿನ ದೇವಸ್ಥಾನದ ಮುಂದೆ ರಾತ್ರಿ ಬಹುಹೊತ್ತಿನವರೆವಿಗೂ ದೇವಿಯ ಉತ್ಸವ ಮೂರ್ತಿ ಮತ್ತು ಸೋಮಗಳನ್ನು ಲಯ ಬದ್ದವಾಗಿ ವಾದ್ಯಗಳೊಂದಿಗೆ ಕುಣಿಸಿ, ದೇವಿಯ ಮಹಿಮೆಯನ್ನು ಕಾವ್ಯದ ರೂಪದಲ್ಲಿ ಸಾರುತ್ತಾ, ಭಕ್ತರು ಶ್ರೀ ಮಣ್ಣಮ್ಮ ದೇವಿಯ ಕೃಪೆಗೆ ಪಾತ್ರರಾಗಿ ತಮ್ಮ ಬಹುದಿನಗಳ ಹರಕೆಯನ್ನು ತೀರಿಸಿ ಪುನಿರತಾಗುತ್ತಾರೆ.

# ಸಿರಾ ತಾಲ್ಲೂಕಿನ ಇತರೆ ಜಾತ್ರೆಗಳು

ಹಾಲೇನಹಳ್ಳಿ ಕೊಲ್ಲಾಪುರದಮ್ಮ ಜಾತ್ರೆ, ದೊಡ್ಡಹುಲಿಕುಂಟೆ, ಶ್ರೀ ಆಂಜನೇಯಸ್ವಾಮಿ ಜಾತ್ರೆ, ಚಿಕ್ಕನಹಳ್ಳಿ ಶ್ರೀ ಜವಲಿಂಗೇಶ್ವರ ಸ್ವಾಮಿ ಜಾತ್ರೆ, ಹಂದಿಕುಂಟೆ ಶ್ರೀ ಕರಿಯಮ್ಮ ದೇವಿ ಜಾತ್ರೆ, ರಾಮಲಿಂಗಾಪುರದ ಶ್ರೀ ಭೂತಪ್ಪದೇವರ ಜಾತ್ರೆ, ದೊಡ್ಡಗೂಳ ಶ್ರೀ ವೀರಭದ್ರಸ್ವಾಮಿ ಜಾತ್ರೆ, ಶಿರಾದ ಶ್ರೀ ಪಾಲೇಶ್ವರಸ್ವಾಮಿ ಜಾತ್ರೆ, ಬುಕ್ಕಾಪಟ್ಟಣ ಶ್ರೀ ರಂಗನಾಥಸ್ವಾಮಿ ಜಾತ್ರೆ, ಹಲ್ಕೂರು ಶ್ರೀ ರಾಮೇಶ್ವರಸ್ವಾಮಿ, ಬರಗೂರು ಶ್ರೀ ಆಂಜನೇಯಸ್ವಾಮಿ ಜಾತ್ರೆ, ಶಿರಾ ಶ್ರೀ ವ್ಯಾಸರಾಯರ ಮಠದ ಜಾತ್ರೆ, ಬರಗೂರು ಮಲ್ಲೇಶ್ವರಸ್ವಾಮಿ ಜಾತ್ರೆ, ದೊಡ್ಡಗೂಳ ಶ್ರೀ ಬನಶಂಕರಮ್ಮ, ತರೂರು ಶ್ರೀ ಮಲ್ಲೇಶ್ವರಸ್ವಾಮಿ, ಹೊಸೂರು ಶ್ರೀ ನರಸಿಂಹಸ್ವಾಮಿ ಜಾತ್ರೆ, ತರೂರು ಶ್ರೀರಂಗನಾಥಸ್ವಾಮಿ ಜಾತ್ರೆ, ಹಂದಿಕುಂಟೆ ಶ್ರೀ ಆಂಜನೇಯಸ್ವಾಮಿ ಜಾತ್ರೆ, ಹುಲಿಕುಂಟೆ ಶ್ರೀ ಈಶ್ವರದೇವರ ಜಾತ್ರೆ, ಗೋಪಿಕುಂಟೆ ಶ್ರೀ ಹನುಮಂತದೇವರ ಜಾತ್ರೆ, ರತ್ನಸಂದ್ರ ಶ್ರೀ ರಂಗನಾಥಸ್ವಾಮಿ ಜಾತ್ರೆ, ಬ್ರಹ್ಮಸಂದ್ರದ ಶ್ರೀ ಆಂಜನೇಯಸ್ವಾಮಿ ಜಾತ್ರೆ, ಬಾಲೇನಹಳ್ಳಿ ಶ್ರೀ ಆಂಜನೇಯಸ್ವಾಮಿ ಜಾತ್ರೆ, ಚಿಕ್ಕಹುಲಿಕುಂಟೆ ಶ್ರೀ ರಂಗನಾಥಸ್ವಾಮಿ ಜಾತ್ರೆ

# ಅಧ್ಯಾಯ-4

## ಜಾತ್ರಾ ಮಹೋತ್ಸವದಲ್ಲಿ ಸಾಂಸ್ಕೃತಿಕ ಕಲೆಗಳ ಪ್ರದರ್ಶನ

ಗ್ರಾಮೀಣ ಜನತೆ ಈಢೀ ವರ್ಷ ಕೃಷಿ ಕಾಯಕದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಶ್ರಮಪಟ್ಟು ಕೆಲಸ ಮಾಡಿರುತ್ತಾರೆ.ಜಾತ್ರೆಗಳು ಜನರಿಗೆ ಮನರಂಜನೆಯನ್ನು ಒದಗಿಸುತ್ತವೆ. ವರ್ಷವಿಡೀ ದುಡಿದ, ಜನರ ಮನಸ್ಸನ್ನು ರಂಜಿಸುತ್ತದೆ. ಜನಪದ ಕಲಾವಿದರಿಗೆ ತಮ್ಮ ಕಲೆಗಳ ಪ್ರದರ್ಶನಕ್ಕೆ ವೇದಿಕೆಯಾಗಿವೆ. ಈ ಜಾತ್ರೆಗಳುಮಕ್ಕಳಿಂದ ಹಿಡಿದು ವೃದ್ಧರವರೆಗೆ ಕಣ್ಣುಮಿಟುಕಿಸದ ರೀತಿಯಲ್ಲಿ ಮನರಂಜನಾ ಕಾರ್ಯಕ್ರಮಗಳ ರಸದೌತಣವನ್ನು ನೋಡಿ ಸವಿಯುತ್ತಾರೆ. ಹೀಗೆಜನರ ಮನಸಂತೋಷ ಪಡಿಸುವ ಜಾತ್ರೆಗಳು ಜನರ ಹೆಗ್ಗಳಿಕೆಗೆ ಪಾತ್ರವಾಗಿದೆ.

ದೇವರ ಮೇಲೆ ಭಕ್ತಿಭಾವ, ಮನಸ್ಸಿನ ಸಂತೋಷವಷ್ಟು ಅಲ್ಲ, ಜನಪದ ಕಲಾತಂಡಗಳಿಗೆ ಜಾತ್ರೆಗಳು ಮುಖ್ಯ ವೇದಿಕೆಯಾಗಿ ತನ್ನ ಕಲೆಗಳ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿದೆ.ಅನೇಕ ಗ್ರಾಮಗಳ ಜನ ಒಂದೆಡೆ ಕೂಡಿ ತಾವೇ ಸೃಷ್ಟಿಸಿಕೊಂಡಂತಹ ಕಲೆಯ ಪ್ರದರ್ಶನವನ್ನು ನೀಡಿ ಜನರ ಮೆಚ್ಚುಗೆಯನ್ನು ಗಳಿಸುತ್ತಾರೆ.ಆನಂತರದಲ್ಲಿ ತಮ್ಮದೇ ಕಲಾತಂಡಗಳನ್ನು ಕಟ್ಟಿಕೊಂಡು ಸಂಘಟನಾ ಶಕ್ತಿಯನ್ನು ಬೆಳಸಿಕೊಳ್ಳುತ್ತಾರೆ.ಹೀಗೆ ಸಾಂಸ್ಕೃತಿಕ ಕಲೆಗಳ ಪೋಷಕರಾಗಿ ಇದನ್ನು ತಲತಲಾಂತರವಾಗಿ(ಪೀಳಿಗೆಯಿಂದ ಪೀಳಿಗೆಗೆ) ಮುಂದುವರೆಸಿಕೊಂಡು ಬರುತ್ತಿದ್ದಾರೆ.ಹೀಗೆಜನಪದರ ಕಲೆಗಳ ಪ್ರದರ್ಶನವು ಜನರಲ್ಲಿ ಸಂಭ್ರಮ, ಸಂತೋಷ, ಮನರಂಜನೆಯನ್ನು ಗಳಿಸಿವೆ. ಜನರ ದುಃಖ-ದುಮ್ಮಾನ, ಬೇಸರವನ್ನು ಪರಿಹರಿಸಿ ಮನಸ್ಸಿನಲ್ಲಿ ಹುಮ್ಮಸ್ಸನ್ನು ತುಂಬುವಂತಹ ತಾಣಗಳಾಗಿವೆ.

ಯಂತ್ರನಾಗರೀಕತೆಯ ಈ ಯುಗದಲ್ಲಿ ಜಾತ್ರೆಗಳು ಆಧುನಿಕ ಉಪಕರಣಗಳನ್ನು ನೀಡುತ್ತೇವೆ. ಜಾತ್ರೆಗಳ ಸಂದರ್ಭದಲ್ಲಿ ಪೌರಣಿಕ ಕಥೆಗಳಾದ ನಳ-ದಮಯಂತಿ ಕಥೆ, ಸತ್ಯಹರಿಶ್ಚಂದ್ರ ಕಥೆ, ಪಾರ್ವತಿ ಕಲ್ಯಾಣ, ಭಕ್ತಪ್ರಹ್ಲಾದ ಇನ್ನೂ ಪುರಾಣ ಪ್ರಸಿದ್ಧ ರಾಮಾಯಾಣ, ಮಹಾಭಾರತ ಕಥೆಗಳನ್ನು ಒಳಗೊಂಡ ನಾಟಕಗಳನ್ನು ಹಿನ್ನೆಲೆ ಗಾಯನದೊಂದಿಗೆ ಈಡೀ ರಾತ್ರಿ ನಾಟಕವನ್ನು ಜಗಮಗಿಸುವ ವಿದ್ಯುತ್ ದೀಪದ ಭವ್ಯವಾದ ರಂಗಸಜ್ಜಿಕೆಯಲ್ಲಿ ಸ್ಥಳೀಯರೇ ವೇಷಭೂಷಣವನ್ನು ಧರಿಸಿ ಪಾತ್ರಗಳ ಮೂಲಕ ಅಭಿನಯಿಸುತ್ತಾರೆ.

ಇಷ್ಟೇ ಅಲ್ಲದೆ ಸುಗಮ ಸಂಗೀತ, ಅರ್ಕೆಸ್ಟ್ರಾ, ಸಂಗೀತ ಸಂಜೆ, ನೃತ್ಯ ಕಾರ್ಯಕ್ರವನ್ನು ಜನ ಕಣ್ತುಂಬಿಸಿಕೊಂಡು ಹಾಗೂ ಮನಸಂತೋಷ ಪಡಿಸಿಕೊಂಡು ಹೋಗುತ್ತಾರೆ.

# ಪ್ರದರ್ಶನ ಕಲೆಗಳು

## 1.ವೀರಗಾಸೆ ನೃತ್ಯ



ಇದೊಂದು ರೋಚಕ ಪ್ರದರ್ಶನದ ಕಲೆ, ಶೈವ ಪರಂಪರೆಯಲ್ಲಿ ಈ ಕಲೆಗೆ ವಿಶೇಷ ಮಹತ್ವವಿದೆ ವೀರಶೈವರಿಗೆ ಮಾತ್ರ ವಿಶಿಷ್ಟವಾದ ಈ ಕಲೆ ಅವರ ವೇಷ ಭೂಷಣದಿಂದಲೇ ಹೆಸರು ಪಡೆದುಕೊಂಡಿದೆ (ವೀರ+ಗಾಸೆ=ವೀರಗಾಸೆಯಾಗುತ್ತದೆ)ಕಾಸೆ ಕಟ್ಟಿದವರೇ ಈ ಕಲೆಯ ಪ್ರಮುಖ ಕಲಾವಿದರು ವೀರಭದ್ರನ ಕುಣಿತ ಒಬ್ಬ ಕಲಾವಿದನ ಪ್ರತಿಭಾ ಶಕ್ತಿ ಮತ್ತು ಸಾಮರ್ಥಗಳ ಅಭಿವ್ಯಕ್ತಿಯಾದರೆ ವೀರಗಾಸೆ ಸಮೂಹದ ಕಲಾವಿದರ ಕಲೆ, ಸಾಮಾನ್ಯವಾಗಿ ಜಾತ್ರೆ, ದೇವರ ಮೆರವಣಿಗೆ, ಹಬ್ಬ, ಹುಣ್ಣಿಮೆ, ಗೃಹಪ್ರವೇಶ, ಮದುವೆ-ಮುಂಜಿ ಮೊದಲಾದ ಸಂದರ್ಭಗಳಲ್ಲಿ ವೀರಗಾಸೆ ಕುಣಿತವಿರುತ್ತದೆ. ಕನಿಷ್ಠ ಎಂಟು ಅಥವಾ ಸಮ ಸಂಖ್ಯೆ ಕಲಾವಿದರು ತಲೆಗೆ ಪೇಟ ಕಾವಿಯ ಅಂಗಿ, ಬಿಳಿಯ ಕಾಸೆಪಂಚೆ, ಹಣೆಗೆ ವಿಬೂತಿ, ಶಿರದಲ್ಲಿ ಶಿವಲಿಂಗ, ಕಿರೀಟ, ವೀರ ಲಾಂಛನ, ನಾಗಾಭರಣ, ಕೊರಳಿಗೆ ರುದ್ರಾಕ್ಷಿ ಮಾಲೆ ಹಾಗೂ ನಾಗಾಭರಣ, ಕರಡಿಗೆ ಶಿವದಾರಿ, ಮೊದೆಮೀಸೆ, ಸೊಂಟದಲ್ಲಿ ಅಸುರರುಂಡಮಾಲೆ, ಸೂರ್ಯ-ಚಂದ್ರ, ಗಂಡು-ಬೇರುಂಡ, ಗಂಟೆ ಸರಪಳಿ, ಬೀಸುವ ಜಾಲ, ಮಂಡಿಯ ಕೆಳಗೆ ಐದು ಜಂಗುಗಳು, ಕಾಲಿಗೆ ಗಗ್ಗರಿ, ಕಿರುಗೆಜ್ಜೆ, ಕಟಿಬಂಧ, ಎಡಗೈಯಲ್ಲಿ ಹಲಗೆ, ಬಲಗೈಯಲ್ಲಿ ಥಳಥಳಿಸುವ ಖಡ್ಗವನ್ನು ಹಿಡಿದು, ಚಮ್ಮೇಳದ ನಾದಕ್ಕೆ ತಕ್ಕ ಹಾಗೇ ಹೆಜ್ಜೆ ಹಾಕುತ್ತಾ,

ಅರ್ಥಪೂರ್ಣವಾಗಿ ನರ್ತಿಸುವ ರೀತಿ ಅದ್ಭುತವಾದುದು ಈ ವೀರಗಾಸೆ ! ಈ ವೀರಗಾಸೆ ಕಲೆಯನ್ನು ನಮ್ಮೂರು ಚಿಕ್ಕನಹಳ್ಳಿಯ ನಮ್ಮ ಮನೆ ಪಕ್ಕದಲ್ಲೆ ಇರುವ ಸಿ.ವಿ. ವೀರಣ್ಣನವರಿಗೆ 80 ವರ್ಷ ದಾಟಿದ್ದರೂ ಇಂದಿಗೂ ವಂಶಪಾರಂಪರ್ಯವಾಗಿ ವೀರಗಾಸೆ ಕಲೆಯನ್ನು ಮುಂದುವರಿಸಿಕೊಂಡು ನಾಡಿನ ತುಂಬೆಲ್ಲಾ ವೀರಗಾಸೆಯ ಕಂಪನ್ನು ಚೆಲ್ಲುತಿದ್ದಾರೆ, ಇವರ ಪ್ರದರ್ಶನದಲ್ಲಿ ತಾಳ ಬದ್ಧ ನೃತ್ಯವಿದೆ, ವರ್ಣಿಸಲಾಗದ ಏನೋ ಒಂದು ಮೋಡಿ ಇದೆ ಈ ನಾಡಿನಲ್ಲಿ ಯಾವುದೇ ಕಾರ್ಯಕ್ರಮವಿರಲ್ಲಿ ಅಲ್ಲಿ ವೀರಣ್ಣನವರು ಕಟ್ಟಿಕೊಂಡ ಜಗಜ್ಯೋತಿ ಬಸವೇಶ್ವರ ವೀರಗಾಸೆ ಕಲಾ ತಂಡ ಹಾಜರಾಗಿ, ತಮ್ಮ ಹಾವ-ಬಾವ, ವೇಶ ಬೂಷಣಗಳಿಂದ ಕಲೆಯನ್ನು ಪ್ರದರ್ಶಿಸಿ ಜನ ಮೆಚ್ಚುಗೆ ಗಳಿಸಿದ್ದಾರೆ, ವೀರಣ್ಣನವರಿಗೆ ಮೊದಲಿನಂತೆ ಪ್ರದರ್ಶನ ನೀಡಲು ವಯಸ್ಸು ಅಡ್ಡ ಬರುತ್ತಿದ್ದರೂ, ನಮ್ಮ ಭಕ್ತಿ ಪರಂಪರೆ, ಸಂಸ್ಕೃತಿಯನ್ನು ಪ್ರತಿಬಿಂಬಿಸುವ ವೀರಗಾಸೆ ತನೊಂದಿಗೆ ಅಂತ್ಯವಾಗದಿರಲೆಂದು ತಮ್ಮ ಮಕ್ಕಳಾದ ವಿರೇಶ್‌ಕುಮಾರ, ವಿನಯ್‌ಕುಮಾರ್ ಹಾಗೂ ನಂದೀಶರವರು ತಮ್ಮ ತಂದೆಯ ಕಲೆಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ ವೀರಣ್ಣನವರ ಈ ವೀರಗಾಸೆ ಕಲೆಯನ್ನು ಮೆಚ್ಚಿ "ನಾಟ್ಯ ಕಲಾ ಬೂಷಣ" ದಸರಾ ಹಾಗೂ ರಾಜ್ಯೋತ್ಸವ ಪ್ರಶಸ್ತಿ" ಗಳನ್ನು ಗಳಿಸಿದ್ದಾರೆ ಈ ಕಲೆಯನ್ನು ಮುಂದಿನ ಪೀಳಿಗೆಗೆ ಉಳಿಸುವ ನಿಟ್ಟಿನಲ್ಲಿ ನಮ್ಮೂರಿನ ಶಾಲಾ ಕಾಲೇಜುಗಳ ಹೆಣ್ಣು ಮಕ್ಕಳಿಗೆ ತಾವೇ ಸ್ವತಃ ಕಲಿಸಿ, ಈ ಕಲೆಯನ್ನು ವೀರಗಾಸೆ ನೃತ್ಯ ರೂಪದ ಸ್ಪರ್ದೆಯಲ್ಲಿ ಬಹುಮಾನವನ್ನು ಗಳಿಸಲು ಸಹಕಾರಿಯಾಗಿದ್ದಾರೆ ವೀರಗಾಸೆ ವೀರಣ್ಣನವರು !

# 2) ಪೂಜಾ ಕುಣಿತ



ಶಕ್ತಿ ದೇವತೆಗಳಿಗೆ ಸಂಬಂದಿಸಿದ ಕುಣಿತ ಇದು ಹಬ್ಬ ಹರಿದಿನಗಳಲ್ಲಿ ಗುಡಿಯೊಳಗಿನ ದೇವತೆ ಪೂಜೆಯ ರೂಪದಲ್ಲಿ ಹೊರ ಬರುತ್ತಾಳೆ. ಬಿದಿರಿನ ತಟ್ಟೆ (ತಳಿ)ಮಧ್ಯೆ ದೇವತೆಗಳ ಮುಖವಾಡಗಳನ್ನು ಇರಿಸಿಕೊಂಡು ತಾಳಬದ್ದವಾಗಿ ಕುಣಿಯುವುದಕ್ಕೆ "ಪೂಜಾ ಕುಣಿತ" ಎನ್ನುವರು ಸುಮಾರು 4 ಅಡಿ ಉದ್ದ 4 ಅಡಿ ಅಗಲದ ಬಿದಿರಿನ ತಟ್ಟೆಗಳನ್ನು ಅದರ ಮದ್ಯೆಗಚ್ಚೆಗಳನ್ನು ಜೋಡಿಸಿ ಪೂಜೆಗೆ ಸಿದ್ದ ಪಡಿಸುತ್ತಾರೆ ಈ ವಿಧಾನಕ್ಕೆ 'ತಳಿ' ಎನ್ನುವರು ಇದರ ಮಧ್ಯಭಾಗದಲ್ಲಿ ದೇವರ

ಮುಖವಾಡಗಳನ್ನು ಕಟ್ಟಿ, ಎರಡೂ ಕಡೆಯಲ್ಲೂ, ತಳಿಯ ಉದ್ದಕ್ಕೂ ಭಕ್ತರು ಹರಕೆ ಹೊತ್ತು ಸಲ್ಲಿಸಿರುವ ಬಣ್ಣದ ಸೀರೆಗಳನ್ನು ಇಳಿ ಬಿಟ್ಟು, ತಳಿಯ ಮೇಲ್ಭಾಗದಲ್ಲಿ ಏಳು ಅಥವಾ ಒಂಭತ್ತು ಹಿತ್ತಾಳೆ ಕಳಸಗಳಿಂದ ಅಲಂಕರಿಸಿರುತ್ತಾರೆ, ಭಕ್ತರು ಹರಕೆಯ ರೂಪದಲ್ಲಿ ಸಲ್ಲಿಸಿದ ವಿವಿದ ಆಭರಣಗಳನ್ನು ಅಲಂಕರಿಸಿ ದೇವಿಯ ವಿಗ್ರಹ ಮತ್ತು ತಳಿಯ ತುಂಬ ಹೂವಿನ ಮಾಲೆಯನ್ನು ಇಳಿ ಬಿಟ್ಟು ಅಲಂಕರಿಸಿರುತ್ತಾರೆ, ಇದನ್ನು ಹೊತ್ತು ಕುಣಿಯಲು ಅನುಕೂಲವಾಗುವಂತೆ ತಳಿಯ ಕೆಳಬಾಗದ ಮಧ್ಯದಲ್ಲಿ ಕಂಚು ಅಥವಾ ಹಿತ್ತಾಳೆಯ ಗಿಂಡಿಯನ್ನು (ಬಳೆ)ಸೇರಿಸಿ ಬಿಗಿದಿರುತ್ತಾರೆ ಇದು ತಲೆಯ ಮೇಲೆ ಅಲುಗಾಡದಂತೆ ಕೂರುತ್ತದೆ. ಇದನ್ನು ಗ್ರಾಮದೇವತೆಯ ಹಬ್ಬ ಹರಿದಿನಗಳಲ್ಲಿ ಜನಪದ ಕಲಾ ಮೇಳಗಳಲ್ಲಿ ತಾಳ, ವಾದ್ಯಗಳ ಶಬ್ದದ ಲಯಕ್ಕೆ ಹೆಜ್ಜೆ ಹಾಕುತ್ತಾ ಕುಣಿಯುತ್ತಾರೆ ಹಾಗೂ ಈ ಕಲಾವಿದರು ಶಿರಾ ತಾಲ್ಲೂಕಿನ ಕಗ್ಗಲಡು ಗ್ರಾಮಗಳಲ್ಲಿ ವಾಸವಾಗಿದ್ದು, ಹಬ್ಬ ಹರಿದಿನಗಳಲ್ಲಿ, ಜಾತ್ರೆಗಳಲ್ಲಿ ಈ ಪೂಜಾ ಕುಣಿತ ಮಜಲನ್ನು ಜನತೆಗೆ ಉಣ ಬಡಿಸುತ್ತಿದ್ದಾರೆ. ನಮ್ಮೂರಿನ ಕಾಲೇಜಿನ ಸಾಂಸ್ಕೃತಿಕ ಚಟುವಟಿಕೆ ಬಗ್ಗೆ ಹೆಚ್ಚು ಆಸಕ್ತಿ ಇರುವ ಉಪನ್ಯಾಸಕರಾದ ಶ್ರೀ. ಶಂಕರ್‌ರವರು ಬಹಳ ಉತ್ಸಾಹದಿಂದ ಈ ಪುಜಾ ಕುಣಿತದ ಮಾದರಿಯನ್ನು ಶಾಶ್ವತವಾಗಿರುವಂತೆ ಕಬ್ಬಿಣದ ಕಂಬಿಗಳಲ್ಲಿ ಮಾಡಿಸಿ, ವಿದ್ಯಾರ್ಥಿನಿಯರುಗಳಿಗೆ ತರಬೇತಿ ನೀಡಿ ಕಾಲೇಜಿನ ರಾಜ್ಯೋತ್ಸವ, ಎನ್.ಎಸ್.ಎಸ್ ಕ್ಯಾಂಪ್ ಇನ್ನೂ ಇತರೆ ಸಮಾರಂಭಗಳಲ್ಲಿ ಪೂಜಾ ಕುಣಿತ ಮಾಡಿಸಿ ಜನಮೆಚ್ಚುಗೆ ಗಳಿಸಿದ್ದಾರೆ.

# 3) ಚೌಡಿಕೆ ಮೇಳ



ಈ ಕಲೆ ಗೀತ ಪ್ರದಾನವಾದುದರಿಂದ, ಯಲ್ಲಮ್ಮನ ಆರಾದನೆಯ ಪ್ರಮುಖ ಗುರಿಯುಳ್ಳದ್ದು, ಬೇಟಾಸುರನೆಂಬ ರಾಕ್ಷಸನು ಜನರಿಗೆ ಬಹಳ ಉಪಟಳಕೊಡುತ್ತಿದ್ದ, ಇದನ್ನು ರೇಣುಕಾಯಲ್ಲಮ್ಮ ದೇವಿಯು ಅವನನ್ನು ಕೊಲ್ಲಲು ಪರಶುರಾಮನಿಗೆ ತಿಳಿಸಿದಳು ಆ ಪ್ರಕಾರ ಪರಶುರಾಮ, ರಾಕ್ಷಸನನ್ನು ಕೊಂದನು ಅವನ ದೇಹದ ನರಗಳಿಂದ ತಂತಿಯನ್ನು ಮಾಡಿ ಅದರಿಂದ 'ಚೌಡಿಕೆ' ಯನ್ನು ನಿರ್ಮಿಸಿ ನುಡಿಸುತ್ತಾ ಬರುತ್ತಾನೆ ಇದರಿಂದ ಯಲ್ಲಮ್ಮನ ಭಕ್ತರು ಹಾಡುವಾಗ, ಕುಣಿಯುವಾಗ ಚೌಡಿಕೆಯನ್ನು ನುಡಿಸುತ್ತಾರೆ ಚೌಡಿಕೆ ಒಂದು ಚರ್ಮವಾದ್ಯ ಸವದತ್ತಿ ಯಲ್ಲಮ್ಮನ ಭಕ್ತರನ್ನು ಚೌಡಿಕೆಯವರು ಅನ್ನುತ್ತಾರೆ, ಚೌಡಿಕೆಯವರು ಯಲ್ಲಮ್ಮನ ಮಹಿಮೆಯನ್ನು ಪ್ರಸಾರ ಮಾಡುತ್ತಾ ಯಲ್ಲಮ್ಮನ ಪೂಜೆಯಲ್ಲಿ ಬಾಗಿಯಾಗುತ್ತಾ, ಆಕೆಯ ಹೆಸರಿನಲ್ಲಿಯೇ ಕಾವ್ಯಕಟ್ಟಿ ಹಾಡುವ ಸಂಪ್ರದಾಯ ಯಲ್ಲಮ್ಮನ ಭಕ್ತರದು ಇವರು ಮಾಡುವ ಕಲಾಮೇಳವೇ ಚೌಡಿಕೆ ಮೇಳದ ಕಥೆಯನ್ನು ನಿರೂಪಿಸುತ್ತಾ, ಚೌಡಿಕೆಯನ್ನು ನುಡಿಸುತ್ತಾ ನರ್ತಿಸುವುದೇ ವಿಶಿಷ್ಟ ಕಲೆ, ಚೌಡಿಕೆ ಕಲಾವಿದರನ್ನು ದಾರ್ಮಿಕ ಸಂಪ್ರದಾಯ ಹಾಗೂ ಲೌಕಿಕ ಸಂಪ್ರದಾಯದವರು ಎಂದು ಎರಡು ಬಾಗಗಳಾಗಿ ವಿಂಗಡಿಸಬಹುದು, ದಾರ್ಮಿಕ ಸಂಪ್ರದಾಯವೆಂದರೆ ಯಲ್ಲಮ್ಮನ ಭಕ್ತರಾಗಿ, ದೀಕ್ಷೆಪಡೆದು, ವಿದಿ ಬದ್ದರಾಗಿ ದೇವಿಯ ಕಥೆಯನ್ನು ಹಾಡುತ್ತಾ ದೇಶಪರ್ಯಟನೆ ಮಾಡುವವರು, ಇಲ್ಲಿ ಬಿಕ್ಷೆ ಇವರ ಉದ್ದೇಶವಲ್ಲ, ದೇವಿಯ ಪಂಥದ ಪ್ರಚಾರ ಇವರ ಪ್ರಮುಖ ಉದ್ದೇಶ ಆದರೆ ಲೌಕಿಕ ನಾಯಕರು ಯಲ್ಲಮ್ಮನ ಭಕ್ತರೇ ಆದರೂ ದೀಕ್ಷೆ ಪಡೆದ ವಿಧಿಬದ್ದ ಸೇವಕರಲ್ಲ ಚೌಡಿಕೆ ಇವರ ಹವ್ಯಾಸ ಶಿರಾ ತಾಲ್ಲೂಕಿನ ನಾಯಕರು ಮಹಾಲಿಂಗಪ್ಪ ಹಾಗೂ ಇವರ ತಂಡ , ನಿಡಗಟ್ಟೆಯ ರಾಮಣ್ಣ, ಶಿರಾದ ಶಿವಕುಮಾರ್ ಹಾಗೂ ಚಿನ್ನಪ್ಪನಹಳ್ಳಿ ಹಾಗೂ ಚಿಕ್ಕದಾಸರಹಳ್ಳಿಯಲ್ಲಿ ಚೌಡಿಕೆ ಮೇಳದ ಕಲಾವಿದರಿದ್ದಾರೆ.

## 4) ನಂದಿ ದ್ವಜ ಕುಣಿತ



ನಂದಿ ದ್ವಜವನ್ನು ನಂದಿಕಂಬ ನಂದಿಕೋಲು, ನಂದಿ ಪಟ ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತದೆ ಸದ್ಯಕ್ಕೆ ಕರ್ನಾಟಕದಲ್ಲಿ ಮೈಸೂರು ಅರಸರ ಸಂಬಂದಿ ಉತ್ಸವಗಳಲ್ಲಿ, ಮೈಸೂರು ದಸರಾ ಮಹೋತ್ಸವಗಳಲ್ಲಿ, ದೇವರ ಉತ್ಸವಗಳಲ್ಲಿ ಮಾತ್ರ

ನಂದಿಧ್ವಜ ಕುಣಿತ ಪ್ರದರ್ಶಿಸುತ್ತಾರೆ. ನಂದಿ ಕಂಬ ಹೊತ್ತು ಕುಣಿಯುವ ಕಲಾವಿದರು ಗಂಡುಗಜ್ಜೆ ಹಾಕಿ ದೋತ್ರ ಧರಿಸಿರುತ್ತಾರೆ, ತಲೆಗೆ ಪೇಟ, ಹಣೆಗೆ ವಿಭೂತಿ, ಕಾಲಿಗೆ ಗಜ್ಜೆ, ನಂದಿಕಂಬವನ್ನು ಹಿಡಿದುಕೊಳ್ಳುವ, "ನವಾರ" ಇವಿಷ್ಟು ಕುಣಿತಗಾರರ ವೇಷಭೂಷಣ ನಂದಿಕಂಬವನ್ನು ಕುಣಿಸುವ ಕಲಾವಿದ ಬಲಿಷ್ಟ ದೇಹವುಳ್ಳವನಾಗಿರಬೇಕು ಹಾಗೂ ಕುಣಿಸುವಾಗ ಕಂಬ ಅತ್ತ-ಇತ್ತ ವಾಲದ ಹಾಗೇ ಸರಿದೂಗಿಸುವ ಜಾಣ್ಮೆ ಇರಬೇಕು ಈ ಕುಣಿತಕ್ಕೆ ಸಾಮಾನ್ಯವಾಗಿ ತಮಟೆ ನಗಾರಿಗಳನ್ನು ಬಳಸಲಾಗುವುದಿಲ್ಲ, ಬೆಟ್ಟಕ್ಕೆ ಹೋಗಿ ಗಟ್ಟಿ ಮುಟ್ಟಾದ, ಬಾಗಿರದೆ ಸಮಾಂತರವಾಗಿರುವ ಬಲಿತ ಬಿದುರು ಗಂಬವನ್ನು ಕಡಿದು ತಂದು ದೇವಸ್ಥಾನದಲ್ಲಿ ಇಡಲಾಗುತ್ತದೆ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಈ ಎತ್ತರವಾದ ಕಂಬಕ್ಕೆ ಬಣ್ಣದ ಬಟ್ಟೆಗಳನ್ನು ಸುತ್ತಿ, ಕಂಬದ ತುದಿಯಲ್ಲಿ ನಂದಿಯ ವಿಗ್ರಹವನ್ನು ಮತ್ತು ಶಂಖನಾದ ಮಾಡುವ ಗೆಜ್ಜೆ ಅಥವಾ ಗಂಟೆಯನ್ನು ಕಟ್ಟಿಕೊಂಡು ಭುಜದಿಂದ ಕೆಳಗೆ ಒಂದು ಚೀಲವನ್ನು ಮತ್ತು ಶಂಖನಾದ ಮಾಡುವ ಗೆಜ್ಜೆ, ಅದಕ್ಕೆ ನಂದಿಕೋಲನ್ನು ಇಟ್ಟುಕೊಂಡು ಕುಣಿಯುವಂತಹ ಒಂದು ಪ್ರದರ್ಶನಾತ್ಮಕ ಕಲೆ, ಡೊಲುವಾದ್ಯ, ತಾಳ, ಮೃದಂಗ ಇವುಗಳ ಜೊತೆಗೆ ನಾಗಸ್ವರ ನುಡಿಸುತ್ತಾ, ತಾಳಕ್ಕೆ ತಕ್ಕ ಹಾಗೇ ನಯವಾಗಿ ನರ್ತಿಸುತ್ತಾರೆ, ಶಿರಾ ತಾಲ್ಲೂಕಿನ ನಾದೂರು, ಯಲಿಯೂರು, ಮದಲೂರು, ಪಟ್ಟನಾಯಕನಹಳ್ಳಿ ಇನ್ನು ಮುಂತಾದ ಶಿವ ದೇವಾಲಯಗಳ ಜಾತ್ರೆ-ಉತ್ಸವಗಳಲ್ಲಿ ಈ ಕಲೆ ಪ್ರದರ್ಶನಗೊಳ್ಳುತ್ತದೆ. ನಮ್ಮೂರ ಚಿಕ್ಕನಹಳ್ಳಿಯ ಹನುಮಂತರಾಯಪ್ಪ, ವೀರೇಶ್ ಕುಮಾರ್, ಪಟ್ಟನಾಯಕನಹಳ್ಳಿಯ ತಿಪ್ಪೆಸ್ವಾಮಿ, ಗಂಗಾದರ, ನರಸಿಂಹಯ್ಯ, ಮದಲೂರಿನ ಬಸವರಾಜಪ್ಪ, ಕಲ್ಲಪ್ಪ, ಲೋಕೇಶ, ಹಾಗೂ ಬಂಗಾರಿ ಶಿವಣ್ಣ ಇನ್ನು ಮುಂತಾದವರು ನಂದಿಗೋಲು ಕುಣಿತದ ಕಲಾವಿದರಿದ್ದಾರೆ. ಸಿರಾ ಕೋಟೆಯ ಯುವಕರುಗಳು ಇತ್ತೀಚೆಗೆ ನಂದಿ ಧ್ವಜ ಕುಣಿತವನ್ನು ಕಲಿಯುತ್ತಿದ್ದಾರೆ.

## 5) ಕೀಲು ಕುದುರೆ ನೃತ್ಯ



ಕೀಲುಕುದುರೆ ನೃತ್ಯ ಹೆಸರೇ ಹೇಳುವಂತೆ ಕೀಲುಗಳಿಂದ ರಚಿತವಾದದ್ದು, ಕೀಲುಕುದುರೆಯನ್ನು ಮುಖ್ಯವಾಗಿ ಬಿದಿರಿನ ದಬ್ಬೆಗಳಿಂದ ರಚಿಸಿರುತ್ತಾರೆ, ಕಾಲುಗಳನ್ನು ಮಾತ್ರ ಬಿಟ್ಟು ಉಳಿದ ಹೊಟ್ಟೆ, ಎದೆ ಮತ್ತು ಹಿಂಬಾಗವನ್ನು ಕಾಗದ ರಟ್ಟಿನಿಂದ ರಚಿಸಿರುತ್ತಾರೆ, ಇದರ ಒಳಬಾಗ ಟೊಳ್ಳಾಗಿರುತ್ತದೆ. ಕುದುರೆಯು ಕುಣಿಯುವಾಗ ಅದರ ನಾಲಗೆಯು ಮೇಲೆ-ಕೆಳಗೆ ಚಲಿಸುವಂತೆ ಕೀಲನ್ನು ಆಳವಡಿಸಿರುತ್ತಾರೆ ಕುದುರೆ ಆಕಾರದ ಬಿದಿರಿಗೆ ಅದೇ ಅಳತೆಯ ಬಣ್ಣ ಬಣ್ಣದ ಗೌನನ್ನು ಹೊದಿಸಿರುತ್ತಾರೆ, ರಾಜ-ರಾಣಿಯರ ವೇಷಭೂಷಣವನ್ನು ಧರಿಸಿದ ಕಲಾವಿದರು ಈ ಕುದುರೆಯ ದಬ್ಬೆಯ ದೇಹವನ್ನು ಬಿಗಿದುಕೊಳ್ಳುವರು, ಕೈಯಲ್ಲಿ ಲಗಾಮು ಹಿಡದುಕೊಂಡು, ಅದರ ತಲೆ ಬಾಲಗಳನ್ನು ಆಡಿಸುತ್ತಾ ಹಿಂದು-ಮುಂದು ಮಾಡಿ ಕುಣಿದಾಗ ಅದು ಕುದುರೆಯ ಭಂಗಿಯಂತೆ ಕಾಣುತ್ತದೆ.

ಶಿರಾ ತಾಲ್ಲೂಕಿನ ಕಗ್ಗಲಡುವಿನ ಲಿಂಗಪ್ಪ ಹಾಗೂ ಅದರ ಮಗನಾದ ಪಾತಲಿಂಗಪ್ಪ, ಸೀರಾಲಾಡಪುರದ ಪಾತಲಿಂಗಪ್ಪ, ಹನುಮಂತಪ್ಪ ಹಾಗೂ ನಮ್ಮೂರಿನ ಪಕ್ಕದ ಗ್ರಾಮದ ಹಾಲೇನಹಳ್ಳಿ ರಂಗದಾಸಪ್ಪ ಎಂಬ ಕೀಲುಕುದುರೆ ಕಲಾವಿದ್ದರಿದ್ದಾರೆ,

ಹಾಗೆಯೇ ಇವರು ನವಿಲು ಕುಣಿತದ ಕಲಾವಿದರೂ ಆಗಿದ್ದು ರಾಜ್ಯೋತ್ಸವ ಮತ್ತು ಗಣೇಶನ ವಿಸರ್ಜನೆ ಸಮಾರಂಭಗಳಲ್ಲಿ ತಮ್ಮ ಕಲಾ ಪ್ರದರ್ಶನಗಳನ್ನು ಪ್ರದಶಿಸುತ್ತಾರೆ.

# 6) ಗೊರವರ ಕುಣಿತ



ಮೈಲಾರಲಿಂಗನ ಒಕ್ಕಲುಗಳಾದ ಈ ಗೊರವರು ಕಲಾವಿದರೂ ಹೌದು, ಗೊರವರ ಬಗೆಗೆ ಜಾನಪದ ಸಾಹಿತ್ಯದಲ್ಲಿ ಅಪಾರ ನಂಬಿಕೆ ಇದೆ ಸ್ವಯಂ ಪರಶಿವನು ಭೂಲೋಕದಲ್ಲಿ ಮಲ್ಲಾಸುರ ಹಾಗೂ ಮಳಕಾಸುರ ಎಂಬ ರಾಕ್ಷಸರ ಸಂಹಾರಕ್ಕಾಗಿ ಗೊರವನ ವೇಷದಲ್ಲಿ ಬೂಲೋಕಕ್ಕೆ ಬಂದು ಏಳು ಮಂದೆ ಕುರಿಯ ಒಡೆಯರಾದ ಕಾಳಿಂಗರಾಯ ಎಂಬುವರ ಮಗಳನ್ನು ಮೋಹಿಸಿದ, ಶಿವನು ಆಕೆಯನ್ನು ಅಪಹರಿಸುತ್ತಾನೆ ತಂಗಿಯನ್ನು ಬಿಡಿಸಿಕೊಳಲು ಆಕೆಯ ಏಳು ಅಣ್ಣಂದಿರು ಶಿವನನ್ನು ಹಿಂಬಾಲಿಸುತ್ತಾರೆ. ಆಗ ಶಿವನು ಆ ಏಳು ಸೊದರರಿಗೂ ಕ್ರಮವಾಗಿ ಬಂಗಾರದ ಭರಣಿ, ಕವಡೆ, ಸರ, ಡಮರುಗ, ದೊಣ್ಣೆಗಳನ್ನು ನೀಡಿ ಗೊರವಯ್ಯಗಳಾಗಿ ತನ್ನ ಸೇವೆ

ಮಾಡುವಂತೆ ಸೂಚಿಸಿದ್ದರಿಂದ ಭೂಲೋಕದಲ್ಲಿ ಗೊರವಯ್ಯಗಳಾಗಿದ್ದಾರೆಂಬ ನಂಬಿಕೆಯು ಜನಪದರಲ್ಲಿದೆ.

ಗೊರವ ದೀಕ್ಷೆಯಾದವರು ಮಾತ್ರ ಗೊರವಪ್ಪರಾಗಬಹುದು ಈ ನಂಬಿಕೆಗೆ ಅನುಗುಣವಾಗಿ ಗೊರವ ದೀಕ್ಷೆಯನ್ನು ಶಾಸಸ್ತ್ರೋಕ್ತವಾಗಿ ನೀಡುತ್ತಾರೆ, ಡಮರುಗ, ಬಂಗಾರದ ಚೀಲ, ತ್ರಿಶೂಲ, ದೋಣಿ, ಕವಡೆ ಸರವನ್ನು ಧರಿಸಿದ ಈ ಗೊರವರು ತಲೆಯಲ್ಲಿ ಕರಡಿಯ ಚರ್ಮದಿಂದ ಮಾಡಿದ ಟೋಪಿ, ಹೆಗಲಲ್ಲಿ ಕರಿ ಕಂಬಳಿ ಹಾಕಿ, ಮುಖದ ತುಂಬ ಬಂಡಾರ ಬಳಿದು, ಹಣೆಯಲ್ಲಿ ವಿಭೂತಿ ದರಿಸಿ, ಡಮರುಗದ ನುಡಿಗೆ ಕೊಳಲನ್ನು ಊದುತ್ತಾ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತಾ ನರ್ತಿಸುವ ರೀತಿ ಅದ್ಬುತವಾಗಿರುತ್ತದೆ. ಗೊರವರ ಸಂಪ್ರದಾಯದಲ್ಲಿ ಯಾವುದೇ ಜಾತಿ–ಬೇದವಿರುವುದಿಲ್ಲ ಬೇಡ, ಬೆಸ್ತ, ಬೋವಿ, ಉಪ್ಪಾರ, ಅಗಸ, ಕುರುಬ, ಕುಂಬಾರ, ಲಿಂಗಾಯಿತ, ಬ್ರಾಹ್ಮಣ, ಹರಿಜನ, ಗಿರಿಜನರೆಲ್ಲರೂ ಮೈಲಾರ ಲಿಂಗಪ್ಪನ ಭಕ್ತರಿದ್ದಾರೆ, ಗೊರವರ ಕುಣಿತ ಆಕರ್ಷಣಿಯ ಕಲಾ ಪ್ರದರ್ಶನ. ಇಂದು ಈ ಕಲೆ ಮಾಯವಾಗುತ್ತದೆ, ಸರ್ಕಾರದವರು ಇನ್ನು ಮುಂದಾದರೂ ಈ ಜನಪದ ಕಲೆಗಳ ಪ್ರಾಕಾರಗಳನ್ನು ಉಳಿಸಿ ಬೆಳಸಬೇಕಾಗುತ್ತದೆ. ಇಂತಹ ಕಲೆಗಳನ್ನು ಪ್ರದರ್ಶಿಸುತ್ತಿರುವ ಹಿರಿಯ ಕಲಾವಿದರನ್ನು ಗುರುತಿಸಿ ಅದರ ಮಾರ್ಗದರ್ಶನವನ್ನು ಕಿರಿಯರ ಕಲಾವಿದರಿಗೆ ಒಂದು ಸೂಕ್ತ ವೇದಿಕೆಯಲ್ಲಿ ತರಬೇತಿ ನೀಡಬೇಕಾಗಿರುತ್ತದೆ. ಶಿರಾ ತಾಲ್ಲೂಕಿನ ದ್ವಾರನಕುಂಟೆ, ನಿಡಗಟ್ಟೆ, ಯಲಿಯೂರು, ಹೆಗ್ಗನಹಳ್ಳಿ ಬರಗೂರು ಬೇವಿನಹಳ್ಳಿ, ಪಟ್ಟನಾಯಕನಹಳ್ಳಿ ಇಲ್ಲೆಲ್ಲಾ ಗೊರವರ ಕುಣಿತದ ಕಲಾವಿದರಿದ್ದಾರೆ, ಹುಣಸೇಹಳ್ಳಿ ರಾಜಣ್ಣನವರ ತಂಡದವರು ಕರ್ನಾಟಕ ಸರ್ಕಾರದ ಸಾಂಸ್ಕೃತಿಕ ವಿನಿಮಯ ಯೋಜನೆಯಲ್ಲಿ ಬಾಂಬೆಯಲ್ಲಿ ನಡೆದ ಕರ್ನಾಟಕ ಜಾನಪದ ಪರಂಪರೆಯ ಉತ್ಸವದಲ್ಲಿ ಬಾಗವಹಿಸಿ ಮೆಚ್ಚುಗೆಗಳಿಸಿ, ಪ್ರಶಸ್ತಿ ಗಳಿಸಿ ಕರ್ನಾಟಕ ರಾಜ್ಯಕ್ಕೆ ಹೆಮ್ಮೆ ತಂದಿದ್ದಾರೆ.

# 7) ದಾಸಯ್ಯನೊರು



ನಮ್ಮ ಹಳ್ಳಿಗಳಲ್ಲಿ ಸಾಮಾನ್ಯವಾಗಿ ಶುಭ ಸಮಾರಂಭಗಳಲ್ಲಿ ಜೋಯಿಸರಂತೆ ಕೆಲಸ ನಿರ್ವಹಿಸುತ್ತಾ, ದೇವರ ಉತ್ಸವದ ಮುಂದೆ ಮೊದಲು ದಾಸಯ್ಯನ ಜಾಗಟೆ, ಶಂಖನಾದ ಮೊಳಗಿದ ಮೇಲೆಯೇ ಉತ್ಸವ ಹೊರಡುವ ಶುಭ ಸೂಚನೆ. ಇವರು ತಲೆಗೆ ಹಳದಿ ರುಮಾಲು ಹಾಗೂ ನೂಲಿದ ದುಂಡಿ ಸರ, ಮೈಗೆ ನಿಲುವಂಗಿ, ಕೊರಳಿಗೆ ತುಳಸಿಹಾರ ಹಾಗೂ ಹನುಮಂತನ ವಿಗ್ರಹವಿರುವ ದೊಡ್ಡ ಕಂಚಿನ ಪದಕ, ಬಲಗೈಯಲ್ಲಿ ಜಾಗಟೆ, ಎಡಗೈಯಲ್ಲಿ ಶಂಖ, ಹಣೆಯ ಮೇಲೆ ಮೂರುನಾಮ, ಬಗಲಿಗೆ ಬವನಾಸಿ ಹೊತ್ತು ಜಾಗಟೆ ಶಂಖನಾದ ಮಾಡುತ್ತಿದ್ದರೆ ಯಾವುದೋ ಹಬ್ಬ ಹುಣ್ಣಿಮೆ ಇರಬೇಕೆಂಬ ನಮ್ಮ ಜನರ ನಂಬಿಕೆ. ದಾಸಯ್ಯನವರು ಹಬ್ಬದ ದಿನಗಳಲ್ಲಿ ನಮ್ಮ ಮನೆಯ ಮುಂದೆ ಬಂದಾಗ, ನಾವುಗಳು ಕಾಲಿಗೆ ನೀರಿಹಾಕಿ, ಬಲಗಾಲಿನಿಂದ ಮೊದಲು ಮನೆಯ ಹೊಸಲನ್ನು ದಾಟಿಸಿ, ಮನೆಯಲ್ಲಿರುವ ದೇವರ ಗುಡಿಯ ಮುಂದೆ

ದೀಪದ ಗರುಡ ಗಂಬ ಇರಿಸಿ ಪೂಜೆ ಮಾಡಿಸಿ, ಅಂದು ದಾಸಯ್ಯನಿಗೆ ಹಬ್ಬದ ಅಡಿಗೆಯನ್ನು ಎಡೆಹಾಕಿ, ವೈವೇದ್ಯ ಮಾಡಿದ ಮೇಲೆ ಮನೆಮಂದಿಯೆಲ್ಲಾ ತೃಪ್ತಿಯಿಂದ ಹಬ್ಬದ ಅಡಿಗೆಯನ್ನು ಸವಿಯುತ್ತಾರೆ. ಇಂದಿಗೂ ಎಷ್ಟೋ ಮನೆಗಳಲ್ಲಿ ಹಬ್ಬ ಹರಿದಿನಗಳಲ್ಲಿ, ಶುಭ ಕಾರ್ಯಗಳಲ್ಲಿ ದಾಸಯ್ಯನಿಗೆ ಎಡೆ ಹಾಕುವ ಪದ್ಧತಿ ಇಂದಿಗೂ ರೂಡಿಯಲ್ಲಿದೆ.

**"ಹಬ್ಬದಲ್ಲಿ ದಾಸಯ್ಯನಿಗೆ ಎಡೆ ಇಲ್ಲದೆ ಊಟವಿಲ್ಲಾ, ಜಾಗಟೆ, ಶಂಖನಾದವಿಲ್ಲದೆ ಉತ್ಸವ ಹೊರಡೋಲ್ಲಾ"** ಎಂಬ ಗಾದೆಯಂತೆ ಇಂದಿಗೂ ಗ್ರಾಮಗಳಲ್ಲಿ ಆರತಿ-ಉತ್ಸವಗಳು ಹೊರಡುವಾಗ ದಾಸಯ್ಯನ ದೀಪದ ಗರುಡ ಗಂಭಕ್ಕೆ ಮೊದಲು ಪೂಜೆ ಸಲ್ಲಿಸಿ ಉತ್ಸವವನ್ನು ಹೊರಡಿಸುತ್ತಾರೆ. ಅದೇ ರೀತಿ ಜಾತ್ರೆಗಳಲ್ಲಿ, ಉತ್ಸವಗಳಲ್ಲಿ, ಹರಿಸೇವೆ, ಅನ್ನ ಸಂತರ್ಪಣೆ, ನಡೆಯುವಾಗ ದಾಸಯ್ಯನಿಗೆ ಮೊದಲು ಎಡೆಹಾಕಿ, ಪೂಜೆ ಮಾಡಿ, ಶಂಕನಾದ ಮೊಳಗಿದ ಮೇಲೆಯೇ ಭಕ್ತರೆಲ್ಲರೂ "ಗೋವಿಂದ", "ಗೋವಿಂದ" ಎಂದು ಹರಿಸ್ಮರಣೆ ಮಾಡಿದ ಮೇಲೆಯೇ ಊಟ ಮಾಡುವ ಪದ್ಧತಿಯನ್ನು ಇಂದಿಗೂ ರೂಡಿಸಿಕೊಂಡಿದ್ದಾರೆ. ಇಂದು ದಾಸಯ್ಯನವರುಗಳು ಸಂಖ್ಯೆ ಕಡಿಮೆ ಇರುವ ಪ್ರಯುಕ್ತ ಹಬ್ಬ ಹರಿದಿನಗಳಲ್ಲಿ ಊರಿನ ದೇವಸ್ಥಾನದ ಮುಂದೆ, ಸಾಮೂಹಿಕವಾಗಿ ಎಲ್ಲರೂ ಎಡೆ ಹಾಕಿ ಪೂಜೆ ಮಾಡಿದ ಮೇಲೆಯೇ ಗ್ರಾಮಸ್ಥರು ಊಟ ಮಾಡುವ ಪದ್ಧತಿಯನ್ನು ಇಂದಿಗೂ ರೂಡಿಯಲಿಟ್ಟುಕೊಂಡಿದ್ದಾರೆ. ಗ್ರಾಮೀಣ ಭಾಗಗಳಲ್ಲಿ ಎಷ್ಟೋ ಗ್ರಾಮಗಳಲ್ಲಿ ದಾಸಯ್ಯನವರ ವಂಶದವರು ವಿದ್ಯಾವಂತರಾಗಿ ಪಟ್ಟಣ ಸೇರಿರುವುದರಿಂದ, ಇಂದು ದಾಸಯ್ಯನವರ ಸಂಖ್ಯೆ ಕಡಿಮೆ ಇದ್ದು, ಕೆಲವರು ಮಾತ್ರ ಈ ವೃತ್ತಿಯನ್ನು ವಂಶಪಾರಂಪರ್ಯವಾಗಿ ನಡೆಸಿಕೊಂಡು ಬರುತ್ತಿದ್ದಾರೆ ಇಂದಿಗೂ ನಮ್ಮೂರು ಚಿಕ್ಕನಹಳ್ಳಿ ಗ್ರಾಮದಲ್ಲಿ ರಂಗಣ್ಣ, ಚಂದ್ರಣ್ಣ ಎಂಬುವರುಗಳು ಮಾತ್ರ ಈ ವೃತ್ತಿಯನ್ನು ನಡೆಸಿಕೊಂಡು ಬರುತ್ತಿದ್ದಾರೆ.

# 8) ಕರಪಾಳ ಮೇಳ



ಇದರಲ್ಲಿ ವೀರಶೈವರೂ ಅದರಲ್ಲಿಯೂ ಜಂಗಮರು ಪಾಲ್ಗೊಳ್ಳುತ್ತಾರೆ, ಅವರಲ್ಲಿ ಮುಖ್ಯ ಕಲಾವಿದರನ್ನು "ಕರಪಾಲದಯ್ಯ" ನೆಂದು ಕರೆಯುವುದು ವಾಡಿಕೆ. ಕರಪಾಲ

ಕಲಾವಿದರು, ವೀರಗಚ್ಚೆ ಹಾಕಿ, ಬಿಳಿಯ ಜುಬ್ಬ ತೊಟ್ಟು, ತಲೆಗೆ ಉದ್ದನೆಯ ಕುಲಾವಿ ಧರಿಸಿ, ಕತ್ತಿಗೆ ರುದ್ರಾಕ್ಷಿ ಸರ, ಕಿವಿಗಳಿಗೆ ಗುಂಡು, ಕಾಲಿಗೆ ಗೆಜ್ಜೆ ದರಿಸುತ್ತಾರೆ, ಹೆಚ್ಚು ಕಡಿಮೆ ಪೌರಾಣಿಕ ನಾಟಕಕಾರರು ದರಿಸುವ ಉಡುಪನ್ನು ಇವರು ದರಿಸಿರುತ್ತಾರೆ. ಮೇಳದಲ್ಲಿ ಮುಖ್ಯವಾಗಿ ಮೂರು ಜನ ಕಲಾವಿದರಿರುತ್ತಾರೆ. ಅವರಲ್ಲಿ ಒಬ್ಬ ಮುಖ್ಯ ಕಥೆಗಾರನಿರುತ್ತಾರೆ ಉಳಿದವರು ಹಿಮ್ಮೇಳದವರು, ಕೈಯಲ್ಲಿ ಒಬ್ಬ ಶಿಷ್ಯ ದಮ್ಮಡಿ, ಇನ್ನೊಬ್ಬ ತಾಳ ಹಿಡಿದಿರುತ್ತಾನೆ, ಕುಣಿತ, ಹಾಡು, ಸಂಬಾಷಣೆಗಳಿಂದ ರಂಜನೀಯವಾಗಿ ಸಾಗುವ ಕರಪಾಳಮೇಳಕ್ಕೆ ಗಟ್ಟಿಯಾದ ಪೌರಾಣಿಕ ವಸ್ತುವನ್ನೇ ಬಳಸಿಕೊಂಡು ಮೇಳ ನಡೆಸುತ್ತಾರೆ. ಕಾಡು ಸಿದ್ದಮ್ಮನ ಕಥೆ, ಬಾಲನಾಗಮ್ಮನ ಕಥೆ, ಲವಕುಶರ ಕಾಳಗ, ಸತ್ಯ ಹರಿಶ್ಚಂದ್ರ ಮುಂತಾದ ಪೌರಾಣಿಕ ವೀರರನ್ನೇ ಕಥೆಗೆ ವಸ್ತುಗಳನ್ನು ಬಳಸಿಕೊಳ್ಳಲಾಗುತ್ತದೆ. ಇವುಗಳ ಜೊತೆಗೆ ಜಾನಪದ ಕಥೆ, ಐತಿಹ್ಯವನ್ನು ಕರಪಾಲಕ್ಕೆ ವಸ್ತುವನ್ನಾಗಿ ಮಾಡಿಕೊಂಡು, ಕತೆ ಮಾಡುವ ಪರಂಪರೆಯೂ ಬೆಳೆದು ಬಂದಿದೆ, ಕುಣಿತ ಹಾಡಿನ ಜೊತೆಗೆ ಕಥೆಯ ಮದ್ಯದಲ್ಲಿ ಒಂದು ಉಪ ಕಥೆಗಳನ್ನು ಹೇಳುತ್ತಾ, ಹಾಸ್ಯ ಪ್ರಸಂಗವನ್ನು ಸೃಷ್ಟಿಸುತ್ತಾರೆ, ಏಕತಾನತೆಗೆ ವೈವಿದ್ಯತರುವ ಮೂಲಕ ಪ್ರೇಕ್ಷಕರನ್ನು ಹಿಡಿದಿಡಬಹುದು. ಸರಳ ತಂತ್ರವನ್ನು ಕರಪಾಳ ಮೇಳದ ಪ್ರಸಂಗಗಳಲ್ಲಿ ಕಾಣಬಹುದು ಈ ಕಲಾ ಪ್ರದರ್ಶನವನ್ನು ಜಾತ್ರೆ, ಗಣೇಶನ ಉತ್ಸವ ಮುಂತಾದ ವಿಶೇಷ ಸಂದರ್ಭಗಳಲ್ಲಿ ಈ ವ್ಯಕ್ತಿ ಗಾಯನ ಕರಪಾಳ ಮೇಳದ ಕಲಾವಿದರನ್ನು ಆಹ್ವಾನಿಸಿ, ಕಾರ್ಯಕ್ರಮವನ್ನು ಏರ್ಪಡಿಸುವ ಸಂಪ್ರದಾಯ ನಮ್ಮ ಗ್ರಾಮೀಣ ಜನರಲ್ಲಿ ಕಂಡು ಬರುತ್ತದೆ. ಸಿರಾ ತಾಲ್ಲೂಕಿನಲ್ಲಿ ಶಾಗದಡು ರಾಮಕೃಷ್ಣ, ಮದುಸೂದನ್ ಹಾಗೂ ಕಗ್ಗಲಡು ಗ್ರಾಮದ ರಾಮೇಗೌಡರುಗಳು ಕರಪಾಲಮೇಳದ ಕಲಾವಿದರಾಗಿದ್ದು, ನಮ್ಮ ನಾಡಿನಲ್ಲಿ ಅನೇಕ ಕಡೆಗಳಲ್ಲಿ ತಮ್ಮಲ್ಲಿರುವ ಕಲೆಯನ್ನು ಪ್ರದಶಿಸುತ್ತಿದ್ದಾರೆ.

## 9) ತಮಟೆ ಕುಣಿತ



ಹರಿಜನ ಅದರಲ್ಲೂ ಮುಖ್ಯವಾಗಿ ಆದಿಕರ್ನಾಟಕದವರು ವಾದನ ವಿಶೇಷವೆಂಬುದು ತಮಟೆಗಿರುವ ಹೆಗ್ಗಳಿಕೆ, ತಮಟೆಗೆ ಕಿ.ಶ. 9 ನೇ ಶತಮಾನದ ವಡ್ಡಾರಾಧನೆ ಕೃತಿಯಲ್ಲಿಯೇ ಇದರ ಬಗ್ಗೆ ಪ್ರಾಚೀನ ಇತಿಹಾಸವಿದೆ ತಮಟೆಯು ಹಳ್ಳಿಯ ಸಾಂಸ್ಕೃತಿಕ ಜೀವನದಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಜಾತ್ರೆ, ಉತ್ಸವ, ಕುಣಿತ,

ಹಬ್ಬ, ಬಯಲಾಟ, ಮೆರವಣಿಗೆಗಳಿಗೆ ತಮಟೆ ಅವಶ್ಯಕ. ಇಂದು ನಮ್ಮ ಹಳ್ಳಿಯಲ್ಲಿ ಯಾವುದಾದರೋ ಮುಖ್ಯ ವಿಷಯದ ಬಗ್ಗೆ ಒಂದು ನಿದಿಷ್ಟ ದಿನಾಂಕದಂದು ಗ್ರಾಮದಲ್ಲಿ ತಮಟೆ ಹೊಡೆದು ಡಂಗೂರ ಸಾರುತ್ತಾರೆ. ಉದಾಹರಣೆಗೆ ಆರೋಗ್ಯ ಇಲಾಖೆಯವರು ಮಕ್ಕಳಿಗೆ "ಪಲ್ಸ್ ಪೋಲಿಯೋ ಲಸಿಕೆ" ಹಾಕುವ ಬಗ್ಗೆ,

"ಆರೋಗ್ಯ ತಪಾಸಣೆ" ಬಗ್ಗೆ, ಪಶುಪಾಲನೆ ಇಲಾಖೆಯವರು "ಪಶು ಆರೋಗ್ಯ ತಪಾಸಣೆ" ಬಗ್ಗೆ, ಗ್ರಾಮ ಪಂಚಾಯಿತಿಯವರು ಗ್ರಾಮ ಸಭೆ ನಡೆಸುವ ಬಗ್ಗೆ, ಇನ್ನು ಕನ್ನೇರಮ್ಮನ ಪೂಜೆ, ಆಂಜನೇಯ ಸ್ವಾಮಿಗೆ ಮತ್ತು ಮಾರಮ್ಮನಿಗೆ ಆರತಿ ಮಾಡುವ ಬಗ್ಗೆ, ಗ್ರಾಮದಲ್ಲೆಲ್ಲಾ ತಮಟೆ ಹಾಕಿ ಡಂಗೂರ ಸಾರುತ್ತಾರೆ. ನಮ್ಮ ಗ್ರಾಮೀಣರು ಆಶಾಡ ಮಾಸ ಬಂತೆಂದರೆ ಯಾವಾಗ ಮಾರಮ್ಮನಿಗೆ ಆರತಿಗೆ ಸಾರುತ್ತಾರೋ, ನಾವುಗಳು ಯಾವಾಗ ಕಣ್ಣಿಗೆ ಇಂಪು, ಹೊಟ್ಟೆಗೆ ತಂಪು ಮಾಡಿಕೊಳ್ಳುತ್ತೇವೆಯೋ, ಎಂದು ನಾಲಿಗೆಯ ರುಚಿಯ ಹಬ್ಬಕ್ಕೆ ಡಂಗೂರ ಹಾಕುವುದನ್ನೇ ಕಾಯುತ್ತಿರುತ್ತಾರೆ, ಅಂದರೆ ಈ ತಮಟೆ ಶಬ್ದಕ್ಕೆ ಇಷ್ಟೊಂದು ಮಹತ್ವ ನೀಡುತ್ತಾರೆ ನಮ್ಮ ಗ್ರಾಮೀಣರು!.

ತಮಟೆಯನ್ನು ಒಂದು ವೃತ್ತಾಕಾರದ ಮರದ ಅಥವಾ ಕಬ್ಬಿಣದ ಬಳೆಯನ್ನು ಸಿದ್ದಗೊಳಿಸಲಾಗುತ್ತದೆ ಇದಕ್ಕೆ ಮೇಕೆ ಚರ್ಮ ಹಾಕಿ ಜೋಡಿಸಲಾಗಿರುತ್ತದೆ. ತಮಟೆಯನ್ನು ನುಡಿಸುವುದಕ್ಕೆ ಮೊದಲು ಬೆಂಕಿಯಲ್ಲಿ ಕಾಯಿಸಿದರೆ ನಾದಹಿತವಾಗಿರುತ್ತದೆ, ಏಕವ್ಯಕ್ತಿ ಅಥವಾ ಸಮೂಹ ಈ ಎರಡೂ ಪ್ರಕಾರಗಳಲ್ಲಿ ಜನಪದ ತಮಟೆವಾದನ ಕಂಡುಬರುತ್ತದೆ. ತಮಟೆ ಬಾರಿಸುತ್ತಾ ನೆಲದ ಮೇಲೆ ಇರುವ ನೋಟು, ಸೂಜಿ ಇತ್ಯಾದಿಗಳನ್ನು ಕಣ್ಣು ರೆಪ್ಪೆಯಿಂದ ತೆಗೆಯುವ ಚಮತ್ಕಾರವನ್ನು ತಮಟೆ ವಾದಕರು ಮಾಡುವುದುಂಟು. ಶಿರಾ ತಾಲ್ಲುಕಿನಲ್ಲಿ ಪ್ರತಿಯೊಂದು ಗ್ರಾಮದಲ್ಲೂ ತಮಟೆ ವಾದ್ಯದವರು ಇರುವುದೇ ಒಂದು ವಿಶೇಷ.

# 10) ಯಕ್ಷಗಾನ ಕಲೆ (ಬಯಲಾಟ)



ಯಕ್ಷಗಾನ ಕಲೆ ಶಿರಾ ಸೀಮೆಯು ಪಾರಂಪರಿಕ ಕಲೆ. ನೆಲಮೂಲ ಸಂಸ್ಕೃತಿಯ ಹಾಡು, ಕುಣಿತ, ವೇಷಬೂಷಣ, ಹಾಸ್ಯ, ಅಣುಕು, ಕರುಣಾ ಪ್ರಸಂಗಗಳ, ನೈಜ, ಸರಳ ಅಭಿವ್ಯಕ್ತಿ, ಯಕ್ಷಗಾನ ಕಲೆಯ ಜೀವಂತಿಕೆ. ರೇಡಿಯೋ, ಸಿನಿಮಾ, ಥಳಥಳಿಸುವ ರಂಗ ಸೀನರಿಗಳು ಇಲ್ಲದ ಕಾಲದಲ್ಲಿ ಹಳ್ಳಿಗರ ಪ್ರಮುಖ ಮನರಂಜನೆಯ ಮಾದ್ಯಮಗಳೆಂದರೆ ಯಕ್ಷಗಾನ-ಬಯಲಾಟ, ಪ್ರದರ್ಶನ ಹಬ್ಬ ಹರಿದಿನಗಳಲ್ಲಿ, ಜಾತ್ರೆ- ಉತ್ಸವಗಳಲ್ಲಿ ಮನರಂಜನೆ ಕಲೆಯಾಗಿ, ಎಲ್ಲರಿಗೂ ಅನಂದ ತರಬಲ್ಲ ಕಲಾಮಾದ್ಯಮ ಯಕ್ಷಗಾನ, ಬಯಲಾಟಕ್ಕೆ ಪೌರಾಣಿಕ, ಐತಿಹಾಸಿಕ ವಿಷಯಗಳನ್ನು ಆರಿಸಿಕೊಂಡು ಬಾಗವತರ ನಿರ್ದೇಶನದಲ್ಲಿ ಕುಣಿತ, ಹಾಡು, ಕಂದಗಳ ರೋಚಕ ದೃಶ್ಯಾವಳಿಗಳೊಂದಿಗೆ ತಾಳ, ಮೃದಂಗ, ಮುಖವೀಣೆಗಳೊಂದಿಗೆ ಸಂಗೀತದ ವೈವಿದ್ಯ ಬಗೆಗಳೊಂದಿಗೆ ರಾತ್ರಿ



ಎಂಟರಿಂದ ಸೂರ್ಯ ಹುಟ್ಟಿ ಮಂಗಳಾರತಿಮಾಡುವ ತನಕ ಯಕ್ಷಗಾನ ನಿರಂತರವಾಗಿ ನಡೆಯುತ್ತದೆ, ಸಾರಥಿಯ ಪಾತ್ರ ಜಾತ್ರೆಯ ಯಕ್ಷಗಾನ ಕಥೆಯ ರೋಚಕ, ಜೀವ ಚೇತನ ಅಬಿನಯ.

ಶಿರಾ ತಾಲ್ಲೂಕು ಯಕ್ಷಗಾನ ಕಲೆಯ ತೌರು. ಪ್ರಾಚೀನ ಜನಪದ ಕಲೆಯಾಗಿ, ಕಲಾ ಪರಂಪರೆಯನ್ನು ಒಟ್ಟಾಗಿ ರೂಪಿಸಿಕೊಳ್ಳುತ್ತಾ ಹಾಗೂ ಪ್ರದರ್ಶಿಸುತ್ತಾ ಬಂದಿದ್ದು. ಈ ಬಾಗದ ಮಹತ್ವ ಸಂಗತಿ ಶಿರಾದ ಶ್ಯಾಗದಡು ಮೂಡಲಪಾಯ ಯಕ್ಷಗಾನ ಕಲೆಯ ಕೇಂದ್ರ ಸ್ಥಾನ. ಈ ಗ್ರಾಮದ ಕಾಲುವೆ ರಂಗಪ್ಪ ಎಂಬುವರ ಕುಟುಂಬದವರು ಯಕ್ಷಗಾನ ಪ್ರಸಂಗಗಳನ್ನು ಕಲಾ ಶಾಲೆಯನ್ನಾಗಿ ಮಾಡಿಕೊಂಡು, ಗುರುಶಿಷ್ಯ ಪರಂಪರೆಯ ಮಾರ್ಗದಲ್ಲಿ ಯಕ್ಷಗಾನ ಪ್ರಸಂಗಗಳನ್ನು ಬಾಯಿ ಪಾಠ ಮಾಡಿಸುತ್ತಾ, ನೃತ್ಯದ ವಿವಿದ ಪ್ರಾಕಾರಗಳನ್ನು ಕಲಿಸುತ್ತಿದ್ದರು. ಕಲಾ ಪ್ರಸಾರಕ್ಕಾಗಿಯೇ ಸ್ವಾತಂತ್ರ ಪೂರ್ವದಲ್ಲಿಯೇ ಈ ಕಲಾಶಾಲೆ ಇದದ್ದು ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನ ಶ್ಯಾಗದಡುವಿನಲ್ಲಿ ಮಾತ್ರ ! ಇದೊಂದು ಐತಿಹಾಸಿಕ ಸಂಗತಿಯೂ ಹೌದು!

ಈ ಯಕ್ಷಗಾನ ಕಲಾ ಶಾಲೆಯಲ್ಲಿ ಕಲಿತ ಸಿರಾ ತಾಲ್ಲೂಕಿನ ಹಲವಾರು ಕಲಾವಿದರು, ಲವಕುಶರ ಕಾಳಗ, ಸುಂದರ ಕಾಂಡ, ರಾಮಾಯಣ, ಲಂಕಾದಹನ, ದುಶ್ಯಾಸನನಕಥೆ, ರಕ್ತ ಬಿಜಾಸುರನ ಕತೆ, ದಶಕಂಠ ರಾಮಾಯಣ, ಇನ್ನೂ ಮುಂತಾದ ಪೌರಾಣಿಕ ಪ್ರಸಂಗಗಳ ಜೊತೆಗೆ ಕುಮಾರ ರಾಮ, ಕರಿಬಂಟ ಎಂಬ ಐತಿಹಾಸಿಕ, ಯಕ್ಷಗಾನ ಪ್ರಸಂಗಗಳನ್ನು ಇಂದಿಗೂ ಹಬ್ಬ ಮತ್ತು ಜಾತ್ರೆಗಳಲ್ಲಿ ಪ್ರದರ್ಶಿಸುತ್ತಾ ಬರುತ್ತಿರುವುದು ಹೆಮ್ಮೆಯ ಸಂಗತಿ.

ನಮ್ಮೂರು ಚಿಕ್ಕನಹಳ್ಳಿ 5 ಕಿ.ಮೀ ದೂರದಲ್ಲಿರುವ ಈಡಿಗರ ದಾಸರಹಳ್ಳಿ ಬಾಗವತರಾದ ಶ್ರೀ ರಮಾನಂದರವರು ಈ ಕಲೆಯ ಪ್ರಾಕಾರ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ ಅಪೂರ್ವ ಕಲಾವಿದ, ಯಕ್ಷಗಾನ, ಭಾಗವಂತಿಕೆ, ನೃತ್ಯ, ಹಾಡು, ಕಂದ ಸಂಘಟನೆಗಳಲ್ಲಿ ತಮ್ಮನ್ನು ಅರ್ಥಪೂರ್ಣವಾಗಿ ಒಪ್ಪಿಕೊಂಡಿರುವ ಇವರ ಏಳು ಜನ ಸಹೋದರ ಕುಟುಂಬವೇ ಯಕ್ಷಗಾನದ ಮನೆಯಾಗಿ ರೂಪುಗೊಂಡಿದೆ, ಇವರಿಗೆ ಗಡಿನಾಡ ಜಾನಪದ ಸಂಪರ್ಕ ಪ್ರತಿಷ್ಟಾನದವರು **'ಭಾಗವತ ಸಂಪನ್ನ'** ಗೌರವ ಪುರಸ್ಕಾರ ನೀಡಿ ಗೌರವಿಸಿದೆ.

## ಅಧ್ಯಾಯ-5

## ಸಾಮಾಜಿಕ – ಧಾರ್ಮಿಕ – ಆರ್ಥಿಕ ಕೇಂದ್ರಗಳಾಗಿ ಜಾತ್ರಾ ಮಹೋತ್ಸವಗಳು

ಶಿರಾ ತಾಲ್ಲೂಕಿನಲ್ಲಿಅನೇಕ ಧರ್ಮದ, ವರ್ಗದ ಜನ ವಾಸಿಸುತ್ತಾರೆ.ಅನೇಕ ಜಾತಿಗಳ, ಪಂಗಡಗಳ ಜನ ವಾಸಿಸುತ್ತಾರೆ.ಒಟ್ಟಾರೆ ಇಡೀ ಊರಿನ ಜನರು ಸೇರಿ ಒಂದು ಕಡೆ ಕಲೆತು ಯಾವುದೇ ಜಾತಿ-ಧರ್ಮವೆನ್ನದೇ ಎಲ್ಲರೂ ಕೂಡಿ ದೇವರ ಸೇವೆಯಲ್ಲಿ ಭಾಗಿಯಾಗುತ್ತಾರೆ. ಸಮಾಜದ ಜನ ಸಮುದಾಯದ ಎಲ್ಲರೂ ಸಂತೋಷದಿಂದ, ಸಂಭ್ರಮದಿಂದ ಇಡೀ ಊರಿನ ಜನ ಊರನ್ನು ಎಲ್ಲರೂ ಸೇರಿ ಸುಚಿಗೊಳಿಸಿ, ತೆಂಗಿನ ಗರಿಯ ಚಪ್ಪರವನ್ನು ಹಾಕಿ, ಹಾಗೂ ಮಹಿಳೆಯರೆಲ್ಲಾ ಕೂಡಿ ಜಾತ್ರೆಯ ಕೆಲಸಗಳನ್ನು ಮಾಡುತ್ತಾರೆ

ನಮ್ಮ ಊರಿನ ದೇವರ ಜಾತ್ರೆ ಎಂಬ ಉತ್ಸಾಹ ಪ್ರತಿಯೊಬ್ಬರಲ್ಲಿಯೂ ಇರುತ್ತದೆ.ಇಡೀ ಊರಿನ ಜನರ ಸಹಭಾಗಿತ್ವ ಇದ್ದಾಗ ಜಾತ್ರೆ ಯವುದೇ ತೊಡಕಿಲ್ಲದೆ ನೆಡೆಯುತ್ತದೆ.ಗ್ರಾಮದ ಎಲ್ಲಾ ವರ್ಗದವರು ಅವರ ನೆಂಟರಿಸ್ಟರು, ಬಂಧುಬಳಗದವರೆಲ್ಲಾ ಸೇರಿ ಜಾತ್ರೆಯ ಎಲ್ಲಾ ಕಾರ್ಯಕ್ರಮಗಳಲ್ಲೂ ಪಾಲ್ಗೊಂಡು ಯಶಸ್ವಿಗೊಳಿಸುತ್ತಾರೆ.ಧಾರ್ಮಿಕ ಆಚರಣೆಗಳಿಂದ ಗ್ರಾಮದ ಜನ ಒಗ್ಗಟ್ಟಾಗಲು ಕಾರಣವಾಗುತ್ತದೆ.

ಸಿರಾ ತಾಲ್ಲೂಕಿನಲ್ಲಿರುವ ಮಠ, ದರ್ಗಾ, ಚರ್ಚ್, ದೇವಸ್ಥಾನಗಳು ಜನರನ್ನು ಒಂದುಗೂಡಿಸುವಂತಹ ಪ್ರಮುಖ ಸಾಮಾಜಿಕ ಕೇಂದ್ರಗಳಾಗಿವೆ. ಹೀಗೆ ಕೆಲವು ಸಾಮಾಜಿಕ ನಾಟಕಗಳನ್ನು ಜನರೇ ಖುದ್ದಾಗಿ ರಂಗದ ಮೇಲೆ ಪ್ರದರ್ಶನಗೊಳಿಸುತ್ತಾರೆ. ಮಾಂಗಲ್ಯ ಭಾಗ್ಯ, ಗಂಗೆ-ಗೌರಿ, ಗುಣ ನೋಡಿ ಹೆಣ್ಣುಕೊಡು ಮುಂತಾದ ನಾಟಕಗಳು ಪ್ರದರ್ಶನಗೊಳ್ಳುತ್ತವೆ. ಒಟ್ಟಿನಲ್ಲಿ ಜಾತ್ರಾ ಮಹೋತ್ಸವಗಳು ಜನರಲ್ಲಿ ಸಮಾನತೆಯ ಬೀಜವನ್ನು ಬಿತ್ತುತ್ತವೆ.

ಜಾತ್ರೆ, ಧಾರ್ಮಿಕ ಆಚರಣೆಗಳಿಂದ ಎಷ್ಟೋ ಕುಟುಂಬದಲ್ಲಿದ ವಿರಸ, ದ್ವೇಷ ಕಡಿಮೆಯಾಗಿ ಎಲ್ಲರೂ ಕೂಡಿ ದೇವತಾಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಾರೆ. ಊರಿನ ಜನ ಎಲ್ಲರೂ ಊರಿನ ಗ್ರಾಮದೇವತೆಗೆ ಇಡೀ ಊರಿಗೆ ಯಾವುದೇ ಗಂಡಾಂತರಗಳು ಬರದ ಹಾಗೆ ಶಾಂತವಾಗಿರಬೇಕೆಂದು ಪ್ರಾರ್ಥಿಸಿಕೊಳ್ಳತ್ತಾರೆ.ಯಾವುದೇ ತರಹದ ರೋಗ ರುಜಿನಗಳು ಬರದ ಹಾಗೆ ಊರಿನ ಜನರನ್ನು ಆರೋಗ್ಯವಂತರಾಗಿ ಕಾಪಾಡು ಎಂದು ದೇವತೆಯನ್ನು ಬೇಡಿಕೊಳ್ಳುತ್ತಾರೆ.ಸಿರಾ ತಾಲ್ಲೂಕಿನಲ್ಲಿ ವ್ಯವಸಾಯವೇ ಪ್ರಧಾನ ಕಸುಬು ರೈತನಿಗೆ ಮಳೆ, ಬೆಳೆ, ಮುಖ್ಯವಾಗಿರುವಂತಹದ್ದು.ಮಳೆ ಚೆನ್ನಾಗಿ ಬಂದರೆ ಬೆಳೆ

ಸಮೃದ್ಧವಾಗಿ ಕೈ ಸೇರುತ್ತದೆ.ರೈತ ಮಳೆ, ಬೆಳೆ, ಸರಿಯಾಗಿ ಆಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತಾನೆ.

ಸಾಮಜಿಕ ಸಮಾನತೆಯ ಪ್ರತೀಕವಾಗಿ ಎಲ್ಲಾ ಜನರು ಸೇರಿ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗಿಯಾಗುತ್ತಾರೆ.

ಜಾತ್ರೆಗಳ ಸಮಯದಲ್ಲಿ ಸಾಮಾಜಿಕ ವಿವಾಹಗಳನ್ನು ಮಾಡಿಸಲಾಗುತ್ತದೆ.ಇದರಿಂದ ಅನೇಕ ಸಂಬಂಧಗಳ ಬೆಸುಗೆಯ ತಾಣಗಳಾಗಿ ಜಾತ್ರೆಗಳು ವಿಶೇಷವಾದ ಮಹತ್ವವನ್ನು ಪಡೆದುಕೊಂಡಿವೆ. ವಿಶೇಷವಾಗಿ ಪಟ್ಟನಾಯಕನಹಳ್ಳಿ ಜಾತ್ರೆಯ ಸಂದರ್ಭದಲ್ಲಿ ಯಾವುದೇ ಖರ್ಚಿಲ್ಲದೆ ಮಠದವರೇ ಮದುವೆಯ ಉಸ್ತುವಾರಿಯನ್ನು ನೋಡಿಕೊಳ್ಳುತ್ತಾರೆ.ಪರಮಪೂಜ್ಯ ಮಠದ ಶ್ರೀಗಳ ಸಮ್ಮುಖದಲ್ಲಿ, ರಾಜಕೀಯ ನಾಯಕರು, ಹಿರಿಯರ ಉಪಸ್ಥಿತಿಯಲ್ಲಿ ನೆಡೆಯುವುದು ವಿಶೇಷವಾಗಿರುತ್ತದೆ.ಮದುವೆಯ ಸಂದರ್ಭದಲ್ಲಿ ಎಲ್ಲಾ ಜಾತಿ–ವರ್ಗದವರು ಸೇರಿ ಸಹಬಾಳ್ವೆಯಿಂದ ಒಗ್ಗೂಡಿ ಮದುವೆಯ ಸಮಾರಂಭವನ್ನು ನೆಡೆಸಿಕೊಡುತ್ತಾರೆ.

ಹೀಗೆ ಇಡೀ ಜನ ಸಮುದಾಯ ತಮ್ಮ ವ್ಯವಸಾಯದ ಕೆಲಸದ ನಂತರ ಬಿಡುವು ಮಾಡಿಕೊಂಡು ಜಾತ್ರೆಯಲ್ಲಿ ಬಾಗಿಯಾಗುತ್ತಾ, ಜನರ ನಡುವೆ ಉತ್ತಮ ಭಾಂದವ್ಯ ವೃದ್ಧಿಯಾಗಲು ಸಹಾಯವಾಗುತ್ತದೆ.ಹೀಗೆ ಜಾತ್ರೆಗಳು ಕೇವಲ ಮನರಂಜನೆ, ಧಾರ್ಮಿಕ ಶ್ರದ್ಧೆ, ಭಕ್ತಿಯನ್ನು ಮಾತ್ರ ಒಳಗೊಳ್ಳದೇ ಮಾಹಿತಿ ತಂತ್ರಜ್ಞಾನ ಮತ್ತು ವೈಜ್ಞಾನಿಕ ದೃಷ್ಠಿಕೋನದಲ್ಲಿ ಜಾಗೃತಿಯನ್ನುಂಟುಮಾಡುತ್ತದೆ.

ಧರ್ಮದ ಆಚರಣೆಯ ಹೆಸರಿನಲ್ಲಿ ಅರಳಿ ಮರವನ್ನು, ಬೇವಿನ ಮರವನ್ನು, ದೈವರೂಪದಲ್ಲಿ ವೃಕ್ಷ ದೇವತೆಗಳ ಹೆಸರಿನಲ್ಲಿ ಪೂಜಿಸುತ್ತಾರೆ. ಹಾಗೇಯೇ ಅರಳೀಮರ, ಬೇವಿನಮರಗಳ ಜೊತೆಗೆ ನಾಗರ ಕಟ್ಟೆ ವಿಗ್ರಹಗಳನ್ನು ಪ್ರತಿಷ್ಠಾಪಿಸಿ, ಅರಳೀ ಕಟ್ಟೆಯನ್ನು ಆಯತಾಕರದಲ್ಲಿ ಕಟ್ಟಿರುತ್ತಾರೆ.ಈ ಕಟ್ಟೆ ಮೇಲೆ ದೇವರ ಉತ್ಸವ ಮೂರ್ತಿಗಳನ್ನು ಜಾತ್ರೆಗಳ ಸಂದರ್ಭದಲ್ಲಿ ಇಡುತ್ತಾರೆ.ಇನ್ನೂ ಉಳಿದ ದಿನಗಳಲ್ಲಿ ಈ ಕಟ್ಟೆಯ ಮೇಲೆ ಸಂಜೆ ಕುಳಿತು ಹರಟೆ ಹೊಡೆಯುವ ಎಲೆ ಅಡಿಕೆ ಹಾಕಿಕೊಳ್ಳುತ್ತಾ ಹಾಗೂ ವಿಶೇಷ ಸಂದರ್ಭದಲ್ಲಿ ಊರಿನ ಹಿರಿಯರ ಸಮ್ಮುಖದಲ್ಲಿ ನ್ಯಾಯ ಪಂಚಾಯಿತಿ ತೀರ್ಮಾನ ಮಾಡುತ್ತಾರೆ.

ಧಾರ್ಮಿಕ ಕೇಂದ್ರಗಳಾಗಿ ಜಾತ್ರೆಗಳು ಜನತೆಯ ಪಾಲಿಗೆ ಭಕ್ತಿ, ಶ್ರದ್ಧಾ ಭಾವನೆಯನ್ನು ಮೂಡಿಸುತ್ತದೆ. "ದೇವನೊಬ್ಬನೆ ನಾಮ ಹಲವು" ಎನ್ನುವಂತೆ ಗ್ರಾಮದೇವರು, ಕುಲದೇವರು, ಹಾಗೂ ತಾವು ನಂಬಿರುವಂತಹ ದೇವರುಗಳು, ಹೀಗೆ ನಾನಾ ರೂಪದಲ್ಲಿ ದೇವರನ್ನು ಭಯ, ಭಕ್ತಿಯಿಂದ ಪೂಜಿಸುವ ಜನರನ್ನು ಕಾಣುತ್ತೇವೆ. ಇದು ಜನರು ದೇವರ ಮೇಲೆ ಹೊಂದಿರುವ ಅಪಾರ ಭಕ್ತಿಯ ದ್ಯೋತಕವಾಗಿದೆ.

ದೇವರನ್ನು ಮೆಚ್ಚಿಸುವ ಸಲುವಾಗಿ ಜನ ಉತ್ಸವ, ಮೆರವಣಿಗೆ, ಹರಕೆ, ಪೂಜಾ ವಿಧಿಗಳು, ದೇವರ ಪರವಾದ ಹಾಡುಗಳು ಇಂತಹ ಪ್ರಯತ್ನಗಳ ಮೂಲಕ ತಮ್ಮ ಬೇಡಿಕೆಯನ್ನು ಈಡೇರಿಸಿಕೊಳ್ಳುತ್ತಾರೆ.

ದೇವರ ಮೇಲಿನ ನಂಬಿಕೆ ಹೆಚ್ಚಾಗಿ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯವನ್ನು ಎಲ್ಲಾ ಜನರು ಒಟ್ಟುಗೂಡಿ ನೆರವೇರಿಸುತ್ತಾರೆ. ಹಾಗೇಯೇ ಜಾತ್ರೆಗಳ ಸಂದರ್ಭದಲ್ಲಿ ದೇವಸ್ಥಾನದ ಖರ್ಚಿಗಾಗಿ ಜಾತ್ರೆಗೆ ಬಂದ ಜನರಿಂದ ಇಂತಿಷ್ಟು ಎಂದು ಹಣ ವಸೂಲಿ ಮಾಡಿ ದೇವಸ್ಥಾನದ ಜೀರ್ಣೋದ್ಧಾರಕ್ಕೆ ವಿನಿಯೋಗಿಸುತ್ತಾರೆ.

ಜಾತ್ರೆಗಳು ಜನರಲ್ಲಿ ಇನ್ನೂ ಹೆಚ್ಚಿನ ಧಾರ್ಮಿಕ ಮನೋಭಾವವನ್ನು ಬೆಸೆಯುವಂತಹ ಕೊಂಡಿಗಳಾಗಿ ಕೆಲಸ ನಿರ್ವಹಿಸುತ್ತವೆ. ದೇವರಿಗೆ ಸಂಬಂಧಿಸಿದಂತೆ, ಪರಂಪರಾಗತದಿಂದ ನಮ್ಮ ಹಿರಿಯರು ನೆಡೆಸಿಕೊಂಡು ಬಂದಿರುವಂತಹ ಆಚರಣೆ, ನಂಬಿಕೆಗಳು ಇಂದು ಹೊಸ ರೂಪವನ್ನು ತಾಳುತ್ತಾ ಬದಲಾವಣೆಯ ಹೊಸ ಮಾರ್ಗದಲ್ಲಿ ಪೂಜಿಸಲ್ಪಡಲಾಗುತ್ತಿದೆ. ಒಟ್ಟಿನಲ್ಲಿ ದೇವರ ಮೇಲಿನ ಭಕ್ತಿ ಮೊದಲಿನಿಂದ-ಈಗಿನವರೆಗೂ ಶ್ರದ್ಧೆ ಭಕ್ತಿಯಿಂದ ಪೂಜೆ ಮಾಡುತ್ತಾರೆ.

ಜಾತ್ರೆ ಪ್ರಾರಂಭವಾದಾಗ ಜಾತ್ರೆಯ ಕೆಲಸದಲ್ಲಿ ತಮ್ಮನ್ನು ತಾವು ಭಕ್ತಿಯಿಂದ ತೊಡಗಿಸಿಕೊಂಡು ದೇವರ ಸೇವೆಯನ್ನು ಮಾಡಿದರೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆ ಭಕ್ತಾದಿಗಳಲ್ಲಿ ಮೂಡಿದೆ. ಇದರ ಮೂಲಕ ತಮ್ಮ ಇಷ್ಟಾರ್ಥಗಳನ್ನು ಸಿದ್ಧಿಸಿ ಕೊಳ್ಳುತ್ತಾರೆ

ಜಾತ್ರೆಯ ಸಂದರ್ಭದಲ್ಲಿ ಅನೇಕ ಪವಾಡ ಪುರುಷರು, ಭಜನೆ, ಪ್ರವಚನ ಮಾಡುವವರು ತಮ್ಮ ಛಾಪನ್ನು ಈ ಸಂದರ್ಭದಲ್ಲಿ ಪ್ರದರ್ಶಿಸಲು ಅವಕಾಶ ಸಿಗುತ್ತದೆ. ಹೀಗೆ ಧಾರ್ಮಿಕ ಶ್ರದ್ಧಾ ಭಕ್ತಿಯ ಕೇಂದ್ರಗಳಾಗಿ ಜಾತ್ರೆಗಳು ಒಡಮೂಡಿವೆ.

ಜಾತ್ರೆಗಳಲ್ಲಿ ಅತಿ ಮುಖ್ಯವಾದ ಆಕರ್ಷಣಾ ಕೇಂದ್ರಗಳಾಗಿ ಅಂಗಡಿ-ಮುಂಗಟ್ಟುಗಳು ಕಾಣಸಿಗುತ್ತವೆ. ಮಕ್ಕಳು, ಯುವಕ-ಯುವತಿಯರು, ಹೆಂಗಸರು ಇವರಿಗೆ ತಾವು ತಂದ ಹಣವನ್ನು ಪೂರ್ಣ ಖರ್ಚಾಗುವವರೆವಿಗೂ ಬೇಕಾಗಿರುವ ಎಲ್ಲಾ ವಸ್ತುಗಳನ್ನು ಖರೀದಿಸುವಂತಹ ಸದಾವಕಾಶ ಲಭಿಸಿರುತ್ತದೆ.

ಜಾತ್ರೆಯಲ್ಲಿ ಮಂಡಕ್ಕಿ, ಬತಾಸು, ಬೊಂಡ-ಬಜ್ಜಿ, ಸಿಹಿ ತಿನ್ನಿಸುಗಳ ಅಂಗಡಿಯ ಮಳಿಗೆಗಳ ಸಾಲು ಸಾಲುಗಳು ಬಣ್ಣ ಬಣ್ಣವಾಗಿ ಜನರ ಮನಸ್ಸು, ಕಣ್ಣುಗಳನ್ನು ಆಕರ್ಷಿಸುವ ಗುಣವನ್ನು ಹೊಂದಿವೆ. ಮಕ್ಕಳಿಗೆ ಬೇಕಾದ ವಿವಿಧ ವರ್ಣದ, ವಿವಿಧ ಆಟಿಕೆಗಳು, ಮಕ್ಕಳ ಮನಸ್ಸಿನಲ್ಲಿ ಜಾತ್ರೆಯನ್ನೇ ಕೊಂಡು ಹೋಗಬೇಕು ಅನಿಸುತ್ತದೆ. ಆದರೆ ಪೋಷಕರ ಹಣದ ಸಾಮರ್ಥ್ಯವನ್ನು ಗಮನಿಸಿ ಒಂದೆರಡು ಆಟಿಕೆಗಳನ್ನು ಕೊಂಡು ಹೋಗುತ್ತಾರೆ.

ಜಾತ್ರೆಗಳಲ್ಲಿ ಯುವಕ-ಯುವತಿಯರು ತಮಗೆ ಬೇಕಾದ ಶೃಂಗಾರದ ಸಾಮಾಗ್ರಿಗಳನ್ನು, ಒಡವೆ ವಸ್ತುಗಳನ್ನು ಕೊಂಡು ಆನಂದದಿಂದ ಜಾತ್ರೆಯ ಕಾರ್ಯಕ್ರಮದಲ್ಲಿ ಭಾಗಿಯಾಗುತ್ತಾರೆ.

ಮನೆಯೊಡತಿಯೊಂದಿಗೆ ಜಾತ್ರೆಯಲ್ಲಿ ತಮ್ಮ ಮನೆಯ ಅಲಂಕಾರದ ಸಾಮಗ್ರಿಯಿಂದ ಹಿಡಿದು ಅಡುಗೆಗೆ ಬೇಕದ ಮಡಿಕೆ ಇನ್ನೂ ಮುಂತಾದ ದಿನ ನಿತ್ಯದ ಸಾಮಾಗ್ರಿಗಳನ್ನು ಕೊಂಡು ಹೋಗುತ್ತಾರೆ.

ಹೀಗೆ ರೈತರು ತಾವು ದಷ್ಟ-ಪುಷ್ಟವಾಗಿ ಮೇಯಿಸಿರುವ ದನಗಳನ್ನು ಜಾತ್ರೆಗಳಲ್ಲಿ ಮಾರಿ ಉತ್ತಮ ಲಾಭಗಳಿಸಲು ಸಹಕಾರಿಯಾಗಿದೆ. ಹಾಗೂ ದನಗಳ ಜಾತ್ರೆಗಳ ಸಂದರ್ಭದಲ್ಲಿ ಎತ್ತುಗಳ ಮಾರಾಟ ಭರ್ಜರಿಯಾಗಿ ನೆಡೆಯುತ್ತದೆ.

ಹೀಗೆ "ಸ್ವಾಮಿ ಕಾರ್ಯದ ಜೊತೆಗೆ ಸ್ವಕಾರ್ಯವು" ಎಂಬಂತೆ ರೈತರು ಆರ್ಥಿಕವಾಗಿ ಲಾಭಗಳಿಸುವುದರ ಜೊತೆಗೆ ಜನಪದ ಕಲೆಗಳ ರಸದೌತಣವನ್ನು ಪಡೆದು ಉಲ್ಲಾಸಭರಿತರಾಗಿ ಜಾತ್ರೆಯ ಸೊಬಗನ್ನು ನೆನಪಿಸಿಕೊಳ್ಳುತ್ತಾ ಮನೆಗೆ ಹಿಂದಿರುಗುತ್ತಾರೆ.

# ಅಧ್ಯಾಯ-6

# ಸಮಾರೋಪ

ಸಿರಾ ತಾಲ್ಲೂಕಿನ ಜಾತ್ರಾ ಮಹೋತ್ಸವಗಳು ಎಂಬ ಅಧ್ಯಯನಕ್ಕೆ ಸಂಬಂಧಿಸಿದಂತೆ ಸಿರಾ ತಾಲ್ಲೂಕಿನ ಜಾತ್ರಾ ಸ್ಥಳಗಳಿಗೆ ಭೇಟಿ ನೀಡಿ ಅಲ್ಲಿ ಕಂಡು, ಕೇಳಿದ ಹಿರಿಯರ ಅನುಭವದ ಮಾತು, ದೇವರ ಪ್ರತಿಷ್ಠಾಪನೆಗೆ ಇರುವ ಕಥೆ ಕುರಿತಾದ ಮಾಹಿತಿಯನ್ನು ಆ ಕ್ಷೇತ್ರದ ಸ್ಥಳೀಯರು ತಿಳಿಸಿರುತ್ತಾರೆ.

ಆ ಕ್ಷೇತ್ರದ ಜನರ ಆಚಾರ-ವಿಚಾರ, ನಂಬಿಕೆ, ಸಂಪ್ರದಾಯ, ಬದುಕು, ಬಾಷೆ, ಧಾರ್ಮಿಕ ವಿಧಿ-ವಿಧಾನಗಳನ್ನು ಪ್ರಾಚೀನ ಕಾಲದಿಂದಲೂ ರೂಢಿಸಿಕೊಂಡು ಬಂದಿದ್ದಾರೆ.

ವ್ಯವಸಾಯವನ್ನೇ ನಂಬಿ ಬದುಕುತ್ತೀರುವ ರೈತ ಬೆಳೆದ ಫಸಲು ಉತ್ತಮವಾಗಿರಲೆಂದು ಬಯಸುತ್ತಾನೆ. ಮಳೆಯನ್ನು ನಂಬಿ ಕೃಷಿ ಕಾಯಕದಲ್ಲಿ ತೊಡಗುವ ಇವನಿಗೆ ಕಾಲ ಕಾಲಕ್ಕೆ ಸರಿಯಾಗಿ ಮಳೆ ಬೆಳೆಯಾಗಬೇಕೆಂದು ದೇವರ ಬಗೆಗಿನ ಭಕ್ತಿ-ಶ್ರದ್ಧೆಯಿಂದ ಜಾತ್ರೆ, ತೇರು, ಉತ್ಸವಗಳನ್ನು ಮಾಡುತ್ತಾ ದೇವರನ್ನು ಸಂಪ್ರೀತಗೊಳಿಸುತ್ತಾ ಈತನ ಬೇಡಿಕೆಯನ್ನು ಈಡೇರಿಸಿಕೊಳ್ಳುತ್ತಾನೆ.

ಜಾತ್ರೆ ನಡೆಯುವಂತಹ ಸ್ಥಳ ಧಾರ್ಮಿಕ ಕೇಂದ್ರವಾಗಿ ಪ್ರಸಿದ್ಧಿಯನ್ನು ಪಡೆಯುತ್ತದೆ. ಜನ ಒಂದು ಕಡೆ ಸೇರಲು ಅವಕಾಶ ಕಲ್ಪಿಸುವುದರ ಜೊತೆ ಪರಸ್ಪರ, ಸಹಬಾಳ್ವೆ, ಸ್ವಾತಂತ್ರ್ಯ, ಸಂಘಟನಾ ಶಕ್ತಿ, ಬೆಳೆಯುವಂತೆ ಮಾಡುತ್ತದೆ. ಕೇವಲ ಹಿಂದೂ ಧರ್ಮದ ಜನ ಮಾತ್ರ ಜಾತ್ರೆಗಳಿಗೆ ಆಗಮಿಸುವುದಿಲ್ಲ ಮುಸ್ಲಿಂ, ಕ್ರೈಸ್ತ ಬಾಂಧವರು ಕೂಡಿ ಉತ್ಸವದಲ್ಲಿ ಭಾಗಿಯಾಗಿರುತ್ತಾರೆ.

ಜಾತ್ರೆ ಪ್ರಾರಂಭವಾದರೆ. ಐದು-ಆರು ದಿನಗಳು ಜಾತ್ರೆ ಇರುತ್ತದೆ.ಗಂಗಾಪೂಜೆ, ಕಳಸಪೂಜೆ, ಉತ್ಸವ, ದೇವರ ಮೆರವಣಿಗೆ, ಕೊಂಡ ಹಾಯುವುದು, ಕಲ್ಲುಗಾಲಿ ರಥೋತ್ಸವ, ಹೂವಿನ ಉತ್ಸವ, ದನಗಳ ಜಾತ್ರೆ, ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನ, ಉಂಡೆ-ಮಂಡೆ ಇತ್ಯಾದಿ ಪೂಜಾ ಕಾರ್ಯಕ್ರಮಗಳು ನೆಡೆಯುತ್ತವೆ. ಹಾಗೆ ಜಾತ್ರಾ ಸಂದರ್ಭದಲ್ಲಿ ಅನ್ನ ಸಂತರ್ಪಣೆಯನ್ನು ಕೂಡ ಮಾಡಿರುತ್ತಾರೆ.

**“ಹಬ್ಬ ಊಟಕ್ಕೆ ಚೆಂದ, ಜಾತ್ರೆ ನೋಟಕ್ಕೆ ಚೆಂದ”**

ಎಂಬ ಗಾದೆಯಂತೆ.ಜಾತ್ರೆ ನೋಡಲು, ದೇವರ ಕೃಪೆಗೆ ಪಾತ್ರರಾಗಲು ಜನರು ಬೇರೆ ಬೇರೆ ಊರುಗಳಿಂದ ಗಾಡಿ ಕಟ್ಟಿಕೊಂಡು ಮಕ್ಕಳು ಮತ್ತು ವೃದ್ಧರ ಸಮೇತರಾಗಿ ಜನ ಬಂದು ಸೇರುತ್ತಾರೆ. ಇಷ್ಟೇ ಅಲ್ಲದೆ ನೆಂಟರಿಷ್ಟರನ್ನು ಕೂಡ ಜತೆಗೆ ಕರೆದುಕೊಂಡು ಬಂದಿರುತ್ತಾರೆ.

ಹೀಗೆ ಜಾತ್ರೆಗಳಲ್ಲಿ ಸಭೆ, ಸಮಾರಂಭ, ಮನೋರಂಜನೆ, ಸಾಂಸ್ಕೃತಿಕ, ಸಾಹಿತ್ಯಿಕ, ಧಾರ್ಮಿಕ, ಆರ್ಥಿಕ, ರಾಜಕೀಯ, ಕ್ಷೇತ್ರಗಳಿಗೆ ಮನ್ನಣೆ ಲಭಿಸುತ್ತದೆ. ಇದರ ಮೂಲಕ ಜಾತ್ರೆಗೆ ಬಂದ ಎಷ್ಟೋ ಜನರ ಪರಿಚಯವಾಗಿ ಅವು ಸಂಬಂಧವಾಗಿ ಶಾಶ್ವತವಾಗಿ ಉಳಿಯುತ್ತವೆ.

**"ಜನ ಮರುಳೋ ಜಾತ್ರೆ ಮರುಳೋ"**

ಎಂಬ ಗಾದೆಯಂತೆ ಬಿರುಬಿಸಿಲು, ಮಳೆ ಎನ್ನದೇ ಜನ ಜಾತ್ರೆಗೆ ಬರುತ್ತಾರೆ.ಇಡೀ ವರ್ಷ ಶ್ರಮಪಟ್ಟು ಬೆಳೆಯನ್ನು ಬೆಳೆದು ದವಸ ಧಾನ್ಯಗಳ ಒಂದು ಪಾಲನ್ನು ದೇವರಿಗೆ ಅರ್ಪಿಸಲು ತಂದಿರುತ್ತಾರೆ.
ಹಾಗೆ ಅವರ ಕೋರಿಕೆಯನ್ನು ಈಡೇರಿಸಿದರೆ ದೇವರಿಗೆ ಮತ್ತು ದೇವಸ್ಥಾನಕ್ಕೆ ಬೇಕಾದ ಅನೇಕ ಪೂಜಾ ಸಾಮಗ್ರಿಗಳನ್ನು ಕಾಣಿಕೆಯ ರೂಪದಲ್ಲಿ ಅರ್ಪಿಸುತ್ತಾರೆ.

ಸಿರಾ ತಾಲ್ಲೂಕಿನ ಐದು ಹೋಬಳಿಗಳಲ್ಲಿ ನೆಡೆಯುವ ವಿವಿಧ ಜಾತ್ರಾ ಮಹೋತ್ಸವಗಳು ಒಂದಕ್ಕಿಂತ ಒಂದು ವಿಭಿನ್ನವಾಗಿ ಇರುತ್ತವೆ. ವಿಭಿನ್ನತೆ ಇದ್ದರೂ ಜನ ಶ್ರದ್ಧೆ-ಭಕ್ತಿ, ಆರಾಧನೆಗಾಗಿ ಮುಖ್ಯವಾಗಿರುತ್ತದೆ.

ಕೇವಲ ವ್ಯವಸಾಯಗಾರರಷ್ಟೇ ಅಲ್ಲ, ಅನೇಕ ವೃತ್ತಿ ಕಸುಬುಗಳನ್ನು ಮಾಡುತ್ತಿರುವ ಜನ ಜಾತ್ರೆಗೆ ಬಂದು ತಮ್ಮ ಕಸುಬುಗಾರಿಕೆಯ ಕಲೆಗಳಾದ-ಕುಂಬಾರರು-ಮಡಿಕೆ-ಕುಡಿಕೆ ನೇಕಾರರು-ಬಟ್ಟೆಗಳನ್ನು, ಚಮ್ಮಾರರು-ಚರ್ಮ ಚಪ್ಪಲಿ, ಬಡಗಿಗಳು-ಮರದಿಂದ ಮಾಡಿದ ಮನೆಗೆ ಬೇಕಾದ ಹಾಗೂ ಹೊಲದ ಕೆಲಸಕ್ಕೆ ಬೇಕಾದ ಸಲಕರಣೆಗಳನ್ನು, ಕಮ್ಮಾರರು, ಕೃಷಿ ಸಲಕರಣೆಗಳನ್ನು ಹಾಗೂ ಹೀಗೆ ತಾವು ತಯಾರಿಸಿದ ವಸ್ತುಗಳನ್ನು ತಂದು ಜಾತ್ರೆಯಲ್ಲಿ ಮಾರಿ ಲಾಭವನ್ನು ಗಳಿಸುತ್ತಾರೆ. ಇದರಿಂದ ಆರ್ಥಿಕವಾಗಿ ವ್ಯಾಪಾರ ವ್ಯಾವಹಾರಿಕ ವಿನಿಮಯಗಳು ಹೆಚ್ಚಾಗುತ್ತವೆ.

ಇಷ್ಟೇ ಅಲ್ಲದೇ ಅನೇಕ ಗುಡಿಕೈಗಾರಿಕೆಯವರು ತಯಾರಿಸುವ ಮಕ್ಕಳ ಆಟಿಕೆ, ಪ್ಲಾಸ್ಟಿಕ್, ಸಾಮಾನುಗಳಿಗೂ ಇಲ್ಲಿ ಬೇಡಿಕೆ ಒದಗಿಸುತ್ತವೆ.

"ಸ್ವಾಮಿ-ಕಾರ್ಯ, ಸ್ವ-ಕಾರ್ಯ" ಎಂಬ ಗಾದೆಯಂತೆ ಸ್ವಾಮಿಯ ದರ್ಶನ ಭಾಗ್ಯದ ಜೊತೆಗೆ ಮನರಂಜನೆಯು ಸಹಾ ಏಕಕಾಲದಲ್ಲಿ ನೇರವೇರುತ್ತದೆ. ಜಾತ್ರೆಗಳು ಈಗಿನ ದಿನಗಳಲ್ಲಿ ಯಶಸ್ವಿಯಾಗಿ ನೆಡೆಯಬೇಕದರೆ ಕೆಲವೊಂದು ವ್ಯವಸ್ಥಿತವಾದ ಅಂಶಗಳ ಬಗ್ಗೆ ಗಮನವಿರಬೇಕು.

ದೇವರನ್ನು ಒಲಿಸಿಕೊಳ್ಳುವ ವಿಧಾನಗಳಲ್ಲಿ ಒಂದಾದ ಪ್ರಾಣಿಬಲಿಯನ್ನು ಕೊಡುವುದರ ಮೂಲಕ ರಕ್ತದಕೊಡಿಯನ್ನೇ ಹರಿಸುತ್ತಾರೆ.ಈ ಮೌಢ್ಯಾಚರಣೆಯು ಕೇವಲ ಮಾನವನ ನಾಲಿಗೆ ರುಚಿಗೆ ಬಲಿಯನ್ನು ಕೊಡುತ್ತಾರೆ.ಹೀಗೆ "ಪ್ರಾಣಿ ಹಿಂಸೆ ಮಹಾಪಾಪ" ಎಂಬ ಹೇಳುವ ಜನಸಾಮಾನ್ಯರು ಇದರ ಬಗ್ಗೆ ಮನವರಿಕೆ ಮಾಡಿಕೊಡಬೇಕಾಗುತ್ತದೆ. ಮೂಢನಂಬಿಕೆ, ಕುರುಡು ಆಚರಣೆಯ [ಕಂದಾಚಾರ] ಬಗ್ಗೆ ಜನರಿಗೆ ಸತ್ಯಾ –ಸತ್ಯತೆಗಳ ಬಗ್ಗೆ ತಿಳಿಸಿಕೊಡಬೇಕಾಗುತ್ತದೆ.

ಜಾತ್ರೋತ್ಸವಗಳ ಸಂದರ್ಭಗಳಲ್ಲಿ ಜನಸಾಮನ್ಯರು ಅಧಿಕ ಸಂಖ್ಯೆಯಲ್ಲಿರುತ್ತಾರೆ. ಈ ಸಂದರ್ಭದಲ್ಲಿ ಜನರ ಬುದ್ಧಿಮಟ್ಟವನ್ನು ಹೆಚ್ಚಿಸುವ ಕಾರಣಕ್ಕೆ ಮಾಹಿತಿಯನ್ನು ಒದಗಿಸುವ ನಿಟ್ಟನಲ್ಲಿ ವಿಚಾರ ಸಂಕಿರಣವನ್ನು ಏರ್ಪಡಿಸಬೇಕು.ಮಾಹಿತಿ ಪ್ರಧಾನವಾಗಿದ್ದು, ಜನರ ತಿಳುವಳಿಕೆಯ ಮಟ್ಟವನ್ನು ಹೆಚ್ಚಿಸಬೇಕು.ಜನರಲ್ಲಿ ಹೊಸ ಸಂಚಲನವನ್ನು ಮೂಡಿಸುವಂತಿರಬೇಕು.ರೈತರ ಮೂಲಕಸುಬಾದ ಕೃಷಿಯ ಬಗ್ಗೆ ಅದರಲ್ಲೂ ಹೆಚ್ಚು ಇಳುವರಿಯನ್ನು ನೀಡುವ ಕೃಷಿಯ ಬಗ್ಗೆ ಮಾಹಿತಿ ನೀಡಬೇಕಾಗುತ್ತದೆ. ರೈತನ ಬೇಸಾಯದಲ್ಲಿ ಸುಧಾರಣೆ ಕಾಣುವ ನಿಟ್ಟಿನಲ್ಲಿ ವಿಶ್ವವಿದ್ಯಾಲಯಗಳಲ್ಲಿ ಆದ ಸಂಶೋಧನೆಯ ಫಲಿತಾಂಶವನ್ನು ರೈತನಿಗೆ ತಿಳಿಸುವ ಮುಖ್ಯ ವೇದಿಕೆಗಳಾಗಿ ಜಾತ್ರೆಗಳು ಅವಕಾಶ ಕಲ್ಪಿಸುತ್ತವೆ.

ರೈತನ ಸಾವಯವ ಕೃಷಿ, ಸಮಗ್ರ ಕೃಷಿ ಪದ್ಧತಿಗಳು, ಸಿರಿ ಧಾನ್ಯಗಳ ಮಹತ್ವದ ಜನರಿಗೆ ಆಧುನಿಕ ಕೃಷಿಯ ಬಗ್ಗೆ ಹೆಚ್ಚು ಒಲವು ನೀಡುವ ಕಾರಣಕ್ಕಾಗಿ ಬೇಸಾಯ ಕ್ರಮದ ಪೂರ್ಣ ವಿವರವನ್ನು ನೀಡುವುದರ ಜೊತೆ ಹೆಚ್ಚು ಲಾಭವನ್ನು ಪಡೆಯುವುದರ ಬಗ್ಗೆ ಹಾಗೂ ಮಾರುಕಟ್ಟೆಯನ್ನು ಸ್ಥಳೀಯವಾಗಿ ಕಲ್ಪಿಸುವುದರ ಬಗ್ಗೆ ಆ ಸಭೆಗೆ ಆಗಮಿಸಿದ ಸ್ಥಳೀಯ ಉಸ್ತುವಾರಿ ಶಾಸಕರಿಗೆ ಮನವಿಯನ್ನು ಸಲ್ಲಿಸಲಾಗುತ್ತದೆ.

ಹೀಗೆ ವಿಚಾರ ಸಂಕಿರಣಗಳ ಮೂಲಕ ಜನರಿಗೆ ವಿಚಾರಗಳು ವಿನಿಮಯಗಳ ಮೂಲಕ ರೈತ ಅಭಿವೃದ್ಧಿ ಪಥದಲ್ಲಿ ಸಾಗಲು ಸಹಕಾರಿಯಾಗಿರುತ್ತದೆ. ಸಿರಾ ತಾಲ್ಲೂಕು ಕಡಿಮೆ ಮಳೆಯ ಪ್ರದೇಶ ಇಲ್ಲಿ ಮಳೆಯನ್ನೇ ಆಶ್ರಯಿಸಿದ 90% ರಷ್ಟು ಕೃಷಿಕರು ಇರುವರು, ಈ ಕಾಲದಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿ ಹಾಕಿದ ಫಸಲು ಕೈ ಸೇರುತ್ತಿರಲಿಲ್ಲ ಇಂತಹ ಸಂದರ್ಭದಲ್ಲಿ ಸಾಲ ಸೋಲ ಮಾಡಿ ಬೋರ್‌ವೆಲ್‌ಗಳನ್ನು ಕೋರೆಸಿದ ರೈತ ಸಿಕ್ಕ ಅಲ್ಪ ಸ್ವಲ್ಪ ನೀರಿನಲ್ಲಿ ಆಧುನಿಕ ನೀರಾವರಿ ಪದ್ಧತಿಗಳಾದ ಹನಿ ನೀರಾವರಿ, ತುಂತುರು ನೀರಾವರಿ ಪದ್ಧತಿಯನ್ನು ಬಳಸಿ ತೋಟಗಾರಿಕಾ ಬೇಸಾಯ, ನೀರಾವರಿ ಬೇಸಾಯ

ಪದ್ಧತಿಯಲ್ಲಿ ಬೆಳೆಯನ್ನು ಬೆಳೆದು ಯಶಸ್ವಿಗೊಳ್ಳವುದರ ಬಗ್ಗೆ ಮಾಹಿತಿಯನ್ನು ರೈತರಿಗೆ ಒದಗಿಸಬೇಕಗುತ್ತದೆ.

ವ್ಯವಸಾಯದ ಪ್ರತಿ ಹಂತದ ಆಧುನಿಕ ಕೃಷಿ ಪದ್ಧತಿಯ ಬದಲಾವಣೆಯನ್ನು ಕಾಲದಿಂದ ಕಾಲಕ್ಕೆ ಬದಲಾಯಿಸಬೇಕಾಗುತ್ತದೆ.ವ್ಯವಸಾಯದ ಭೂಮಿಯ ಮಣ್ಣಿನ ಪರೀಕ್ಷೆಯನ್ನು ಮಾಡಿಸಿ ಅಗತ್ಯವಾದ ಪೋಷಕಾಂಶದ ಮಾಹಿತಿಯನ್ನು ಒದಗಿಸಬೇಕಾಗುತ್ತದೆ. ಹಾಗೆ ಇದು ಸರ್ಕಾರದ ಧನಸಹಾಯದಿಂದ ನೆರವೇರಬೇಕಾಗುತ್ತದೆ. ರೈತರಿಗೆ ಅಗತ್ಯ ಸೌಕರ್ಯವನ್ನು ಸರ್ಕಾರ ಅನೇಕ ಯೋಜನೆಗಳ ಮೂಲಕ ಮಾಹಿತಿ ತಿಳಿಸಬೇಕಾಗುತ್ತದೆ.

ಕೃಷಿಗೆ ಬೇಕಾದ ಅಗತ್ಯ ರಸಗೊಬ್ಬರಗಳ ಬಳಕೆ ಬಗ್ಗೆ, ಅದನ್ನು ಬಳಸುವ ಪ್ರಮಾಣದ ಬಗ್ಗೆ, ಸಾವಯವ ಗೊಬ್ಬರ, ಎರೆಹುಳುವಿನ ಗೊಬ್ಬರದ ಬಗ್ಗೆ ಅವುಗಳನ್ನು ತಯಾರಿಸುವ ವಿಧಾನದ ಬಗ್ಗೆ ಮಾಹಿತಿಯನ್ನು ಒದಗಿಸಬೇಕಾಗುತ್ತದೆ.ಆಧುನಿಕ ಕೃಷಿ ಸಲಕರಣೆಗಳು ಅವುಗಳ ಉಪಯುಕ್ತತೆ ಅವುಗಳಿಗಿರುವ ಸರ್ಕಾರದ ಸಬ್ಸಿಡಿ ದರಗಳ ಬಗ್ಗೆ ಸ್ಪಷ್ಟವಾದ ಮಾಹಿತಿಯನ್ನು ರೈತರಿಗೆ, ದೂರದರ್ಶನ, ಮಾಧ್ಯಮಗಳ, ಹಾಗೂ ದಿನ ಪತ್ರಿಕೆಗಳ ಮೂಲಕ ಪ್ರಚಾರಪಡಿಸಬೇಕಾಗುತ್ತದೆ. ಹಾಗೂ ತಾವು ಬೆಳೆದ ಬೆಳೆಗೆ ಉತ್ತಮ ಬೆಂಬಲ ಬೆಲೆ ನೀಡುವುದರ ಮೂಲಕ ಮುಕ್ತ ಮಾರುಕಟ್ಟೆ ವ್ಯವಸ್ಥೆಯಲ್ಲಿ ರೈತರೇ ಖುದ್ದಾಗಿ ತಾವು ಬೆಳೆದ ಬೆಳೆಯನ್ನು ಮಾರುವ ವ್ಯವಸ್ಥೆ ಕಲ್ಪಿಸಬೇಕಾಗುತ್ತದೆ.

ಆಧುನಿಕ ಬೇಸಾಯ ಪದ್ಧತಿಯಲ್ಲಿ ಪ್ರಸ್ತುತ ಹೆಚ್ಚು ಲಾಭ ನೀಡುವ ಅಣಬೆ ಬೇಸಾಯದ ಬಗ್ಗೆ ಮಾಹಿತಿ ಒದಗಿಸಬೇಕಾಗುತ್ತದೆ.ಅಣಬೆ ಬೀಜ, ಅಣಬೆ ಬೇಸಾಯ ತಾಂತ್ರಿಕತೆ ಮತ್ತು ಮಾರಾಟದ ಬಗ್ಗೆ ತೋಟಗಾರಿಕ ಇಲಾಖೆಯವರು ಮಾಹಿತಿ ಒದಗಿಸಬೇಕಾಗುತ್ತದೆ.ಇದರ ಜೊತೆ ರೇಷ್ಮೇ ಇಲಾಖೆಯ ವತಿಯಿಂದ ರೇಷ್ಮೇ ಹುಳುಗಳ ಸಾಕಾಣಿಕೆ ಹಾಗೂ ಮಾರಾಟದ ಬಗ್ಗೆ ಜನರಲ್ಲಿ ಅರಿವನ್ನು ಮೂಡಿಸಬೇಕಾಗುತ್ತದೆ.ಹೀಗೆ ನೂತನ ತಾಂತ್ರಿಕತೆಯ ಬಗ್ಗೆ ಸಮಗ್ರ ಮಾಹಿತಿಯನ್ನು ಒದಗಿಸಬೇಕಾಗುತ್ತದೆ.

ರೈತರು ತಮ್ಮ ತಮ್ಮ ತೋಟಗಳಲ್ಲಿ ತೋಡಿಕೊಂಡ ಕೃಷಿ ಹೊಂಡಗಳಲ್ಲಿ ಮೀನು ಸಾಕಾಣಿಕೆ, ಮೀನು ಸಂರಕ್ಷಣೆ ವಿಚಾರ ಇವುಗಳ ಬಗ್ಗೆ ಮೀನುಗಾರಿಕೆ ಇಲಾಖೆಯ ಮೂಲಕ ಮಾಹಿತಿಯನ್ನು ಒದಗಿಸಬೇಕಾಗುತ್ತದೆ.

ಪಶುಪಾಲನೆ ಇಲಾಖೆಯ ವತಿಯಿಂದ ಲಾಭದಾಯಕ ಹೈನುಗಾರಿಕೆ ಮತ್ತು ಕುರಿ, ಮೇಕೆ ಸಾಗಾಣಿಕ ಪದ್ಧತಿಗಳ ಬಗ್ಗೆ ತಾಂತ್ರಿಕ ವಿಚಾರ ಸಂಕಿರಣ ಹಾಗೂ ಹಳ್ಳಿಕಾರ್ ತಳಿ[ದೇಶಿಯ ತಳಿ] ಸಂರಕ್ಷಣೆ ಬಗ್ಗೆ ರೈತರೊಂದಿಗೆ ಸಂವಾದ ಕಾರ್ಯಕ್ರಮದ

ಬಗ್ಗೆ ಇಲಾಖಾವಾರು ಮಾಹಿತಿ ಹಾಗೂ ಸಮಗ್ರ ಚಿಂತನಾ ಸಮಾವೇಶಗಳನ್ನು ಜಾತ್ರೆಗಳ ಸಂದರ್ಭದಲ್ಲಿ ಹಮ್ಮಿಕೊಳ್ಳಲಾಗುತ್ತದೆ.

ಸಾಮಜಿಕ ಅರಣ್ಯ ಇಲಾಖೆಯ ವತಿಯಿಂದ ನೀರಿಗಾಗಿ ಅರಣ್ಯ ಸಂರಕ್ಷಣಾ ವಿಚಾರಗೋಷ್ಠಿಯನ್ನು ಹಮ್ಮಿಕೊಂಡು ಜನರಿಗೆ ನೀರಿನ ಸಂರಕ್ಷಣೆಯ ಕ್ರಮವನ್ನು ಸೂಚಿಸಬೇಕಾಗುತ್ತದೆ."ಆರೋಗ್ಯವಂತ ಮನುಷ್ಯ ಸಕಲವನ್ನು ಸಾಧಿಸಬಲ್ಲಂತವನು" ಎಂಬಂತೆ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಅಡಿಯಲ್ಲಿ ಜನರಲ್ಲಿ ಆರೋಗ್ಯದ ಬಗ್ಗೆ ಈಗ ಬರುತ್ತಿರುವ ಹೊಸ ಹೊಸ ರೋಗಗಳ ಬಗ್ಗೆ ಮುನ್ನೆಚ್ಚರಿಕೆಗಳನ್ನು ನೀಡುತ್ತಾ ಅಷ್ಟೇ ಅಲ್ಲದೆ ಆರೋಗ್ಯ ಕೇಂದ್ರಗಳಲ್ಲಿ ಸಿಗುವ ಸೌಲಭ್ಯದ ಬಗ್ಗೆ ಆಪರೇಷನ್‌ಗಳ ಬಗ್ಗೆ ವಿಶೇಷ ಮಾಹಿತಿಯನ್ನು ಒದಗಿಸುತ್ತಾ, ಗರ್ಭಿಣಿ ಮತ್ತು ಬಾಣಂತಿಯವರ ಆರೋಗ್ಯದ ಬಗ್ಗೆ ವಿಶೇಷ ಮಾಹಿತಿಯನ್ನು ಒದಗಿಸಬೇಕು. 5ವರ್ಷದ ಒಳಗಿನ ಎಲ್ಲಾ ಮಕ್ಕಳಿಗೂ ಹಾಕಿಸಲಾಗುವ ಪಲ್ಸ್ ಪೋಲಿಯೋ ಲಸಿಕೆಯ ಬಗ್ಗೆ ಸರಿಯಾದ ಮಾಹಿತಿಯನ್ನು ಸಮಯಕ್ಕೆ ಸರಿಯಾಗಿ ನೀಡಬೇಕಾಗುತ್ತದೆ.ಹೀಗೆ ವಿವಿಧ ಇಲಾಖೆಗಳಿಂದ ಸಿಗಬಹುದಾದ ಅತ್ಯಮೂಲ್ಯವಾದ ಮಾಹಿತಿಯನ್ನು ಜನರಿಗೆ ಒದಗಿಸಲಾಗುತ್ತದೆ.

ವಿಜ್ಞಾನ ಮೇಳ ಹಾಗೂ ಗುರುವೃಂದದವರಿಗೆ ಮೌಲ್ಯ ಶಿಕ್ಷಣದ ವಿಚಾರಗೋಷ್ಠಿಗಳನ್ನು ಆಯೋಜಿಸಿ ಬಾಹ್ಯಕಾಶ ಇಸ್ರೋ ಸಂಸ್ಥೆ (ISRO) ಕೃಷಿ (UAS) ಭಾರತೀಯ ವಿಜ್ಞಾನ ಸಂಸ್ಥೆ (IISC) ವಿಜ್ಞಾನಿಗಳಿಂದ ಶಾಲಾ ಮಕ್ಕಳಿಗೆ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಂಡು ಇದರಿಂದ ಮಕ್ಕಳಿಗೆ ವೈಜ್ಞಾನಿಕ ಮನೋಭಾವವನ್ನು ಬೆಳೆಸುವುದರಲ್ಲಿ ಸಹಕಾರಿಯಾಗುವುದು

ವಿಧ್ಯಾರ್ಥಿಗಳ ಯುವ ಸಮಾವೇಶ ಹಾಗೂ ಮಹಿಳಾ ಸಮಾವೇಶ ವಿಚಾರಗೋಷ್ಠಿಯಲ್ಲಿ ಯುವಕರ ಪ್ರಗತಿ, ಶಿಕ್ಷಣ, ಉದ್ಯೋಗದ ಬಗ್ಗೆ ಮಾಹಿತಿ ನೀಡುತ್ತಾ ಮಹಿಳೆಯರ ಸಬಲೀಕರಣಕ್ಕಾಗಿ ಸರ್ಕಾರದ ಅನೇಕ ಯೋಜನೆಯು ಮಹಿಳಾ ಪ್ರಗತಿಯನ್ನು ಕುರಿತು ಕೈ ಗೊಂಡ ಸ್ತ್ರೀ ಶಕ್ತಿ ಸಂಘಗಳ ಕಾರ್ಯ ಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ಒದಗಿಸಿ ಸ್ತ್ರೀಯರಲ್ಲಿ ಜಾಗೃತಿ ಮತ್ತು ಸಂಘಟನಾ ಶಕ್ತಿ ಬೆಳೆಯಲು ಸಹಕಾರಿಯಾಗುವುದು.

ಸ್ವಚ್ಛ ಭಾರತ್ ಮಿಷನ್ ಅಭಿಯಾನ ಯೋಜನೆಯಡಿ ಇಡೀ ಗ್ರಾಮದ ಸ್ವಚ್ಛತೆಗಾಗಿ ಜನರು ಹೇಗೆ ತಮ್ಮ ಗ್ರಾಮದ ಸ್ವಚ್ಛತೆ ತನ್ನ ಮನೆಯ ಸುತ್ತಲ ಸ್ವಚ್ಛತೆಯ ಬಗ್ಗೆ ಗಮನಹರಿಸಿಬೇಕು.ಸಾರ್ವಜನಿಕರು ಓಡಾಡುವ ಸ್ಥಳಗಳಲ್ಲಿ ಮಲಮೂತ್ರವನ್ನು ವಿಸರ್ಜಿಸಬಾರದು ಹಾಗೇ ಶೌಚಾಲಯದ ನಿರ್ಮಾಣದ ಕಡೆ ಹೆಚ್ಚು ಗಮನವನ್ನು ಹರಿಸಬೇಕಾಗುತ್ತದೆ. ಹಾಗೆಯೇ ಪರಿಸರ ಮಾಲಿನ್ಯದ ಬಗ್ಗೆಗೆ ಎಚ್ಚರಿಕೆಯ ಮೂನ್ಸೂಚನೆಯನ್ನು ನೀಡಬೇಕಾಗುತ್ತದೆ. ಹೀಗೆ ಪರಿಸರದ ಬಗ್ಗೆ ಜನರಲ್ಲಿ ಕಾಳಜಿಯನ್ನು

ಬೆಳಸಿ, ಹಾಗೇಯೇ ಪರಿಸರದ ಸಂರಕ್ಷಣೆಯೇ ಮುಂದಿನ ಪೀಳಿಗೆಯ ಸಂರಕ್ಷಣೆ ಎನ್ನುವಂತೆ ಪರಿಸರ ಸ್ವಚ್ಛತೆಯ ಬಗ್ಗೆ ಜಾಗೃತಿಯನ್ನು ಮೂಡಿಸಬೇಕಾಗುತ್ತದೆ.

ಜಾತ್ರೆಗಳಲ್ಲಿ ಕೃಷಿ ಮತ್ತು ಕೈಗಾರಿಕೆ ವಸ್ತು ಪ್ರದರ್ಶನವನ್ನು ಕೂಡ ಏರ್ಪಡಿಸಲಾಗುತ್ತದೆ. ಈ ಸಂದರ್ಭದಲ್ಲಿ ಕೃಷಿಗೆ ಸಂಬಂಧಿಸಿದ ವಿಶೇಷವಾದ ಕೃಷಿ ಸಲಕರಣೆಗಳ ಪ್ರದರ್ಶನ, ಹೊಸ ತಳಿಯ ಹಣ್ಣು, ತರಕಾರಿಗಳ ಪ್ರದರ್ಶನ,ಹಾಗೆ ಸಜ್ಜೆ, ನವಣೆ, ಅರ್ಕ, ಸ್ಯಾವೆ ಅಕ್ಕಿ, ನೆಲ್ಲಕ್ಕಿ, ಇತ್ಯಾದಿ ಸಿರಿಧಾನ್ಯಗಳ ಪ್ರದರ್ಶನ ಗುಡಿ ಕೈಗಾರಿಕೆಗೆ ಸಂಬಂಧಿಸಿದ ಮಾಹಿತಿ, ಸಣ್ಣ ಕೈಗಾರಿಕೆಯ ಬಗ್ಗೆ ಮಾಹಿತಿ ಹೀಗೆ ಯುವಕರಿಗೆ–ಮಹಿಳೆಯರಿಗೆ ಉದ್ಯೋಗ ಕಲ್ಪಿಸುವುದರ ಬಗ್ಗೆ ಮಾಹಿತಿ ನೀಡಿ ಅವರಿಗೆ ವಿಶಾಲವಾದ ಜಗತ್ತಿನ ಪರಿಚಯವನ್ನು ಮಾಡಿಕೊಡುತ್ತಾ, ಸ್ವತಂತ್ರವಾಗಿ ಬದುಕನ್ನು ರೂಪಿಸಿಕೊಳ್ಳುವುದರ ಬಗ್ಗೆ ಮನವರಿಕೆ ಮಾಡಬೇಕಾಗುತ್ತದೆ

ನಮ್ಮ ಸರ್ಕಾರದ ಈ ಮೇಲ್ಕಂಡ ಎಲ್ಲಾ ಇಲಾಖೆಗಳ, ಎಲ್ಲ ಯೋಜನೆಗಳ ಹಾಗೂ ಎಲ್ಲಾ ಕಾರ್ಯಕ್ರಮಗಳೂ ಬರೀ ಪುಸ್ತಕ ರೂಪದಲ್ಲೇ ಉಳಿಯುತ್ತಿದ್ದು, ಹಾಗೂ ಸರ್ಕಾರದ ಕೃಷಿ ವಿಶ್ವವಿದ್ಯಾನಿಲಯ, ಕೃಷಿ ಹಾಗು ತೋಟಗಾರಿಕೆ ಇಲಾಖೆಗಳು ಹೆಚ್ಚು ಇಳುವರಿ ತಳಿಗಳ ಬೆಳೆಗಳನ್ನು ಸಂಶೋಧನೆ ಮಾಡಿ, ಈ ಗ್ರಾಮಾಂತರ ಪ್ರದೇಶದ ರೈತಾಪಿ ಜನಗಳಿಗೆ ತಲುಪಿಸದೆ ಇದ್ದುದರಿಂದ, ನಮ್ಮ ರೈತರು ಹಳೆ ಕಾಲದ ವ್ಯವಸಾಯ ಪದ್ಧತಿಯಿಂದ ಬಹಳ ಹಿಂದುಳಿದಿದ್ದರು.

ನಮ್ಮ ರೈತಾಪಿ ಜನಗಳಿಗೆ ಹೆಚ್ಚಿನ ತಿಳುವಳಿಕೆ ನೀಡುವ ನಿಟ್ಟಿನಲ್ಲಿ ಶಿರಾ ತಾಲ್ಲೂಕಿನಲ್ಲೇ ಮೊಟ್ಟ ಮೊದಲ ಬಾರಿಗೆ ಮೇಲ್ಕಂಡ ಎಲ್ಲಾ ಇಲಾಖೆಗಳ ಎಲ್ಲಾ ಯೋಜನೆಗಳನ್ನು ಒಂದೇ ಸೂರಿನಡಿಯಲ್ಲಿ ಪ್ರಾತಕ್ಷಿಕವಾಗಿಯೂ, ವಸ್ತು ಪ್ರದರ್ಶನ ರೀತಿಯಲ್ಲಿಯೂ ತೋರಿಸುವ ನಿಟ್ಟಿನಲ್ಲಿ ಪಟ್ಟನಾಯಕನಹಳ್ಳಿ ಜಾತ್ರಾ ಮಹೋತ್ಸವವು ನಮ್ಮ ಜಿಲ್ಲೆಗೆ ಮೊದಲ ಸ್ಥಾನದಲ್ಲಿದೆ.

ಇದಕ್ಕೆ ರೂವಾರಿಗಳಾದ ಪಟ್ಟನಾಯಕನಹಳ್ಳಿ ಶ್ರೀ ಗುರುಗುಂಡ ಬ್ರಹ್ಮೇಶ್ವರ ಸ್ವಾಮಿ ಮಠದ ಪೀಠಾಧ್ಯಕ್ಷರಾದ ಶ್ರೀಶ್ರೀಶ್ರೀ ನಂಜಾವಧೂತ ಮಹಾ ಸ್ವಾಮಿಗಳ ಮುಂದಾಲೋಚನೆಯ ಫಲ, ಈ ಜಾತ್ರೆಯಲ್ಲಿ ಪ್ರತಿ ವರ್ಷ ಕೃಷಿ ಮತ್ತು ಕೈಗಾರಿಕ ವಸ್ತು ಪ್ರದರ್ಶನಗಳನ್ನು ಏರ್ಪಡಿಸಿ ಸುಮಾರು 1ಲಕ್ಷ ರೈತಾಪಿ ಜನರಿಗೆ ಆಧುನಿಕ ಕೃಷಿಯ ವಿವಿಧ ತಳಿಗಳ ಪ್ರಾತಕ್ಷಿಕೆ ಹಾಗೂ ಹೊಸ ಹೊಸ ಯಂತ್ರೋಪಕರಣಗಳ ಬಳಕೆಗಳ ಬಗ್ಗೆ 10 ದಿನಗಳ ಕಾಲ ಸಮಗ್ರ ಮಾಹಿತಿಗಳನ್ನು ಒದಗಿಸಿ, ಈ ಜಾತ್ರೆಯ ಜನರ ಮೆಚ್ಚುಗೆ ಗಳಿಸಿದಂತಹ ಮಾಳಿಗೆಗಳಿಗೆ ಬಹುಮಾನ ನೀಡುವ ಪದ್ಧತಿಯನ್ನು ಇಂದಿಗೂ ಯಶಸ್ವಿಯಾಗಿ ನೆಡೆಸಿಕೊಂಡು ಬರುತ್ತಿದ್ದಾರೆ

ಹಾಗೆಯೇ ಉತ್ತಮ ದಷ್ಟಪುಷ್ಟ ಅಲಂಕಾರಿಕ ರಾಸುಗಳಿಗೆ ಬಹುಮಾನವನ್ನು ನೀಡುತ್ತಾರೆ.ಕುಸ್ತಿ, ಕಬ್ಬಡ್ಡಿ, ಕೋಕೋ, ಕ್ರಿಕೆಟ್, ಇತ್ಯಾದಿ ಕ್ರೀಡೆಗಳಲ್ಲಿ ಭಾಗವಹಿಸಿದ ಉತ್ತಮ

ಆಟವನ್ನು ಪ್ರದರ್ಶಿಸಿ ಗೆಲುವನ್ನು ಸಾಧಿಸಿದ ಕ್ರೀಡಾಪಟುಗಳಿಗೆ ಬಹುಮನವನ್ನು ವಿತರಿಸಲಾಗುತ್ತದೆ.ಆರೋಗ್ಯವಂತ ಮಕ್ಕಳಿಗೂ ಕೂಡ ಬಹುಮಾನ ವಿತರಣೆ ಇರುತ್ತದೆ.

ನಾಟಕ ಪ್ರದರ್ಶನ ಕಲೆ, ಭರತನಾಟ್ಯ, ಶಾಲಾ ಮಕ್ಕಳ ಮನರಂಜನಾ ಸಾಂಸ್ಕೃತಿಕ ಕಾರ್ಯಕ್ರಮ, ವಿಜೇತರಿಗೆ ಬಹುಮಾನ ವಿತರಿಸಲಾಗುತ್ತದೆ.ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸಿ ಉತ್ತಮ ರಂಗೋಲಿಗೆ ಬಹುಮಾನವನ್ನು ನೀಡಲಾಗುತ್ತದೆ.

ಇಷ್ಟೇ ಅಲ್ಲದೆ ರಾಜ್ಯ ಪ್ರಶಸ್ತಿ, ರಾಷ್ಟ್ರ ಪ್ರಶಸ್ತಿ, ವಿಜೇತರು, ಉನ್ನತ ಸಾಧನೆಯನ್ನು ಮಾಡಿದ ಈ ಭಾಗದ ಸಾಧಕರುಗಳಿಗೆ ಸನ್ಮಾನ ಕಾರ್ಯಕ್ರಮವನ್ನು ಈ ಸಂದರ್ಭದಲ್ಲಿ ಏರ್ಪಡಿಸಿರುತ್ತಾರೆ.

ಜಾತ್ರೆಗಳು ಈಗಿನ ಆಧುನಿಕ ಯುಗದಲ್ಲಿ ಹೇಗೆ ವಾಸ್ತವಕ್ಕೆ ಹೊಂದಿಕೊಂಡು ತನ್ನ ಧಾರ್ಮಿಕ ಆಚರಣೆಗೆ ಯಾವುದೇತೊಡಕಿಲ್ಲದೇ ವಿಜೃಂಭಣೆಯಿಂದ ನಡೆಯುತ್ತಾ ಈಗಿನ ಕಾಲಘಟಕ್ಕೆ ಅನುಗುಣವಾಗಿ ಹೊಂದಿಕೊಂಡು ಹೊಸ ರೂಪವನ್ನು ಪಡೆಯುತ್ತಾ ಕಾಲದಿಂದ ಕಾಲಕ್ಕೆ ಬದಲಾವಣೆಯಾಗುತ್ತಾ ನಡೆದಿದೆ ಹೊಸ ಹೊಸ ಅನ್ವೇಷಣೆಯ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಳ್ಳುತ್ತಾ ಜಾಗತಿಕ ಮತ್ತು ಪ್ರಸ್ತುತ ಸಂದರ್ಬದಲ್ಲಿ ಹೊಸ ಮನ್ವಂತರವನ್ನು ಹೊಂದುತ್ತಿದ್ದೇವೆ. ಜಾತ್ರೆಗಳಿಂದ ಜನರ ವಿಚಾರದಾರೆಗಳು ಪ್ರಗತಿಯನ್ನು ಹೊಂದಿದೆ ಹಾಗೂ ಜನ ಪ್ರಗತಿಯ ಪಥದಲ್ಲಿ ಸಾಗಲು ಅವಕಾಶ ದೊರಕುತ್ತಿವೆ.

ಜಾತ್ರೆಗಳು ಈಗಿನ ವಾಸ್ತವಕ್ಕೆ ಉಪಯೋಗವಾಗುತ್ತಿವೆಯೇ ಎಂಬ ಪ್ರಶ್ನೆ ಎದುರಾದರೂ ಸಹ ಇದು ಇಂದಿನ ವೈಜ್ಞಾನಿಕ, ವೈಚಾರಿಕ ಯುಗದಲ್ಲಿ ತನ್ನದೇ ಆದ ಸ್ಥಾನವನ್ನು ಪಡೆಯುತ್ತಾ ಜನರ ಮನ್ನಣೆಯನ್ನು ಗಳಿಸುತ್ತಿದೆ.

ಈಗಾಗಿ ಜಾತ್ರೆಗಳು ಹಿಂದಿನಿಂದ ಇಂದಿಗೂ ಕೂಡ ಅನೇಕ ಬದಲಾವಣೆಯನ್ನು ಹೊಂದುತ್ತಾ ಮುಂದುವರೆಯುತ್ತಿರುವುದು ಜನರ ಆಚರಣೆಯ ವೈಶಿಷ್ಯವಾಗಿದೆ.

ಒಟ್ಟಿನಲ್ಲಿ ವಿಶಿಷ್ಟವಾದ ಸಂಸ್ಕೃತಿಯನ್ನು ಇಂದಿನ ಆಧುನಿಕ ಯುಗದಲ್ಲಿ ಜಾಗತೀಕ ಮಟ್ಟದಲ್ಲಿ ಗುರುತಿಸಲು ಸಾಧ್ಯವಾಗಿದೆ, ಸರ್ವಧರ್ಮಗಳ ಸಮನ್ವಯತೆಯ ನೆಲೆಯಾಗಿ ಇಂದಿನ ಜಾತ್ರೆಗಳು ನಡೆಯುತ್ತಲಿವೆ. ಅನೇಕ ಸಂಸ್ಕೃತಿಗಳನ್ನು ಪ್ರತಿಬಿಂಬಿಸುವ ಕೇಂದ್ರಗಳಾಗಿ ಜಾತ್ರೆಗಳು ಕಾಣಿಸುತ್ತಿವೆ. ಜಾತ್ರೆಗಳು ತನ್ನದೇಯಾದ ಚೌಕಟ್ಟಿನ ಪರಿಧಿಯಿಂದ ಹೊರಬಂದು ವಿಶಿಷ್ಟವಾದ ಆಯಾಮವನ್ನು ಕಾಲಕ್ಕೆ ತಕ್ಕಂತೆ ಬದಲಾವಣೆಯನ್ನು ಪಡೆದುಕೊಂಡಿದೆ.

ಸಿರಾ ತಾಲ್ಲೂಕಿನ ಜಾತ್ರಾ ಮಹೋತ್ಸವಗಳು ಇಂದು ಕ್ಷೇತ್ರಕಾರ್ಯದ ಅಧ್ಯಯನದ ಶಿಸ್ತಾಗಿ ಸಂಶೋಧನೆಯ ಮೂಲಕ ಮಾಹಿತಿಯನ್ನು ಕ್ರೂಢೀಕರಿಸುವ ನಿಟ್ಟಿನಟ್ಟಿ ಕ್ಷೇತ್ರಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಎಷ್ಟೋ ಮಹತ್ವದ ವಿಚಾರಗಳು

ನಮ್ಮ ಜನಪದರಿಂದ ನಶಿಸಿಹೋಗುವ ಮೊದಲೇ ಮಾಹಿತಿಯನ್ನು ಸಂಗ್ರಹಿಸಿ ಮುಂದಿನ ಪೀಳಿಗೆಯವರಿಗೆ ಒದಗಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಬೇಕು.

ಸಿರಾ ತಾಲ್ಲೂಕಿನ ಐದು ಹೋಬಳಿಯ 470 ಕ್ಕಿಂತ ಹೆಚ್ಚು ಗ್ರಾಮಗಳನ್ನು ಒಳಗೊಂಡಂತಹ ಬಹುಮುಖಿ ಸಂಸ್ಕೃತಿಯ ನೆಲೆಯಾಗಿದೆ, ಜಾಗತೀಕರಣ, ಖಾಸಗೀಕರಣ, ಉದಾರೀಕರಣದ ಈ ಸಂದರ್ಭದಲ್ಲಿ ಜಾತ್ರೆಗಳು ತನ್ನದೇಯಾದ ವಿಶೇಷ ಸಂಸ್ಕೃತಿಯನ್ನು ಬೆಳೆಸಿಕೊಂಡು-ಉಳಿಸುತ್ತಾ ಬಂದಿದೆ.


ಕಂಪ್ಯೂಟರ್ ಯುಗದ ಗಾಳಿ ಬೀಸಿದಂತೆ ಅನೇಕ ಅಳಿವು –ಉಳಿವಿಕೆಯ ವಿಚಾರಗಳು ಕಾಣಸಿಗುತ್ತವೆ. ಇಂದಿನ ವಾಸ್ತವಕ್ಕೆ ಹಿಂದಿನ ಘಟನೆಗಳೆಲ್ಲಾ ಪ್ರಸ್ತುವಾಗಿವೆ ಎನಿಸುತ್ತದೆ. ಆಗಾಗಿ ಈ ಪ್ರಬಂಧದ ಮೂಲಕ ಅಳಿವೆ ಹಂಚಿನಲ್ಲಿದ್ದ ಘಟನೆಗಳನ್ನು ದಾಖಲಿಸಲು ಸಾಧ್ಯವಾಗಿದೆ. ಕಡಲಿನ ಆಳ-ಅಗಲವನ್ನು ಪೂರ್ಣವಾಗಿ ಗುರುತಿಸಲು ಸಾಧ್ಯವಾಗದಿರಲು ಅನೇಕ ಕಾರಣಗಳಿವೆ ಅದು ಗೌಣವಾಗಿಸುತ್ತಾ ಸಂಶೋಧನೆಗೆ ಇನ್ನೂ ಹೆಚ್ಚು ಒತ್ತನು ನೀಡಬೇಕಾಗುತ್ತದೆ.

# ಅನುಬಂಧ

# 1. ಶಿರಾ ತಾಲ್ಲೂಕಿನ ನಕ್ಷೆ



# 2. ಶಿರಾ ತಾಲ್ಲೂಕಿನ ಪ್ರಮುಖ ಜಾತ್ರಾ ಸ್ಥಳಗಳ ನಕ್ಷೆ



# 3. ಕ್ಷೇತ್ರಕಾರ್ಯ ಸಂದರ್ಭದಲ್ಲಿ ತೆಗೆದ ಛಾಯಾಚಿತ್ರಗಳು



ತಾವರೆಕೆರೆ ಶ್ರೀ ಬಂಡಿ ರಂಗನಾಥಸ್ವಾಮಿ ಕಲ್ಲುಗಾಲಿ ರಥೋತ್ಸವ



ಮರಡಿಗುಡ್ಡದ ಶ್ರೀ ರಂಗನಾಥ ಸ್ವಾಮಿ ಜಾತ್ರೆಯ ಕಲ್ಲುಗಾಲಿ ರಥೋತ್ಸವ



ಪಟ್ಟನಾಯಕನಹಳ್ಳಿ ಶ್ರೀ ಗುರುಗುಂಡ ಬ್ರಹ್ಮೇಶ್ವರ ಸ್ವಾಮಿ



ಕಾಳಾಪುರದ ಶ್ರೀ ಲಕ್ಷ್ಮೀರಂಗನಾಥ ಸ್ವಾಮಿ ಉತ್ಸವ ಮೂರ್ತಿ



ಹಾಲೇನಹಳ್ಳಿ ಶ್ರೀ ಜುಂಜಪ್ಪಸ್ವಾಮಿ ಜಾತ್ರೆಯ ಉತ್ಸವ ಮೂರ್ತಿ



ಯಾದಲಡುಕು ಶ್ರೀರಂಗನಾಥಸ್ವಾಮಿ ದೇವಸ್ಥಾನ



ಹಾಲೇನಹಳ್ಳಿ ಜುಂಜಪ್ಪಸ್ವಾಮಿಯ "ಪಟ್ಟದ ಬಸವ"



ವೀರಬೊಮ್ಮಣ್ಣನಹಳ್ಳಿ ದಿಬ್ಬದ ವೀರಬೊಮ್ಮಣ್ಣ ಸ್ವಾಮಿಸನ್ನಿದಿಯ ವೀರಗಲ್ಲುಗಳು



ಸೋಮಗಳ ಕುಣಿತ



ಸಾಕ್ಷಿಹಳ್ಳಿ ಮಣ್ಣಮ್ಮದೇವಿಯ ಉತ್ಸವ ಮೂರ್ತಿ



ಚಿಕ್ಕನಹಳ್ಳಿಯ ಮಾರಮ್ಮ ದೇವಿಗೆ ಆರತಿ ಮಹೋತ್ಸವ



ಜಾತ್ರಾ ಸಂದರ್ಭದಲ್ಲಿ ದೇವರಿಗೆ ಆರತಿ ಉತ್ಸವಗಳು



ಸುಗ್ಗಿಯ ಕಾಲದಲ್ಲಿ "ಕಣದ ರಾಶಿಪೂಜೆ"



ಜಾತ್ರಾ ಸಮಯದ ಮೊದಲ ಬಹುಮಾನ ಪಡೆದ ರಾಸುಗಳು



ಜಾತ್ರಾ ಸಮಯದಲ್ಲಿ "ಮಡಿಕೆ-ಕುಡಿಕೆ" ಮಾರಾಟ



ಜಾತ್ರೆಯಲ್ಲಿ ಅಂಗಡಿ ಮಳಿಗೆಗಳ ನೋಟ



ಜಾತ್ರಾ ಸಮಯದಲ್ಲಿ ಭಕ್ತರಿಗೆ "ಅನ್ನ ಸಂತರ್ಪಣೆ" ಕಾರ್ಯಕ್ರಮ



ಉಂಡೆ-ಮಂಡೆ ಕಾರ್ಯಕ್ರಮದಲ್ಲಿ "ಭರ್ಜರಿ ಬಾಡೂಟ"



ಕ್ಷೇತ್ರ ಕಾರ್ಯ ಸಂದರ್ಭದಲ್ಲಿ ಶ್ರೀ ರಾಮ ಚಂದ್ರಪ್ಪನವರೊಂದಿಗೆ ಸಂದರ್ಶನ



ಕ್ಷೇತ್ರ ಕಾರ್ಯ ಸಂದರ್ಭದಲ್ಲಿ "ನಿಂಗಜ್ಜಿ"ಯವರೊಂದಿಗೆ ಸಂದರ್ಶನ

# ಆಧಾರ ಗ್ರಂಥಗಳು


1) ಕರ್ನಾಟಕ ರಾಜ್ಯ ಗೆಝೆಟೀಯರ್ — ಕರ್ನಾಟಕ ಸರ್ಕಾರ

2) ಕರ್ನಾಟಕ ಜಾನಪದ ವಿಶ್ವಕೋಶ — ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು

3) ಕನ್ನಡ ವಿಶ್ವಕೋಶ — ಕನ್ನಡ ಅಧ್ಯಯನ ಸಂಸ್ಥೆ ಮೈಸೂರು

4) ಕರ್ನಾಟಕ ಜಾತ್ರೆಗಳು — ಡಾ॥ ಸಿ.ಎಸ್.ಶಿವಕುಮಾರಸ್ವಾಮಿ

5) ಕರ್ನಾಟಕ ಜನಪದ ಕಲೆಗಳು — ಶ್ರೀ ಗೊ.ರು.ಚನ್ನಬಸಪ್ಪ.

6) ಜಾನಪದ ಅಧ್ಯಯನ — ಡಾ॥ ದೇ.ಜವರೇಗೌಡರು.

7) ತುಮಕೂರು ಜಿಲ್ಲಾ ದರ್ಶನ — ಸಂ.ಸಿ.ಎಸ್.ಭಾಸ್ಕರಪ್ಪ

8) ಎಪಿಗ್ರಾಫಿಯಾ ಕರ್ನಾಟಕ — ಸಂಪುಟ ತುಮಕೂರು ಜಿಲ್ಲೆ.

# 1. ಕ್ಷೇತ್ರ ಕಾರ್ಯದಲ್ಲಿ ಮಾಹಿತಿ ನೀಡಿದವರು

| ಕ್ರಸಂ ಮಾಹಿತಿದಾರರಹೆಸರು | ಸ್ಥಳ | ವಯಸ್ಸು |
|---|---|---|
| 1) ಶ್ರೀಚಂದ್ರಣ್ಣನವರು | ಪಟ್ಟನಾಯಕನ ಹಳ್ಳಿ | 65 ವರ್ಷಗಳು |
| 2) ಶ್ರೀ ಪಾಲಿರಂಗಯ್ಯನವರು | ಮಾಗೋಡು | 68 ವರ್ಷಗಳು |
| 3) ಶ್ರೀಕೇಶವಮೂರ್ತಿರವರು | ತಾವರೇಕೆರೆ | 65 ವರ್ಷಗಳು |
| 4) ಶ್ರೀ ದೇವರಾಜ ಭಟ್ಟರು | ಕಾಳಾಪುರ | 75 ವರ್ಷಗಳು |
| 5) ಶ್ರೀ ನಾಗೇಶ್‌ರವರು | ಗಿಡಗನಹಳ್ಳಿ | 54 ವರ್ಷಗಳು |
| 6) ಶ್ರೀ ಚಿದಾನಂದಾರವರು | ಯಾದಲಡುಕು | 65 ವರ್ಷಗಳು |
| 7) ಶ್ರೀ ರಾಮಚಂದ್ರಪ್ಪನವರು | ವೀರ ಬೊಮ್ಮನಹಳ್ಳಿ | 75 ವರ್ಷಗಳು |
| 8) ಶ್ರೀಜುಂಜಣ್ಣನವರು | ಹಾಲೇನಹಳ್ಳಿ | 70 ವರ್ಷಗಳು |
| 9) ಶ್ರೀ ಪಾತಯ್ಯನವರು | ಸಾಕ್ಷೀಹಳ್ಳಿ | 62 ವರ್ಷಗಳು |
| 10)ಶ್ರೀ ರಾಮಣ್ಣನವರು | ಮರಡಿಗುಡ್ಡ | 55 ವರ್ಷಗಳು |